


# ಶ್ರೀ ಅರವಿಂದರ ಬೋಧನೆ, ಆಚರಣೆಯ ವಿಧಾನ ಮತ್ತು ಪ್ರಾರಂಭಿಸುವುದು ಹೇಗೆ?

ಅಖಿಲ ಭಾರತ ಪತ್ರಿಕೆ – ಅಕ್ಟೋಬರ್ 2014

ಬೆಲೆ : 15/-



*Our best friend is he who loves us*
*in the best of ourselves and yet*
*does not ask us to be other than we are.*

- The Mother

# ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

## ಪರಿವಿಡಿ

### "ಶ್ರೀ ಅರವಿಂದರ ಬೋಧನೆ, ಆಚರಣೆಯ ವಿಧಾನ ಮತ್ತು ಪ್ರಾರಂಭಿಸುವುದು ಹೇಗೆ?"

**ಭಾಗ – I : ಮೂಲ ಶಬ್ದಗಳ ವಿವರಣೆ**

**ಅನು : ಡಾ. ಕೆ.ಎಸ್. ಆಮೂರ**

ಶ್ರೀ ಅರವಿಂದರ ಮಣಿಹ (mission) ಕುರಿತು ಶ್ರೀಮಾತೆಯವರು 3
ಉತ್ಕ್ರಾಂತಿ – ಹಂತ ಹಂತವಾಗಿ ಆಗುವ ಭಗವಂತನ ತೆರೆದಿರಿಸಿಕೊಳ್ಳುವಿಕೆ 4
ಪ್ರಕಟಣೆ – ಭಗವಂತನ ದೇಹ 6
ಜೀವನದ ದೈವೀಕರಣ 8
ಭಗವಂತ ಹಾಗೂ ಅತಿಮಾನಸ 9
ಚೈತ್ಯಸತ್ತೆ 11

**ಭಾಗ – II : ಶ್ರೀ ಅರವಿಂದರ ಬೋಧನೆ ಹಾಗೂ ಆಚರಣೆಯ ವಿಧಾನ**

ಶ್ರೀ ಅರವಿಂದರ ಬೋಧನೆ 14
ಶ್ರೀ ಅರವಿಂದರ ಬೋಧನೆಯ ಹೊಸತನ 19
ಅತಿಮಾನಸದ ದ್ವಾರಗಳನ್ನು ಪೃಥ್ವಿ ಪ್ರಜ್ಞೆಗೆ ತೆರೆದಿರಿಸುವುದು 22
ಪರಮೋಚ್ಚ ವಿಜಯಕ್ಕಾಗಿ ನಿಬಂಧನೆಗಳು ಹಾಗೂ ಶ್ರೇಷ್ಠ ರೂಪ ಪರಿವರ್ತನೆ 23
ಮಾನವನ ಪರಿಪೂರ್ಣತೆಗಾಗಿ ಕೊನೆಯ ಭರವಸೆ ಆಧ್ಯಾತ್ಮಿಕತೆಯಲ್ಲಿರುತ್ತದೆ 25
ಆಚರಣೆಯ ವಿಧಾನಗಳು – ಮೂರು ಮುಖಗಳು 26
ಭಗವಂತನಿಗೆ ಸ್ವ–ಸಮರ್ಪಣ – ಏಕೈಕ ಪರಿಣಾಮಕಾರಿ ಸಾಧನ 32
ಸನಾತನನಾದವನಿಗೆ ಸಮಗ್ರ ಸ್ವ–ಸಮರ್ಪಣ 34

**ಭಾಗ – III : ಪ್ರಾರಂಭ ಮಾಡುವುದು ಹೇಗೆ?**

ಅವಶ್ಯವಾದ ಮೊದಲ ಎರಡು ವಿಷಯಗಳು 36
ನಿಜವಾದ ಕೈಕೋಲು ನಂಬಿಕೆಯ ಅಗ್ನಿಯಿಂದ ತಯಾರಾಗಿರಬೇಕು 37
ಶ್ರೀಮಾತೆಯವರಿಗೆ ತೆರೆದಿರಿಸಿಕೊಳ್ಳಿರಿ: ಶ್ರೀಮಾತೆಯವರಲ್ಲಿ ಆಶ್ರಯ ಪಡೆಯಿರಿ 40
ಮೊದಲ ಚಲನೆ – ಆಂತರೀಕರಿಸಿಕೊಳ್ಳುವಿಕೆ 46
ನಿಮ್ಮೊಳಗಿರುವ ದೈವತ್ವವನ್ನು ಶೋಧಿಸಿರಿ 47
ನೀವು ಕೈಕೊಳ್ಳುವ ಕಾರ್ಯ ಯೋಗದ ಭಾಗವಾಗಿರುತ್ತದೆ 50
ಸಾಧನೆಗೆ ಸಹಾಯಕವೆಂದು ಪುಸ್ತಕಗಳನ್ನು ಓದುವುದು 51
ನೀವು ತಿಳಿದುಕೊಂಡದ್ದನ್ನು ಆಚರಣೆಯಲ್ಲಿ ತರಬೇಕು 53
**ವಾರ್ತಾಪತ್ರ** 56

# ಭಾಗ – I : ಮೂಲ ಶಬ್ದಗಳ ವಿವರಣೆ

## ಶ್ರೀ ಅರವಿಂದರ ಮಣಿಹ(mission) ಕುರಿತು ಶ್ರೀಮಾತೆಯವರು

ಪ್ರಕೃತಿಯಲ್ಲಿ ಆರೋಹಣ ಮಾಡುತ್ತಿರುವ ಉತ್ಕ್ರಾಂತಿಯಿದೆ. ಅದು ಕಲ್ಲಿನಿಂದ ಸಸ್ಯದವರೆಗೆ, ಸಸ್ಯದಿಂದ ಪಶುವಿನವರೆಗೆ, ಪಶುವಿನಿಂದ ಮನುಷ್ಯನವರೆಗೆ ಸಾಗುತ್ತದೆ. ಮನುಷ್ಯ, ಸದ್ಯದ ಕ್ಷಣದಲ್ಲಿ, ಆರೋಹಣ ಮಾಡುತ್ತಿರುವ ಉತ್ಕ್ರಾಂತಿಯ ಶಿಖರದಲ್ಲಿ ಕೊನೆಯ ಮೆಟ್ಟಿಲಾಗಿರುವನು, ಅವನು ತಾನೇ ಕೊನೆಯಲ್ಲಿ ಬರುವವನೆಂದು ಯೋಚಿಸುತ್ತಾನೆ ಮತ್ತು ತನಗಿಂತ ಶ್ರೇಷ್ಠರಾದವರು ಬೇರೆ ಯಾರೂ ಇರುವುದು ಸಾಧ್ಯವಿಲ್ಲ ಎಂದು ನಂಬುತ್ತಾನೆ. ಆ ವಿಷಯದಲ್ಲಿ ಅವನು ತಪ್ಪು ಮಾಡಿದ್ದಾನೆ. ಅವನ ಭೌತಿಕ ಸ್ವಭಾವದಲ್ಲಿ ಅವನು ಬಹುಮಟ್ಟಿಗೆ ಇಡಿಯಾಗಿ ಪಶುವೇ ಆಗಿದ್ದಾನೆ, ಯೋಚಿಸುವ ಹಾಗೂ ಮಾತನಾಡುವ ಪಶು, ಆದಾಗ್ಯೂ ಅವನ ಭೌತಿಕ ರೂಢಿಗಳಲ್ಲಿ ಹಾಗೂ ಹುಟ್ಟುಗುಣಗಳಲ್ಲಿ ಪಶು ಸ್ವರೂಪದವನೇ ಆಗಿದ್ದಾನೆ. ನಿಸ್ಸಂಶಯವಾಗಿ ಪ್ರಕೃತಿ ಇಂತಹ ಅಪರಿಪೂರ್ಣ ಪರಿಣಾಮದಿಂದ ತೃಪ್ತಿಯಿಂದಿರಲು ಸಾಧ್ಯವಿಲ್ಲ, ಅದು ಮನುಷ್ಯ ಪಶುವಿಗೆ ಇದ್ದ ಹಾಗೆ, ಮನುಷ್ಯನಿಗಿರುವ ಸತ್ತೆಯೊಂದನ್ನು ಹೊರತರಲು ಪ್ರಯತ್ನಿಸುತ್ತದೆ. ಆ ಸತ್ತೆ ಅದರ ಬಾಹ್ಯ ರೂಪದಲ್ಲಿ ಮನುಷ್ಯನಿರುವ ಹಾಗೆ ಉಳಿದುಕೊಂಡರೂ ಪ್ರಜ್ಞೆ ಮಾನಸಿಕವಾದದ್ದಕ್ಕಿಂತ ಹೆಚ್ಚು ಎತ್ತರದ ಮೇಲೆ, ಅಜ್ಞಾನಕ್ಕೆ ಅದು ಹೊಂದಿರುವ ದಾಸ್ಯದಿಂದ ಬಹಳ ಮೇಲೆ ಇರುವುದು.

ಶ್ರೀ ಅರವಿಂದರು ಪೃಥ್ವಿಯ ಮೇಲೆ ಈ ಸತ್ಯವನ್ನು ಬೋಧಿಸುವುದಕ್ಕಾಗಿ ಬಂದರು. ಮಾನಸಿಕ ಪ್ರಜ್ಞೆಯಲ್ಲಿರುವ ಮನುಷ್ಯ ಕೇವಲ ಸಂಕ್ರಮಣ ಸ್ಥಿತಿಯಲ್ಲಿರುವ ಸತ್ತೆ, ಆದರೆ ಅವನಿಗೆ ಹೊಸ ಪ್ರಜ್ಞೆ ಎಂದರೆ ಋತಚಿತ್ (ಸತ್ಯಪ್ರಜ್ಞೆ) ಹೊಂದುವ ಮತ್ತು ಪರಿಪೂರ್ಣವಾಗಿ ಸಾಮರಸ್ಯದಲ್ಲಿರುವ, ಒಳ್ಳೆಯ, ಸುಂದರವಾದ, ಸಂತೋಷದಿಂದಿರುವ ಮತ್ತು ಸಂಪೂರ್ಣ ಪ್ರಜ್ಞೆಯಿಂದಿರುವ ಜೀವನವನ್ನು ಜೀವಿಸುವ ಸಾಧ್ಯತೆ ಇದೆ. ಪೃಥ್ವಿಯ ಮೇಲಿನ ತಮ್ಮ ಇಡೀ ಜೀವಿತ ಕಾಲದಲ್ಲಿ ಅವರು ತಮ್ಮೆಲ್ಲ ಸಮಯವನ್ನು, ತಮ್ಮಲ್ಲಿ, ಅತಿಮಾನಸವೆಂದು ಕರೆದ ಪ್ರಜ್ಞೆಯನ್ನು ಸ್ಥಾಪಿಸುವುದಕ್ಕಾಗಿ ಹಾಗೂ ತಮ್ಮ ಸುತ್ತ ಒಟ್ಟುಗೂಡಿದವರಿಗೆ ಅದನ್ನು ಸಿದ್ಧಿಸಿಕೊಳ್ಳುವುದಕ್ಕೆ ಸಹಾಯ ನೀಡುವುದರಲ್ಲಿ ಕಳೆದರು.

ಈಗ ಎಲ್ಲವೂ ನಿಮ್ಮ ಸಂಕಲ್ಪ ಹಾಗೂ ನಿಷ್ಕಾಪಟ್ಯದ ಮೇಲೆ ಅವಲಂಬಿಸಿದೆ.



ಸರ್ವಸಾಧಾರಣ ಮಾನವ ಕುಲಕ್ಕೆ ಸೇರಿರುವುದನ್ನು, ಕೇವಲ ಉತ್ಕ್ರಾಂತಿ ಹೊಂದಿದ ಪಶುವಾಗಿರುವುದನ್ನು ಇನ್ನು ಮುಂದೆ ನೀವು ಬಯಸದೆ ಇರುವ ಸಂಕಲ್ಪ ನಿಮ್ಮಲ್ಲಿದ್ದರೆ; ಶ್ರೀ ಅರವಿಂದರ ಅತಿಮಾನಸ ಆದರ್ಶ ಸಿದ್ಧಿಸಿಕೊಳ್ಳುವ ಮನುಷ್ಯರಾಗಲು, ಪೃಥ್ವಿಯ ಮೇಲೆ ಹೊಸ ಮತ್ತು ಉಚ್ಚತರ ಜೀವನವನ್ನು ಜೀವಿಸಬೇಕೆಂದಿದ್ದರೆ, ಅದಕ್ಕಾಗಿ ಅವಶ್ಯವಿರುವ ಎಲ್ಲ ಸಹಾಯವನ್ನು ಇಲ್ಲಿ ಕಂಡುಕೊಳ್ಳಬಲ್ಲಿರಿ.

**(CWM, 12/116–17)** **– ಶ್ರೀಮಾತೆ**

*

## ಉತ್ಕ್ರಾಂತಿ –
## ಹಂತ ಹಂತವಾಗಿ ಆಗುವ ಭಗವಂತನ ತೆರೆದಿರಿಸಿಕೊಳ್ಳುವಿಕೆ

ಭೌತಿಕ ಪ್ರಜ್ಞೆಯ ಸಾಂದ್ರತೆಯಿಂದ ಹೊರಗೆ ದಿವ್ಯಾತ್ಮನ ಪ್ರಗತಿಪರ ತೆರೆದಿರಿಸಿಕೊಳ್ಳುವಿಕೆ ಮತ್ತು ತೋರಿಕೆಯಲ್ಲಿರುವ ಈ ಪಶು ಸತ್ತೆಯಿಂದ ಭಗವಂತನ ಸ್ವ–ತೆರೆದುಕೊಳ್ಳುವಿಕೆ ಉತ್ಕ್ರಾಂತಿಯಾಗಿದೆ.

*

ಎಲ್ಲ ಉತ್ಕ್ರಾಂತಿ ಸಾರದಲ್ಲಿ ಪ್ರಜ್ಞೆಯ ಶಕ್ತಿಯನ್ನು ಪ್ರಕಟಗೊಂಡ ಸತ್ತೆಯಲ್ಲಿ ಉಚ್ಚವಾಗಿಸುವುದಾಗಿದೆ, ಅದರಿಂದಾಗಿ ಆ ಸತ್ತೆಯನ್ನು ಇನ್ನೂ ಪ್ರಕಟವಾಗದೆ ಇರುವುದರಲ್ಲಿ ಹೆಚ್ಚಿನ ಗಾಢತೆಯಿಂದ ಎತ್ತಿ ಹಿಡಿಯಬಹುದಾಗಿದೆ, ಎಂದರೆ ಭೌತದ್ರವ್ಯದಿಂದ ಪ್ರಾಣದಲ್ಲಿ, ಪ್ರಾಣದಿಂದ ಮನಸ್ಸಿನಲ್ಲಿ ಮತ್ತು ಮನಸ್ಸಿನಿಂದ ಆತ್ಮದಲ್ಲಿ ಈ ಎತ್ತಿ ಹಿಡಿಯುವಿಕೆ ಇದೆ.

*

ಎಲ್ಲ ಉತ್ಕ್ರಾಂತಿ, ಏಕೈಕನಾದವನು ತನಗಾಗಿಯೇ ಅಚೇತನದಿಂದ ಹೊರಗೆ, ಅನೇಕವಾದವುಗಳಿಂದ ಸ್ಪಷ್ಟವಾಗಿ, ಪ್ರಗತಿಪರ ಸ್ವ–ತೆರೆದಿರಿಸಿಕೊಳ್ಳುವಿಕೆಯನ್ನು ಅವಿದ್ಯೆಯ ಮೂಲಕ ಸ್ವ–ಅರಿವುಳ್ಳ ಪರಿಪೂರ್ಣತೆಯತ್ತ ಕೈಕೊಳ್ಳುವುದಾಗಿದೆ.

*

ಉತ್ಕ್ರಾಂತಿ, ಅದರ ಸಾರದಲ್ಲಿ, ದೇಹ ಹೆಚ್ಚು ಹೆಚ್ಚಾಗಿ ಸಂಘಟಿತಗೊಳ್ಳುವಂತೆ ಇಲ್ಲವೆ ಜೀವನ ಹೆಚ್ಚು ಪರಿಣಾಮಕಾರಿಯಾಗುವಂತೆ ಅಭಿವೃದ್ಧಿಪಡಿಸುವುದಲ್ಲ. ಆ

ವಿಷಯಗಳು ಬಾಹ್ಯ ಪರಿಸ್ಥಿತಿಯ ಯಾಂತ್ರಿಕತೆಗೆ ಸೇರಿದವುಗಳಾಗಿವೆ. ಭೌತದ್ರವ್ಯದಲ್ಲಿ ಅರೆ ನಿದ್ರೆಯಲ್ಲಿರುವಂತಾಗಿರುವ ದೈವೀ ಪ್ರಜ್ಞೆ ಎಚ್ಚತ್ತುಕೊಳ್ಳುವುದಕ್ಕೆ, ಮುಕ್ತವಾಗುವುದಕ್ಕೆ ಕೈಕೊಳ್ಳುತ್ತಿರುವ ಹೋರಾಟ ಉತ್ಕ್ರಾಂತಿಯಾಗಿದೆ, ಅದು ಎಚ್ಚತ್ತುಕೊಂಡು ಮುಕ್ತವಾಗಬೇಕಾಗಿದೆ, ತಾನೇ ತನ್ನನ್ನು ಹಾಗೂ ಗರಿಷ್ಠ ಮಿತಿಯ ಅತ್ಯಂತ ವಿಸ್ತಾರವಾದ ಸಾಧ್ಯತೆಗಳನ್ನು ಅವುಗಳ ಕೊನೆಯ ಮತ್ತು ಅತ್ಯುಚ್ಚ ಮಟ್ಟದವರೆಗೆ ಕಂಡುಕೊಳ್ಳಲು ಹಾಗೂ ವಶದಲ್ಲಿಟ್ಟುಕೊಳ್ಳಲು ದೈವೀ ಪ್ರಜ್ಞೆ ನಡೆಸಬೇಕಾದ ಹೋರಾಟವಾಗಿದೆ. ದೈವೀ ರೂಪದಲ್ಲಿ ಮತ್ತು ದೈವೀ ಶಕ್ತಿಯಲ್ಲಿ ರಹಸ್ಯವಾಗಿರುವ ತನ್ನನ್ನು ತೆರೆದುತೋರಿಸುತ್ತಿರುವ ದಿವ್ಯಾತ್ಮದ ವಿಮೋಚನೆ ಉತ್ಕ್ರಾಂತಿಯಾಗಿದೆ. ಆ ಉತ್ಕ್ರಾಂತಿಯಲ್ಲಿ ದೇವ ಪ್ರಮುಖನ ನಿಧಾನಗತಿಯ ಸಂಭೂತಿಯಿದೆ, ದಿವ್ಯಾತ್ಮದ ಬೆಳವಣಿಗೆಯಿದೆ.

ಈ ಉತ್ಕ್ರಾಂತಿಯಲ್ಲಿ ಮನಸ್ಸನ್ನು ಹೊಂದಿದ ಮನುಷ್ಯ ಗುರಿಯೂ ಅಲ್ಲ, ಕೊನೆಯೂ ಅಲ್ಲ, ಸಂಪೂರ್ಣಗೊಳಿಸುವ ಮೌಲ್ಯವೂ ಅವನಲ್ಲ, ಮತ್ತು ಕೊನೆಯ ಪ್ರಾಮುಖ್ಯತೆಯನ್ನು ಪಡೆದವನೂ ಅಲ್ಲ, ಪ್ರಕೃತಿಯ ಈ ಎಲ್ಲ ಪ್ರಯಾಸಕ್ಕೆ ಕಿರೀಟಪ್ರಾಯನಾಗುವುದಕ್ಕೆ ಅವನು ಅತಿ ಚಿಕ್ಕವನು ಮತ್ತು ಅಪರಿಪೂರ್ಣ–ನಾದವನು ಆಗಿದ್ದಾನೆ.

*

ಈ ಗೋಚರ ಹಾಗೂ ತೋರಿಕೆಯ ಜಗತ್ತಿಗೆ ಅತಿಪ್ರಜ್ಞೆಯ ದಿವ್ಯಾತ್ಮ ಅಚೇತನ ಭೌತದ್ರವ್ಯದಲ್ಲಿ ತೊಡಗಿಕೊಂಡಿರುವುದು ರಹಸ್ಯ ಕಾರಣವಾಗಿದೆ. ಪ್ರಥ್ವಿಯ ಒಗಟಿಗೆ ಬೀಗದ ಕೈಯ ಹಾಗಿರುವ ಶಬ್ದವು ಅಡಗಿದ, ಮಿತಿರಹಿತ ಪ್ರಜ್ಞೆಯ ಹಾಗೂ ಸಾಮರ್ಥ್ಯದ ಉತ್ಕ್ರಾಂತಿಯಾಗಿದೆ, ಈ ಉತ್ಕ್ರಾಂತಿ ಕ್ರಮೇಣ ಆಗುವಂತಹದು, ತೋರಿಕೆಗೆ ಜಡವಾದ ಆದಾಗ್ಯೂ ಪ್ರಕೃತಿಯ ಗೋಚರ–ವಾಗದಷ್ಟು ಸೂಕ್ಷ್ಮ ಶಕ್ತಿಯ ಉಗ್ರ ಹೊರದೂಡುವಿಕೆಯಿಂದ ಆಗುವಂತಹದು. ಶ್ರೇಷ್ಠ ದೈವತ್ವ ತಾನಾಗಿ ಆಯ್ದುಕೊಂಡ ನಿವಾಸ ಸ್ಥಾನ ಪೃಥ್ವಿ ಜೀವನದ್ದಾಗಿದೆ, ಅವನ ಅನಂತಕಾಲದ ಸಂಕಲ್ಪವು ಕುರುಡಾದ ಸೆರೆಮನೆಯಂತಿರುವ ಅದನ್ನು ಭವ್ಯ ಮಹಲನ್ನಾಗಿ ಮತ್ತು ಉಚ್ಚ ಸ್ವರ್ಗವನ್ನು ತಲುಪುವ ದೇವಾಲಯವನ್ನಾಗಿ ಮಾಡುವುದಿದೆ.

*



ಅತಿಮನಸ್ಸು, ಒಳಗೊಳ್ಳುವ ಹಾಗೂ ಅಭಿವೃದ್ಧಿಪಡಿಸುವ ಬ್ರಹ್ಮನ್‌ನ ವಿಶಾಲ ಸ್ವ–ವಿಸ್ತರಣೆಯಾಗಿದೆ. ದೈವೀ ವಿಚಾರದ ಮೂಲಕ ಅದು ಅಸ್ತಿತ್ವ, ಪ್ರಜ್ಞೆ ಮತ್ತು ದಿವ್ಯಾನಂದಗಳಿರುವ ತ್ರಿತಯೈಕ್ಯ (ಮೂರೂ ಒಂದರಲ್ಲಿ ಇರುವ) ತತ್ವವನ್ನು ಅವುಗಳ ವಿಭಜಿಸಲಾಗದ ಏಕತೆಯಿಂದ ಅಭಿವೃದ್ಧಿಗೊಳಿಸುತ್ತದೆ, ಅದು ಅವುಗಳಲ್ಲಿ ಭಿನ್ನತೆಯನ್ನಿರಿಸುತ್ತದೆ, ಆದರೆ ಅವುಗಳನ್ನು ವಿಭಜಿಸುವುದಿಲ್ಲ. ಅದು ತ್ರಿಮೂರ್ತಿತ್ವ (Trinity) ವನ್ನು ಸ್ಥಾಪಿಸುತ್ತದೆ. ಅದು ಅಭಿವೃದ್ಧಿಯ, ಉತ್ಕ್ರಾಂತಿಯ, ಸುಸ್ಪಷ್ಟ–ವಾದದ್ದನ್ನಾಗಿ ಮಾಡುವ ಸಾಮರ್ಥ್ಯವನ್ನು ತನ್ನ ವಶದಲ್ಲಿಟ್ಟುಕೊಂಡಿರುತ್ತದೆ ಮತ್ತು ಆ ಸಾಮರ್ಥ್ಯ ತೊಡಗಿಕೊಳ್ಳುವಿಕೆ (involution) ಯ ಆವರಿಸಿಕೊಳ್ಳುವಿಕೆಯ ಹಾಗೂ ಅಂತರ್ನಿಹಿತ(implicit)ವಾದದ್ದನ್ನಾಗಿ ಮಾಡುವ ಸಾಮರ್ಥ್ಯವನ್ನು ತನ್ನೊಡನೆ ಕೊಂಡೊಯ್ಯುತ್ತದೆ. ಒಂದರ್ಥದಲ್ಲಿ ಇಡೀ ಸೃಷ್ಟಿ ಎರಡು ತೊಡಗಿಕೊಳ್ಳುವಿಕೆಗಳ ನಡುವಿರುವ ಒಂದು ಚಲನೆಯೆಂದು ಹೇಳಬಹುದು. ದಿವ್ಯಾತ್ಮನಲ್ಲಿ ಎಲ್ಲವೂ ತೊಡಗಿಕೊಂಡಿರುತ್ತದೆ ಮತ್ತು ಅದರೊಳಗಿಂದ ಎಲ್ಲವೂ ಕೆಳಮುಖವಾಗಿ ಭೌತದ್ರವ್ಯವಿರುವ ಧ್ರುವದತ್ತ ಉತ್ಕ್ರಾಂತಿ ಹೊಂದುತ್ತದೆ, ಆ ಭೌತದ್ರವ್ಯದಲ್ಲಿ ಎಲ್ಲವೂ ತೊಡಗಿಕೊಂಡಿರುತ್ತದೆ ಮತ್ತು ಅದರೊಳಗಿಂದ ಎಲ್ಲವೂ ಮೇಲ್ಮುಖವಾಗಿ ದಿವ್ಯಾತ್ಮನ ಇನ್ನೊಂದು ಧ್ರುವದತ್ತ ಉತ್ಕ್ರಾಂತಿ ಹೊಂದುತ್ತದೆ.

**(CWSA, 12/334, 22/754–55, 12/219, 166, 161; 21/137)** – ಶ್ರೀ ಅರವಿಂದರು

*

ಮಬ್ಬಾದ ಕಲ್ಲಿನಿಂದ ಮನಸ್ಸಿನವರೆಗೆ ಮೇಲೇರಿ ಹೋಗುವ ಓ ನೀನು
ಇನ್ನೂ ಜಯಿಸಲಾಗಿರದ ಪವಾಡ ಸದೃಶ ಶಿಖರಗಳನ್ನು ಈಗ ಎದುರಿಸು.

**(CWSA, 2/595)** – ಶ್ರೀ ಅರವಿಂದರು

*

## ಪ್ರಕಟಣೆ – ಭಗವಂತನ ದೇಹ

ಅಸ್ತಿತ್ವ ಅಕಸ್ಮಾತ್ತಾದ ಸಾಧನೆಯಲ್ಲ, ಗೊತ್ತುಗುರಿಯಿರದ, ಯಾರಿಂದಲೂ ಕೈಕೊಂಡಿರದ ಸೃಷ್ಟಿಯಲ್ಲ, ಕಾರಣ ಹೇಳಲಾಗದೆ ಸಂಭವಿಸಿದ ವಿಷಯವಲ್ಲ. ಅದು ತನ್ನಲ್ಲಿ ದೈವೀ ಶಬ್ದವನ್ನು ಕೊಂಡೊಯ್ಯುತ್ತದೆ, ಅವಿತುಕೊಂಡ ದೈವೀ ಸಾನ್ನಿಧ್ಯದೊಂದಿಗೆ ತುಂಬಿಕೊಂಡಿದೆ.

ಅಸ್ತಿತ್ವ ಹೇಗೋ ಬಂದ ಮತ್ತು ಕೀಳುಮಟ್ಟದ ಚಲನೆಯನ್ನು ಯಾವುದೇ ಅರ್ಥ ಇಲ್ಲವೆ ಉದ್ದೇಶ ಇಲ್ಲದೆ ಪ್ರಾರಂಭಿಸಿದ ಕುರುಡು ಯಂತ್ರವಲ್ಲ. ಅಸ್ತಿತ್ವ ವಸ್ತು–ವಿಷಯಗಳ ದೈವೀ ಸತ್ಯವಾಗಿದ್ದು ಪ್ರಕಟಣೆಯ ಕ್ರಮಬದ್ಧ ವಿಧಾನದಿಂದ ತೆರೆದುಕೊಳ್ಳುತ್ತದೆ, ಅದು ತನ್ನದೇ ತೊಡಗಿಕೊಂಡ ದೈವೀ ನೈಜತೆಯ ಉತ್ಕ್ರಾಂತಿಯಾಗಿದೆ.

ಅಸ್ತಿತ್ವ ಒಂದು ಭ್ರಮೆಯಲ್ಲ, ಅಸ್ತಿತ್ವದಲ್ಲಿರಲು ಯಾವ ಕಾರ್ಯ–ಕಾರಣವಿಲ್ಲದ, ಅಸ್ತಿತ್ವದಲ್ಲಿರಲಾಗದ, ಅಸ್ತಿತ್ವದಲ್ಲಿರದ ಆದರೆ ಇದ್ದಂತೆ ತೋರಿಬರುವ ಮಾಯೆಯಲ್ಲ. ಈ ಅದ್ಭುತ ವಿಶ್ವವನ್ನು ಪ್ರಬಲ ದೈವೀನೈಜತೆ ತನ್ನಲ್ಲಿಯೇ ಪ್ರಕಟಿಸುತ್ತದೆ.

*

ಪ್ರಕಟಣೆ ಸನಾತನನ ಒಂದು ಪ್ರಸಂಗವಲ್ಲ, ಅದು ಅವನ ಮುಖ ಹಾಗೂ ದೇಹ, ವೈಭವೋಪೇತವಾದದ್ದು ಹಾಗೂ ನಾಶವಾಗದಂತಹದು, ಅದು ಅವನ ಸಂತೋಷದ ಹಾಗೂ ಸಾಮರ್ಥ್ಯದ ಚಲನೆ.

ಇರುವುದೆಲ್ಲ ಅನಂತನಾದ ಭಗವಂತನ ಪ್ರಕಟಣೆ, ಅದರ ಹೊರತಾಗಿ ವಿಶ್ವ ಅಸ್ತಿತ್ವದಲ್ಲಿರುವುದಕ್ಕೆ ಬೇರೆ ಯಾವ ಕಾರಣವೂ ಇಲ್ಲ.

*

ನಾವು ಆರಾಧಿಸುವ ಭಗವಂತ ಕೇವಲ ದೂರದಲ್ಲಿರುವ ವಿಶ್ವಾತೀತ ದೈವೀ ನೈಜತೆಯಷ್ಟೇ ಅಲ್ಲ, ಆದರೆ ವಿಶ್ವದಲ್ಲಿ ನಮಗೆ ಹತ್ತಿರವಿರುವ, ಅರ್ಧ ಮುಸುಕಿನಲ್ಲಿರುವ ದೈವೀ ಪ್ರಕಟಣೆಯ ಸ್ವರೂಪದವನೂ ಆಗಿದ್ದಾನೆ. ಜೀವನ ದೈವೀ ಪ್ರಕಟಣೆಯ ಕ್ಷೇತ್ರ, ಆ ಪ್ರಕಟಣೆ ಇನ್ನೂ ಪೂರ್ತಿಯಾಗಿಲ್ಲ. ಇಲ್ಲಿ ಜೀವನದಲ್ಲಿ, ಪೃಥ್ವಿಯ ಮೇಲೆ, ದೇಹದಲ್ಲಿ – ಇಹೈವ (ಇಲ್ಲಿಯೇ) ಎಂದು ಉಪನಿಷತ್ ಒತ್ತುಕೊಟ್ಟು ಹೇಳುವ ಹಾಗೆ – ನಾವು ದೇವ ಪ್ರಮುಖನ ಮೇಲಿರುವ ಮುಸುಕನ್ನು ತೆಗೆಯಬೇಕು, ಇಲ್ಲಿ ಅವನ ವಿಶ್ವಾತೀತ ಶ್ರೇಷ್ಠತೆಯನ್ನು, ಪ್ರಕಾಶವನ್ನು, ಮಾಧುರ್ಯವನ್ನು ನಮ್ಮ ಪ್ರಜ್ಞೆಗೆ ಸತ್ಯವಾಗಿರುವಂತೆ ಮಾಡಬೇಕು, ಅದನ್ನು ವಶಪಡಿಸಿಕೊಳ್ಳಬೇಕು, ಸಾಧ್ಯವಿದ್ದಷ್ಟರ ಮಟ್ಟಿಗೆ ಅಭಿವ್ಯಕ್ತಪಡಿಸಬೇಕು.

*



ಮನುಷ್ಯ ಅಭಿವೃದ್ಧಿ ಹೊಂದುತ್ತಿರುವ ಆತ್ಮ, ಆ ಆತ್ಮ ಇಲ್ಲಿ ಮನಸ್ಸು, ಪ್ರಾಣ ಹಾಗೂ ದೇಹಗಳ ರೂಪಗಳಲ್ಲಿ ತನ್ನನ್ನು ಕಂಡುಕೊಳ್ಳಲು, ಸಫಲಗೊಳಿಸಲು ಪ್ರಯತ್ನಪಡುತ್ತಿದೆ.

**(CWSA, 12/218, 219, 23/74, 25/125)** **– ಶ್ರೀ ಅರವಿಂದರು**

*

## ಜೀವನದ ದೈವೀಕರಣ

ನಾವು ಹೇಳುತ್ತಿರುವ ಸ್ವಭಾವದ ಈ ದೈವೀಕರಣ ಒಂದು ರೂಪ ಪರಿವರ್ತನೆಯಾಗಿದೆ, ಒಂದು ಬಗೆಯ ಅತಿಮಾನವತೆಯಲ್ಲಿ ಒಂದು ಬೆಳವಣಿಗೆ ಮಾತ್ರವಲ್ಲ, ಆದರೆ ನಮ್ಮ ಅಜ್ಞಾನಿ ಸ್ವಭಾವದ ಮಿಥ್ಯೆಯಿಂದ ಹೊರಬಂದು ದೈವೀ ಸ್ವಭಾವದಲ್ಲಿ ಬೆಳೆಯುವುದಾಗಿದೆ.

*

ದೈವೀಕರಣ ಮಾನವ ಅಂಶಗಳನ್ನು ನಾಶಮಾಡುವುದಿದೆ ಎಂಬ ಅರ್ಥವನ್ನು ಹೊಂದಿರುವುದಿಲ್ಲ, ಅದು ಆ ಅಂಶಗಳನ್ನು ಕೈಗೆತ್ತಿಕೊಂಡು, ಅವುಗಳಿಗೆ ಅವುಗಳ ಪರಿಪೂರ್ಣತೆಯ ಮಾರ್ಗವನ್ನು ತೋರಿಸಿಕೊಡುವುದು, ಪರಿಶುದ್ಧ ಹಾಗೂ ಪರಿಪೂರ್ಣಗೊಳಿಸುವುದರ ಮೂಲಕ ಅವುಗಳನ್ನು ಅವುಗಳ ಪೂರ್ಣ ಸಾಮರ್ಥ್ಯ ಹಾಗೂ ಆನಂದಗಳತ್ತ ಮೇಲಕ್ಕೆತ್ತುವುದು ಎಂಬ ಅರ್ಥವನ್ನು ಹೊಂದಿದೆ, ಅದರರ್ಥ ಪೃಥ್ವಿಯ ಮೇಲಿನ ಇಡೀ ಜೀವನವನ್ನು ಅದರ ಪೂರ್ತಿ ಸಾಮರ್ಥ್ಯ ಹಾಗೂ ಆನಂದಗಳತ್ತ ಎತ್ತಿ ಹಿಡಿಯುವುದಾಗಿದೆ.

*

ಜೀವನದ ದೈವೀಕರಣವೆಂದರೆ, ವಾಸ್ತವದಲ್ಲಿ, ಜೀವನವನ್ನು ಕಲಾತ್ಮಕ–ವಾದದ್ದನ್ನಾಗಿ ಮಾಡುವುದಾಗಿರುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ಜೀವನದ ಕಲೆ ಅಹಂಕಾರದಿಂದ ಹಾಗೂ ಅಜ್ಞಾನದಿಂದ ಉತ್ಪಾದಿಸಿದ ಏನೋ ಒಂದಾಗಿರುತ್ತದೆ (ಅದು ಕ್ಷುಲ್ಲಕವಾದದ್ದು, ಒರಟಾದದ್ದು ಮತ್ತು ಅಪರಿಪೂರ್ಣವಾದದ್ದಾಗಿರುತ್ತದೆ, ಮನಸ್ಸು, ಪ್ರಾಣಿಕಗಳಿಗೆ ಅಧೀನರಾದ ಸಾಮಾನ್ಯ ಮಾನವರಿಗೆ ಇನ್ನೂ ಹೆಚ್ಚು ಆಕರ್ಷಣೀಯವಾದ ಕೆಳಮಟ್ಟದ ಕಲೆಯ ರೂಪಗಳ ಹಾಗಿರುತ್ತದೆ) ಮತ್ತು ಆಧ್ಯಾತ್ಮಿಕ ಹಾಗೂ ಚೈತ್ಯಾತ್ಮಿಕ ತೆರೆದಿರಿಸಿಕೊಳ್ಳುವಿಕೆ ಹಾಗೂ ಸಂಸ್ಕಾರದ ಮೂಲಕ

ಅದು ಅದರ ನಿಜವಾದ ಪರಿಪೂರ್ಣತೆಯನ್ನು ತಲುಪಬೇಕಾಗಿರುತ್ತದೆ. ಅದರ ಸತ್ತೆ ದೈವೀ ಪ್ರಕಾಶದಲ್ಲಿ ಹಾಗೂ ದೈವೀ ಜ್ವಾಲೆಯಲ್ಲಿ ಮುಳುಗುಹಾಕುವುದರಿಂದಾಗಿ ಅದರಲ್ಲಿರುವ ಭೌತಿಕ ದ್ರವ್ಯ ತನ್ನ ಭಾರವಾದ ಕಲ್ಮಶವನ್ನು ಕಳೆದುಕೊಳ್ಳುತ್ತದೆ ಮತ್ತು ನಿಜವಾದ ಲೋಹವಾಗುವ ತಿರುವು ಪಡೆಯುತ್ತದೆ, ದೈವೀಕರಣವನ್ನು ಈ ರೀತಿಯಲ್ಲಿ ಮಾತ್ರ ಕೈಕೊಳ್ಳಬಹುದು.

**(CWSA, 12/365)** – **ಶ್ರೀ ಅರವಿಂದರು**

*

## ಭಗವಂತ ಹಾಗೂ ಅತಿಮಾನಸ

ಎಲ್ಲವೂ ಎಲ್ಲಿಂದ ಬರುತ್ತದೆಯೋ, ಎಲ್ಲವೂ ಯಾವುದರಲ್ಲಿ ಜೀವಿಸುತ್ತಿದೆಯೋ ಅದು ಭಗವಂತ. ಈಗ ಅವಿದ್ಯೆಯಿಂದ ಮೋಡ ಮುಸುಕಿದ ಭಗವಂತನ ಸತ್ಯದತ್ತ ಮರಳಿ ಹೋಗುವುದು ಜೀವನದಲ್ಲಿ ಆತ್ಮದ ಗುರಿಯಾಗಿದೆ. ಅವನ ಪರಮೋಚ್ಚ ದೈವೀ ಸತ್ಯದಲ್ಲಿ ಭಗವಂತ ಪರಿಪೂರ್ಣ ಹಾಗೂ ಅನಂತ ಶಾಂತಿ, ಪ್ರಜ್ಞೆ, ಅಸ್ತಿತ್ವ, ಸಾಮರ್ಥ್ಯ ಮತ್ತು ಆನಂದ ಇವೆಲ್ಲ ಆಗಿದ್ದಾನೆ.

*

ಭಗವಂತ ಎಲ್ಲೆಡೆಯಲ್ಲಿ, ಎಲ್ಲ ಪ್ರಜ್ಞಾಸ್ತರಗಳ ಮೇಲೆ ಇದ್ದಾನೆ, ಅವನ ಸತ್ತೆಯನ್ನು ನಾವು ಅವನ ಭಿನ್ನ ರೀತಿಗಳಲ್ಲಿ ಹಾಗೂ ಮುಖಗಳಲ್ಲಿ ನೋಡುತ್ತೇವೆ. ಆದರೆ ಪರಮೋಚ್ಚನಾದವನೊಬ್ಬನಿದ್ದಾನೆ, ಅವನು ಈ ಎಲ್ಲ ಸ್ತರಗಳು, ರೀತಿಗಳು ಹಾಗೂ ಮುಖಗಳು ಮತ್ತು ಅವು ಬಂದ ಮೂಲ ಇವೆಲ್ಲವುಗಳ ಮೇಲಿದ್ದಾನೆ.

*

ಭಗವಂತ ಎಲ್ಲೆಡೆಯಲ್ಲಿ ಹಾಗೂ ಎಲ್ಲರಲ್ಲಿದ್ದಾನೆ – ಆದರೆ ಇದು ಅವಿದ್ಯೆಯ ಜಗತ್ತು, ಅದರಲ್ಲಿ ಪ್ರತಿಯೊಬ್ಬನೂ ತನ್ನ ಅಹಂಕಾರದಿಂದ ತನ್ನಲ್ಲಿರುವ ಭಗವಂತನಿಂದ ಪ್ರತ್ಯೇಕಗೊಂಡಿದ್ದಾನೆ ಮತ್ತು ಅವನು ಅಹಂಕಾರಕ್ಕನುಗುಣವಾಗಿ ಕಾರ್ಯ ಮಾಡುತ್ತಾನೆ, ಭಗವಂತನಿಗನುಗುಣವಾಗಿ ಅಲ್ಲ. ಅವನು ಎಲ್ಲರಲ್ಲಿ ಭಗವಂತನನ್ನು ನೋಡಿದಾಗ ಸರಿಯಾದ ಪ್ರಜ್ಞೆಯನ್ನು ಹೊಂದಲು ಪ್ರಾರಂಭಿಸುತ್ತಾನೆ ಮತ್ತು ಮುಕ್ತನಾಗುತ್ತಾನೆ.

*



ಭಗವಂತ ಅನಂತನಾಗಿದ್ದಾನೆ, ಒಂದು ಅನುಭವ ಇಲ್ಲವೆ ಅನುಭವದ ಸ್ಥಾಯಿತ್ವ ಭಗವಂತನ ಎಲ್ಲ ಸತ್ಯವನ್ನು ಬರಿದು ಮಾಡುವುದಿಲ್ಲ. ದಾರ್ಶನಿಕರಲ್ಲಿ ಪ್ರತಿಯೊಬ್ಬನು ಯಾವುದೊಂದು ಮುಖವನ್ನು ಇಲ್ಲವೆ ಕೆಲವು ಮುಖಗಳನ್ನು ಅನುಭವಕ್ಕೆ ತಂದುಕೊಂಡಿರುತ್ತಾನೆ. ಅವರಲ್ಲಿರುವ ಮಾನಸಿಕ ಭಿನ್ನತೆಗಳನ್ನು ಕುರುಡು ಜನರನ್ನು ಕುರಿತಾಗಿರುವ ನೀತಿಕತೆಯಲ್ಲಿ ಚಿತ್ರಿಸಲಾಗಿದೆ. ಕುರುಡು ಜನರು ಆನೆಯೊಂದನ್ನು ಸ್ಪರ್ಶಿಸಿ ಅದರ ಬಗ್ಗೆ ಕಲ್ಪನೆ ಮಾಡಿಕೊಂಡರು ಮತ್ತು ತಾವು ಸ್ಪರ್ಶಿಸಿದ ಭಾಗ ಕುರಿತು, ಅದಕ್ಕನುಗುಣವಾಗಿ, ವರ್ಣನೆ ಮಾಡಿದರು. ನಿಜವಾದ ಸಂಪೂರ್ಣ ಅನುಭವ ಪಡೆಯುವುದಕ್ಕೆ ಮನುಷ್ಯ ಒಟ್ಟಿನಲ್ಲಿ ಮನಸ್ಸಿನಾಚೆಗೆ, ಆಧ್ಯಾತ್ಮಿಕ ಮನಸ್ಸಿನಾಚೆಗೆ ಕೂಡ ಹೋಗಬೇಕು. "ಆಧ್ಯಾತ್ಮಿಕ ಅನ್ವೇಷಕರಲ್ಲಿ ನನ್ನನ್ನು ಇಡಿಯಾಗಿ ಅರಿತುಕೊಂಡವರು ಅಪರೂಪಕ್ಕೆ ಕಂಡುಬರುತ್ತಾರೆ" ಎಂದು ಶ್ರೀಕೃಷ್ಣ ಹೇಳಿದ್ದಾನೆ. ವಾಸ್ತವದಲ್ಲಿ ಅತಿಮಾನಸದಲ್ಲಿ ಮಾತ್ರ ಎಲ್ಲ ವೈರುಧ್ಯಗಳು ಮಾಯವಾಗುತ್ತವೆ ಮತ್ತು ಎಲ್ಲ ಮುಖಗಳು ವಿಭಜನೆಗೊಳಗಾಗದಂತೆ ಇಡಿಯಾದುದರಲ್ಲಿ ಏಕತ್ರಗೊಂಡಿರುತ್ತವೆ. ಮನುಷ್ಯ ಜ್ಞಾನವನ್ನು ವಿಸ್ತರಿಸುತ್ತ ಹೋಗಬೇಕು, ಎಲ್ಲ ಮಿತಿಗಳು ಮಾಯವಾಗುವವರೆಗೆ ಅನುಭವಕ್ಕೆ ಅನುಭವವನ್ನು ಕೂಡಿಸಿ ಅಧಿಕವಾಗಿಸಬೇಕು.

*

ಭಗವಂತ ಮತ್ತು ದೈವೀ ಸತ್ಯ ಇವುಗಳಿಗೆ ಯಾವಾಗಲೂ ವೈಯಕ್ತಿಕ ಮತ್ತು ಅವೈಯಕ್ತಿಕ ಬದಿಗಳಿರುತ್ತವೆ, ಮತ್ತು ಅವೈಯಕ್ತಿಕವಾದದ್ದಷ್ಟೇ ಮಹತ್ವದ್ದು ಮತ್ತು ಸತ್ಯವಾದದ್ದು ಎಂದು ಯೋಚಿಸುವುದು ತಪ್ಪು, – ಏಕೆಂದರೆ ಅದು ಸತ್ತೆಯ ಒಂದು ಭಾಗದಲ್ಲಿ ಶೂನ್ಯ ಅಪೂರ್ಣತೆಯತ್ತ ಕೊಂಡೊಯ್ಯುತ್ತದೆ, ಅದು ಹಾಗಿರುವಾಗ ಸತ್ತೆಯ ಒಂದು ಭಾಗಕ್ಕೆ ಮಾತ್ರ ತೃಪ್ತಿಯನ್ನು ತಂದು–ಕೊಡಲಾಗಿರುತ್ತದೆ. ಅವೈಯಕ್ತಿಕತೆ ಬೌದ್ಧಿಕ ಮನಸ್ಸಿಗೆ ಮತ್ತು ನಿಶ್ಚಲ ಆತ್ಮಕ್ಕೆ ಸೇರಿದುದಾಗಿರುತ್ತದೆ, ವೈಯಕ್ತಿಕತೆ ಆತ್ಮ, ಹೃದಯ ಹಾಗೂ ಕ್ರಿಯಾಶೀಲ ಸತ್ತೆಗೆ ಸೇರಿರುತ್ತದೆ. ವೈಯಕ್ತಿಕ ಭಗವಂತನನ್ನು ಕಡೆಗಣಿಸುವವರು ಗಾಢವಾದ ಹಾಗೂ ಅವಶ್ಯವಾದ ಏನೋ ಒಂದನ್ನು ಅಲಕ್ಷ್ಯ ಮಾಡುತ್ತಾರೆ.

*

ಭಗವಂತ ಇದ್ದೆಡೆಯಲ್ಲೆಲ್ಲ ಪ್ರತಿಯೊಂದೂ ಇದೆ – ಕೇವಲ ಮರೆಯಾಗಿರುತ್ತದೆ, ಅಸ್ತಿತ್ವದಲ್ಲಿ ಇರುವುದಿಲ್ಲ ಎಂದಲ್ಲ. ಅಚೇತನವಾದದ್ದರ ಕೆಳಗೂ ಭಗವಂತನಿದ್ದಾನೆ – ಮನಸ್ಸು, ಪ್ರಾಣ ಇವು ಭೌತದ್ರವ್ಯದಲ್ಲಿ ಮುಚ್ಚಿಹಾಕಿಕೊಂಡಿವೆ, ಹಾಗೆಯೇ ಅತಿಮಾನಸ ಮತ್ತು ಸಚ್ಚಿದಾನಂದಗಳೂ ಕೂಡ ಮುಚ್ಚಿಹಾಕಿಕೊಂಡಿವೆ. ಕೆಳಗಿರುವುದೆಲ್ಲ ಭಗವಂತನ ಅಸ್ತಿತ್ವದ ಹೊರಗಿರು–ವಂತಹದಲ್ಲ. ದೈವೀ ಮನಸ್ಸು ಭೌತದ್ರವ್ಯದಲ್ಲಿ ಅವರೋಹಣ ಮಾಡಿದ ನಂತರವಷ್ಟೇ ಮನಸ್ಸು ಭೌತದ್ರವ್ಯದಲ್ಲಿ ಪ್ರಕಟವಾದ ಹಾಗೆ ಅತಿಮಾನಸವೂ ಕೂಡ ಅವರೋಹಣ ಮಾಡಿದ ನಂತರ ಭೌತದ್ರವ್ಯದಲ್ಲಿ ಪ್ರಕಟವಾಗುವುದು.

*

ಭಗವಂತ ಎಲ್ಲೆಡೆಯಲ್ಲಿ ಇರಬಲ್ಲ ಮತ್ತು ಇದ್ದಾನೆ, ಮುಸುಕಿನಲ್ಲಿ ಇಲ್ಲವೆ ಅರ್ಧ ಪ್ರಕಟವಾಗುತ್ತ ಪ್ರಜ್ಞೆಯ ಎಲ್ಲ ಸ್ತರಗಳಲ್ಲಿ ಇದ್ದಾನೆ, ಅತಿಮಾನಸದಲ್ಲಿ ಅವನು ಮುಖವಾಡ ಧರಿಸದೆ ಇಲ್ಲದೆ ಪರದೆಯ ಹಿಂದಿರದೆ ತನ್ನದೇ ಸ್ವರೂಪದಲ್ಲಿ ಪ್ರಕಟನಾಗಲು ಪ್ರಾರಂಭಿಸುತ್ತಾನೆ.

*

ಮಾನಸಿಕ ಸ್ತರದಲ್ಲಿ ಮನುಷ್ಯ ಭಗವಂತನೊಡನೆ ಏಕತೆಯಲ್ಲಿರಬಲ್ಲನು. ಪೃಥ್ವಿಯ ಮೇಲೆ ಅವನನ್ನು ಪ್ರಕಟಿಸಲು ಅತಿಮಾನಸದ ಆವಶ್ಯಕತೆ ಇದೆ.

*

ಅತಿಮಾನಸ, ಅದರ ವ್ಯಾಖ್ಯೆಯ ಪ್ರಕಾರ, ಸತ್ಯ–ಪ್ರಜ್ಞೆ(ಋತಚಿತ್)ಯಾಗಿದೆ, ಅದು ತನ್ನನ್ನು ತಾನೇ ವಶದಲ್ಲಿ ಇಟ್ಟುಕೊಂಡಿರುವ ದೈವೀ ಸತ್ಯ, ತನ್ನದೇ ಸಾಮರ್ಥ್ಯದಿಂದ ನೆರವೇರಿಕೆ ಕಂಡುಕೊಳ್ಳುತ್ತದೆ.

**(CWSA, 28, 5/14)** **– ಶ್ರೀ ಅರವಿಂದರು**

*

## ಚೈತ್ಯಸತ್ತೆ

ನಮ್ಮ ಚೈತ್ಯಸತ್ತೆಯ ಭಾಗ ಭಗವಂತನಿಂದ ನೇರವಾಗಿ ಬಂದ ಏನೋ ಒಂದಾಗಿರುತ್ತದೆ ಮತ್ತು ಅದು ಭಗವಂತನ ಸ್ಪರ್ಶದಲ್ಲಿರುತ್ತದೆ, ಮೂಲದಲ್ಲಿ ಅದು ಬೀಜಾಣುವಾಗಿದ್ದು ದೈವೀ ಸಾಧ್ಯತೆಗಳನ್ನು ಗರ್ಭದಲ್ಲಿರಿಸಿಕೊಂಡಿರುತ್ತದೆ, ಆ



ಸಾಧ್ಯತೆಗಳೇ ಮನಸ್ಸು, ಪ್ರಾಣ ಮತ್ತು ದೇಹ ಎಂಬ ಕೆಳಸ್ತರದ ಮೂರು ಬಗೆಯ ವಾದವುಗಳಿಗೆ ಆಧಾರ ನೀಡುತ್ತವೆ. ಜೀವಿಸುವ ಎಲ್ಲ ಸತ್ತೆಗಳಲ್ಲಿ ದೈವೀ ಅಂಶವಿರುತ್ತದೆ, ಆದರೆ ಅದು ಅವಿತುಕೊಂಡು ಸಾಮಾನ್ಯ ಪ್ರಜ್ಞೆಯ ಹಿಂದೆ ನಿಂತಿರುತ್ತದೆ. ಮೊದಲು ಅದು ಅಭಿವೃದ್ಧಿ ಹೊಂದಿರುವುದಿಲ್ಲ, ಮತ್ತು ಅಭಿವೃದ್ಧಿ ಹೊಂದಿದಾಗಲೂ ಕೂಡ ಅದು ಯಾವಾಗಲೂ ಇಲ್ಲವೆ ಬಹಳಷ್ಟು ಸಲ ಮುಂಭಾಗದಲ್ಲಿರುವುದಿಲ್ಲ. ಉಪಕರಣಗಳ ಅಪರಿಪೂರ್ಣತೆ, ಅವುಗಳ ಮೂಲಕ ಹಾಗೂ ಅವುಗಳ ಮಿತಿಗಳ ಮೂಲಕ ಅನುವು ಮಾಡಿಕೊಡುವಷ್ಟರ ಮಟ್ಟಿಗೆ ಅದು ತನ್ನನ್ನು ಅಭಿವ್ಯಕ್ತಪಡಿಸುತ್ತದೆ. ಭಗವಂತನತ್ತ ಸಾಗುವುದರ ಅನುಭವದ ಮೂಲಕ ಅದು, ನಮ್ಮಲ್ಲಿ ಉಚ್ಚತರವಾದ ಚಲನೆಯಾದ ಪ್ರತಿಸಲ, ಬಲವನ್ನು ಗಳಿಸುತ್ತ ಪ್ರಜ್ಞೆಯಲ್ಲಿ ಬೆಳೆಯುತ್ತದೆ, ಕೊನೆಯಲ್ಲಿ ಈ ಆಳಾತಿ ಆಳದ ಮತ್ತು ಉಚ್ಚತರ ಚಲನೆಗಳು ಒಟ್ಟುಗೂಡುವಿಕೆಯ ಮೂಲಕ ಚೈತ್ಯದ ವ್ಯಕ್ತಿವಿಶಿಷ್ಟತೆ ಅಭಿವೃದ್ಧಿ ಹೊಂದುತ್ತದೆ. ಮನುಷ್ಯ ಆಧ್ಯಾತ್ಮಿಕ ಜೀವನದತ್ತ ಹೊರಳುವುದಕ್ಕೆ ಈ ಚೈತ್ಯಸತ್ತೆಯೇ ನಿಜವಾದ ಆದಾಗ್ಯೂ ರಹಸ್ಯ ಕಾರಣ ಮತ್ತು ಆ ಜೀವನದಲ್ಲಿ ಶ್ರೇಷ್ಠ ಸಹಾಯ ನೀಡುವಂತಹದು.

ಆತ್ಮ(soul) ಶಬ್ದ ಹಾಗೆಯೇ ಚೈತ್ಯ(psychic) ಶಬ್ದ ಇವುಗಳನ್ನು ಬಹಳ ಅಸ್ಪಷ್ಟವಾಗಿ ಹಾಗೆಯೇ ಅನೇಕ ಭಿನ್ನ ಅರ್ಥಗಳಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಉಪಯೋಗಿಸಲಾಗುತ್ತದೆ. ಸಾಮಾನ್ಯ ಮಾತಿನ ರೀತಿಯ ಬಹಳಷ್ಟು ಸಂದರ್ಭಗಳಲ್ಲಿ ಮನಸ್ಸು ಮತ್ತು ಆತ್ಮ ಇವುಗಳ ನಡುವೆ ಸ್ಪಷ್ಟ ಭಿನ್ನತೆಯನ್ನು ಮಾಡಲಾಗುವುದಿಲ್ಲ. ಮತ್ತು ಬಹಳಷ್ಟು ಸಲ ಇನ್ನೂ ಬಹಳ ಗಂಭೀರ ಗೊಂದಲವಿರುತ್ತದೆ: ಆಸೆಯ ಪ್ರಾಣಿಕ ಸತ್ತೆ – ಮಿಥ್ಯೆಯ ಆತ್ಮ ಇಲ್ಲವೆ ಆಸೆಯ ಆತ್ಮ – ಯನ್ನು ಉದ್ದೇಶದಲ್ಲಿ ಇಟ್ಟುಕೊಂಡು ಆತ್ಮ(soul), ಚೈತ್ಯ(psychic) ಶಬ್ದಗಳನ್ನು ಉಪಯೋಗಿಸಲಾಗುತ್ತದೆ. ಮನಸ್ಸು ಇಲ್ಲವೆ ಪ್ರಾಣಿಕ ಇವುಗಳಿಂದ ಚೈತ್ಯ ಬಹಳ ಭಿನ್ನವಾಗಿರುತ್ತದೆ, ಅವು ಹೃದಯದಲ್ಲಿ ಸಂಧಿಸುವ ಸ್ಥಳದಲ್ಲಿ ಅವುಗಳ ಹಿಂದೆ ಚೈತ್ಯ ನಿಂತಿರುತ್ತದೆ. ಅದರ ಕೇಂದ್ರ ಸ್ಥಾನ ಅಲ್ಲಿದೆ, ಆದರೆ ಹೃದಯದಲ್ಲಿಗಿಂತಲೂ ಹೆಚ್ಚಾಗಿ ಹೃದಯದ ಹಿಂದೆ ಅದು ನಿಂತಿರುತ್ತದೆ; ಏಕೆಂದರೆ, ಸಾಮಾನ್ಯವಾಗಿ, ಜನರು ಹೃದಯವೆಂದು ಕರೆಯುವುದು ಭಾವನೆಗಳಿಗಾಗಿರುವ ಆಸನವಾಗಿರುತ್ತದೆ ಮತ್ತು ಮಾನವರ ಭಾವನೆಗಳು

ಮಾನಸಿಕ – ಪ್ರಾಣಿಕ ಪ್ರಚೋದನೆಗಳಾಗಿರುತ್ತವೆ, ಅವು ಸಾಮಾನ್ಯವಾಗಿ ಚೈತ್ಯ ಸ್ವಭಾವದವಾಗಿರುವುದಿಲ್ಲ. ಮನಸ್ಸು ಮತ್ತು ಪ್ರಾಣ–ಶಕ್ತಿಗಳಿಗಿಂತ ಭಿನ್ನವಾದ, ಹಿಂದಿರುವ, ಹೆಚ್ಚಾಗಿ ರಹಸ್ಯವಾಗಿರುವ ಈ ಸಾಮರ್ಥ್ಯ ನಮ್ಮಲ್ಲಿರುವ ನಿಜವಾದ ಆತ್ಮ ಎಂದರೆ ಚೈತ್ಯಸತ್ತೆಯಾಗಿದೆ. ಹಾಗಿದ್ದಾಗ್ಯೂ ಚೈತ್ಯದ ಸಾಮರ್ಥ್ಯವು ಮನಸ್ಸು, ಪ್ರಾಣಿಕ ಹಾಗೂ ದೇಹಗಳ ಮೇಲೆ ಕಾರ್ಯ ಕೈಕೊಳ್ಳಬಲ್ಲದು, ಆ ಕಾರ್ಯ ಯೋಚನೆಯನ್ನು, ಗ್ರಹಿಕೆಯನ್ನು ಮತ್ತು ಭಾವನೆ(ಆಗ ಅದು ಚೈತ್ಯ ಭಾವನೆ–ಯಾಗುತ್ತದೆ)ಯನ್ನು, ಸಂವೇದನೆಯನ್ನು, ಕ್ರಿಯೆಯನ್ನು, ನಮ್ಮಲ್ಲಿರುವ ಉಳಿದೆಲ್ಲವನ್ನು ಪರಿಶುದ್ಧಗೊಳಿಸುವುದಕ್ಕಾಗಿರುತ್ತದೆ, ಮತ್ತು ಆ ರೀತಿಯಲ್ಲಿ ಅವು ದೈವೀ ಚಲನೆಗಳಾಗುವಂತೆ ಮಾಡುವುದಿರುತ್ತದೆ.

**(CWSA, 28/103)** **– ಶ್ರೀ ಅರವಿಂದರು**

*

**ಪ್ರಶ್ನೆ :** *ಮನುಷ್ಯ ತನ್ನ ಚೈತ್ಯಾತ್ಮಿಕ ವ್ಯಕ್ತಿವಿಶಿಷ್ಟತೆ ಬೆಳೆಯುವಂತೆ ಮಾಡುವುದು ಹೇಗೆ?*

**ಶ್ರೀಮಾತೆ :** ಜೀವನದ ಎಲ್ಲ ಅನುಭವಗಳ ಮೂಲಕ ಚೈತ್ಯಸತ್ತೆ ರೂಪ ತಾಳುವುದು, ಬೆಳೆಯುವುದು ಮತ್ತು ಅಭಿವೃದ್ಧಿ ಹೊಂದುವುದು ಮತ್ತು ಕೊನೆಗೆ ಒಂದು ಸಂಪೂರ್ಣ, ಪ್ರಜ್ಞಾಪೂರ್ಣ ಮತ್ತು ಮುಕ್ತ ಸತ್ತೆಯಾಗುವುದು.

ಅಭಿವೃದ್ಧಿಯ ಈ ವಿಧಾನ ದಣಿದುಕೊಳ್ಳದೆ ಅನೇಕ ಜೀವನಗಳುದ್ದಕ್ಕೂ ಸಾಗುತ್ತದೆ. ಮತ್ತು ಮನುಷ್ಯ ಅದರ ಬಗ್ಗೆ ಪ್ರಜ್ಞೆಯುಳ್ಳವನಾಗಿರದೆ ಇರುವುದಕ್ಕೆ ಕಾರಣ ಅವನು ತನ್ನ ಚೈತ್ಯಸತ್ತೆಯ ಬಗ್ಗೆ ಅರಿವುಳ್ಳವನಾಗಿರುವುದಿಲ್ಲ – ಏಕೆಂದರೆ ಅರಿವುಳ್ಳವನಾಗುವುದು ಪ್ರಾರಂಭ ಬಿಂದು. ಅಂತರ್ಯದಲ್ಲಿ ಸಾಗಿ ಹೋಗುವುದರ ಮೂಲಕ, ಏಕಾಗ್ರತೆ ವಹಿಸುವುದರಿಂದ ಮನುಷ್ಯ ತನ್ನ ಚೈತ್ಯಸತ್ತೆಯೊಡನೆ ಪ್ರಜ್ಞಾಪೂರ್ಣ ಸಂಪರ್ಕದಲ್ಲಿ ಬರಬೇಕು. ಬಾಹ್ಯ ಸತ್ತೆಯ ಮೇಲೆ ಈ ಚೈತ್ಯಸತ್ತೆ ಯಾವಾಗಲೂ ಪ್ರಭಾವ ಬೀರುತ್ತದೆ, ಆದರೆ ಆ ಪ್ರಭಾವ ಬಹುಮಟ್ಟಿಗೆ ಯಾವಾಗಲೂ ರಹಸ್ಯವಾಗಿರುತ್ತದೆ, ಅಪರೂಪದ ಸಂದರ್ಭಗಳನ್ನು ಹೊರತುಪಡಿಸಿ ಅದನ್ನು ನೋಡಲಾಗುವುದಿಲ್ಲ, ಗ್ರಹಿಕೆಗೆ ಇಲ್ಲವೆ ಭಾವನೆಗೆ ತಂದುಕೊಳ್ಳಲಾಗುವುದಿಲ್ಲ.



ಸಂಪರ್ಕವನ್ನು, ಸಹಾಯವನ್ನು, ಸಾಧ್ಯವಾದರೆ ಪ್ರಜ್ಞಾಪೂರ್ಣ ಚೈತ್ಯ ವ್ಯಕ್ತಿವಿಶಿಷ್ಟತೆಯ ಅಭಿವೃದ್ಧಿಯನ್ನು ಬಲಪಡಿಸುವುದಕ್ಕಾಗಿ ಮನುಷ್ಯ ಏಕಾಗ್ರತೆ ವಹಿಸುತ್ತಿದ್ದಾಗ ಅದರತ್ತ ಹೊರಳಬೇಕು, ಅದನ್ನು ತಿಳಿದುಕೊಳ್ಳಲು ಅಭೀಪ್ಸೆ ಪಡಬೇಕು, ಮತ್ತು ಅದನ್ನು ಭಾವನೆಗೆ ತಂದುಕೊಳ್ಳಬೇಕು, ಅದರ ಪ್ರಭಾವವನ್ನು ಸ್ವೀಕರಿಸಲು ಮನುಷ್ಯ ತನ್ನನ್ನು ತೆರೆದಿರಿಸಿಟ್ಟುಕೊಳ್ಳಬೇಕು, ಅದರಿಂದ ಸೂಚನೆ ಬಂದ ಪ್ರತಿಸಲ ಅದನ್ನು ಕಟ್ಟೆಚ್ಚರದಿಂದ ಮತ್ತು ನಿಷ್ಕಾಪಟ್ಯದಿಂದ ಅನುಸರಿಸಬೇಕು. ಶ್ರೇಷ್ಠ ಅಭೀಪ್ಸೆಯಲ್ಲಿ ಜೀವಿಸುವುದು, ಆಂತರಿಕವಾಗಿ ಸ್ಥಿರವಾಗಿರಲು ಕಾಳಜಿ ವಹಿಸುವುದು, ಮನುಷ್ಯ ತನ್ನ ಸತ್ತೆಯ ಎಲ್ಲ ಭಾಗಗಳಲ್ಲಿ ಪರಿಪೂರ್ಣ ನಿಷ್ಕಾಪಟ್ಯವನ್ನು ರೂಢಿಸಿಕೊಳ್ಳುವುದು – ಇವು ಚೈತ್ಯಸತ್ತೆಯ ಬೆಳವಣಿಗೆಗಾಗಿ ಅವಶ್ಯವಾದ ನಿಬಂಧನೆಗಳಾಗಿವೆ.

**(CWM, 16/221–22)** **– ಶ್ರೀಮಾತೆ**

*

## ಭಾಗ – II :

## ಶ್ರೀ ಅರವಿಂದರ ಬೋಧನೆ ಹಾಗೂ ಆಚರಣೆಯ ವಿಧಾನ

## ಶ್ರೀ ಅರವಿಂದರ ಬೋಧನೆ

**ತೋರಿಬರುವವಗಳ ಹಿಂದಿರುವ ನೈಜತೆ:**

ವಿಶ್ವದಲ್ಲಿ ತೋರಿಬರುವುದರ ಹಿಂದೆ ದೈವೀ ಸತ್ತೆಯ ಹಾಗೂ ಪ್ರಜ್ಞೆಯ ನೈಜತೆಯಾದ ಎಲ್ಲ ಆತ್ಮಗಳ ಸನಾತನ ಏಕೈಕನಿದ್ದಾನೆ ಎಂಬ ಭಾರತದ ಪ್ರಾಚೀನ ಕಾಲದ ಋಷಿಗಳ ಬೋಧನೆಯಿಂದ ಶ್ರೀ ಅರವಿಂದರದು ಪ್ರಾರಂಭವಾಗುತ್ತದೆ. ಎಲ್ಲ ಸತ್ತೆಗಳು ಆ ಏಕ ದೈವೀ ಆತ್ಮದಲ್ಲಿ ಒಂದಾಗಿವೆ, ಆದರೆ ಪ್ರಜ್ಞೆಯ ಒಂದು ಬಗೆಯ ಪ್ರತ್ಯೇಕತೆಯಿಂದ, ತಮ್ಮ ನಿಜವಾದ ದೈವೀ ಆತ್ಮದ ಬಗ್ಗೆ ಮತ್ತು ಮನಸ್ಸು, ಪ್ರಾಣ ಹಾಗೂ ದೇಹಗಳಲ್ಲಿರುವ ದೈವೀ ನೈಜತೆಯ ಬಗ್ಗೆ ಇರುವ ಅಜ್ಞಾನದಿಂದ ವಿಭಜನೆಗೆ ಒಳಗಾಗಿವೆ. ಒಂದು ಬಗೆಯ ಮನಶ್ಶಾಸ್ತ್ರೀಯ ಶಿಸ್ತುಪಾಲನೆಯಿಂದ ಪ್ರತ್ಯೇಕಗೊಳಿಸುವ ಈ ಪರದೆಯನ್ನು ತೆಗೆದುಹಾಕಬಹುದಾಗಿದೆ ಮತ್ತು ನಮ್ಮೆಲ್ಲರಲ್ಲಿರುವ ನಿಜವಾದ ಆತ್ಮದ ಇಲ್ಲವೆ ಭಗವಂತನ ಬಗ್ಗೆ ಅರಿವುಳ್ಳವರು ಆಗಬಹುದಾಗಿದೆ.

**ಪ್ರಕೃತಿಯಲ್ಲಿ ಆರೋಹಣ ಮಾಡುತ್ತಿರುವ ಉತ್ಕ್ರಾಂತಿ:**

ಈ ಏಕೈಕ ದೈವೀಸತ್ತೆ ಮತ್ತು ಪ್ರಜ್ಞೆ ಎಂಬುದು ಜಡದಲ್ಲಿ ತೊಡಗಿಕೊಂಡಿದೆ ಎಂದು ಶ್ರೀ ಅರವಿಂದರ ಬೋಧನೆ ತಿಳಿಸುತ್ತದೆ. ಉತ್ಕ್ರಾಂತಿಯು ಜಡದಿಂದ ಪ್ರಜ್ಞೆ ಬಿಡುಗಡೆ ಪಡೆಯುವ ವಿಧಾನವಾಗಿದೆ, ಪ್ರಜ್ಞಾರಹಿತವಾದದ್ದು ಎಂದು ತೋರಿಬರುವುದರಲ್ಲಿ ಪ್ರಜ್ಞೆ ಕಾಣಿಸಿಕೊಳ್ಳುತ್ತದೆ, ಒಮ್ಮೆ ಹೀಗೆ ಕಾಣಿಸಿಕೊಂಡ ನಂತರ ಅದು ಉಚ್ಚತರವಾಗಿ ಬೆಳೆಯುವುದಕ್ಕೆ ಮತ್ತು ಅದೇ ಕಾಲಕ್ಕೆ ಹೆಚ್ಚು ಪರಿಪೂರ್ಣತೆಯೆಡೆಗೆ ವಿಸ್ತಾರಗೊಳ್ಳುವುದಕ್ಕೆ ಹಾಗೂ ಅಭಿವೃದ್ಧಿ ಪಡೆಯುವುದಕ್ಕೆ ಸ್ವ–ಒತ್ತಡಕ್ಕೊಳಗಾಗುತ್ತದೆ. ಪ್ರಜ್ಞೆಯ ಬಿಡುಗಡೆಯ ಮೊದಲ ಹೆಜ್ಜೆಯೆಂದರೆ ಜಡದಲ್ಲಿ ಪ್ರಾಣ ಕಾಣಿಸಿಕೊಳ್ಳುವುದಾಗಿದೆ, ಮನಸ್ಸು ಕಾಣಿಸಿಕೊಳ್ಳುವುದು ಎರಡನೆಯ ಹೆಜ್ಜೆ. ಆದರೆ ಉತ್ಕ್ರಾಂತಿಯು ಮನಸ್ಸಿನೊಂದಿಗೆ ಕೊನೆಗೊಳ್ಳುವುದಿಲ್ಲ, ಅದು ಇನ್ನೂ ಹೆಚ್ಚಿನದರಲ್ಲಿ ಬಿಡುಗಡೆ ಹೊಂದಲು ಕಾದಿರುತ್ತದೆ, ಈ ಹೆಚ್ಚಿನದು ಆಧ್ಯಾತ್ಮಿಕ ಹಾಗೂ ಅತಿಮಾನಸದ್ದಾಗಿರುತ್ತದೆ. ಉತ್ಕ್ರಾಂತಿಯ ಮುಂದಿನ ಹೆಜ್ಜೆ ಅತಿಮಾನಸದ ಹಾಗೂ ದಿವ್ಯಾತ್ಮದ ಅಭಿವೃದ್ಧಿಯು ಪ್ರಜ್ಞೆಯುಳ್ಳ ಸತ್ತೆಯಲ್ಲಿ ಪ್ರಾಬಲ್ಯವುಳ್ಳ ಸಾಮರ್ಥ್ಯವಾಗುವತ್ತ ಇರಬೇಕು. ಏಕೆಂದರೆ ಆಗ ಮಾತ್ರ ವಸ್ತು–ವಿಷಯಗಳಲ್ಲಿ ತೊಡಗಿಕೊಂಡ ಪ್ರಜ್ಞೆ ಸಂಪೂರ್ಣವಾಗಿ ತನ್ನನ್ನು ಇಡಿಯಾಗಿ ಬಿಡುಗಡೆ ಮಾಡಿಕೊಳ್ಳುವುದು ಮತ್ತು ಜೀವನಕ್ಕೆ ಪರಿಪೂರ್ಣತೆಯನ್ನು ಪ್ರಕಟಿಸಲು ಸಾಧ್ಯವಾಗುವುದು.

ಉತ್ಕ್ರಾಂತಿಯು ತನ್ನ ಮೊದಲ ಹೆಜ್ಜೆಗಳನ್ನು ಪ್ರಜ್ಞಾಪೂರ್ಣ ಸಂಕಲ್ಪವಿಲ್ಲದೆ ಸಸ್ಯ ಜೀವನ, ಪಶು ಜೀವನಗಳಲ್ಲಿರಿಸಿತ್ತು, ಮನುಷ್ಯನಲ್ಲಿ ಮಾತ್ರ ಪ್ರಜ್ಞಾಪೂರ್ಣ ಸಂಕಲ್ಪವನ್ನು ಅವನ ಉಪಕರಣದಲ್ಲಿ ಅಭಿವೃದ್ಧಿಗೊಳಿಸಲು ಪ್ರಕೃತಿಗೆ ಸಾಧ್ಯವಾಯಿತು. ಆದಾಗ್ಯೂ ಮಾನಸಿಕ ಸಂಕಲ್ಪದಿಂದ ಉತ್ಕ್ರಾಂತಿಯ ಕಾರ್ಯವನ್ನು ಪೂರ್ತಿಯಾಗಿ ಮಾಡಲಾಗದು, ಏಕೆಂದರೆ ಮನಸ್ಸು ಒಂದು ನಿಶ್ಚಿತ ಹಂತದವರೆಗೆ ಮಾತ್ರ ಹೋಗಬಲ್ಲದು, ನಂತರ ಅದಕ್ಕೆ ವೃತ್ತಾಕಾರದಲ್ಲಿ ಸುತ್ತಲು ಮಾತ್ರ ಸಾಧ್ಯವಾಗುತ್ತದೆ. ಪರಿವರ್ತನೆಯೊಂದನ್ನು ಮತ್ತು ಮನಸ್ಸು ಉಚ್ಚತರ ತತ್ವದಲ್ಲಿ ಬದಲಾಗುವಂತೆ ಪ್ರಜ್ಞೆಯ ಹೊರಳುವಿಕೆಯನ್ನು ಮಾಡಬೇಕಾಗುತ್ತದೆ.

ಸಂಕ್ಷಿಪ್ತದಲ್ಲಿ ಪರಿವರ್ತನೆ (conversion) ಯೊಂದನ್ನು ಕೈಕೊಳ್ಳುವುದಿರುತ್ತದೆ, ಪ್ರಜ್ಞೆಯ ಹೊರಳುವಿಕೆಯಿರುತ್ತದೆ, ಅದರಿಂದಾಗಿ ಮನಸ್ಸು ಉಚ್ಚತರ ತತ್ವದಲ್ಲಿ



ಬದಲಾಗಬೇಕಾಗುವುದು. ಈ ವಿಧಾನ ಪ್ರಾಚೀನ ಕಾಲದ ಮನಶ್ಶಾಸ್ತ್ರೀಯ ಶಿಸ್ತುಪಾಲನೆ ಹಾಗೂ ಯೋಗ ಇವುಗಳಲ್ಲಿ ಆದ್ಯಂತವಾಗಿ ಇರುವುದು ಕಂಡುಬರುತ್ತದೆ. ಗತಕಾಲದಲ್ಲಿ, ಜಗತ್ತಿನಿಂದ ದೂರ ಸರಿದುಕೊಂಡು ಹೋಗಿ ದಿವ್ಯಾತ್ಮನ ಎತ್ತರದಲ್ಲಿ ಮಾಯವಾಗುವುದರ ಮೂಲಕ ಅದನ್ನು ಕೈಕೊಳ್ಳುವುದರ ಪ್ರಯತ್ನ ಮಾಡಲಾಗಿತ್ತು. ಶ್ರೀ ಅರವಿಂದರ ಬೋಧನೆಯ ಪ್ರಕಾರ ಉಚ್ಚತರ ತತ್ವದ ಅವರೋಹಣ ಸಾಧ್ಯವಿದೆ, ಅದು ಆಧ್ಯಾತ್ಮಿಕ ಆತ್ಮವನ್ನು ಜಗತ್ತಿನಿಂದ ಬಾಹ್ಯದಲ್ಲಿ ಬಿಡುಗಡೆ ಮಾಡಬಲ್ಲದಷ್ಟೇ ಅಲ್ಲ, ಆದರೆ ಜಗತ್ತಿನಲ್ಲೂ ಕೂಡ ಮುಕ್ತಗೊಳಿಸುತ್ತದೆ, ಮನಸ್ಸಿನ ಅಜ್ಞಾನದ ಇಲ್ಲವೆ ಸೀಮಿತ ಜ್ಞಾನದ ಸ್ಥಾನದಲ್ಲಿ ಅತಿಮಾನಸ ಸತ್ಯಪ್ರಜ್ಞೆ (ಋತಚಿತ್) ಯನ್ನಿರಿಸುತ್ತದೆ, ಅದು ಆಂತರಿಕ ದಿವ್ಯಾತ್ಮಕ್ಕೆ ಸಾಕಷ್ಟಾಗಬಹುದಾದ ಉಪಕರಣವಾಗುತ್ತದೆ ಮತ್ತು ಅದು ಮಾನವ ಸತ್ತೆ ತನ್ನನ್ನು ಕ್ರಿಯಾಶೀಲವಾಗಿ ಕಂಡುಕೊಳ್ಳುವಂತೆ ಹಾಗೂ ಆಂತರಿಕವಾಗಿ ಇನ್ನೂ ಪಶು–ಮನುಕುಲವಾಗಿರುವುದರಿಂದ ಹೊರಗೆ ಬಂದು ದೈವೀ ಮಾನವ ಕುಲದಲ್ಲಿ ಬೆಳೆಯುವಂತೆ ಮಾಡುತ್ತದೆ. ಆ ಗುರಿಯತ್ತ ಮನಶ್ಶಾಸ್ತ್ರೀಯ ಶಿಸ್ತುಪಾಲನೆಯನ್ನು, ಇನ್ನೂ ಮರೆಯಲ್ಲಿರುವ ಉಚ್ಚತರ ಅತಿಮಾನಸ ತತ್ವದ ಅವರೋಹಣ ಹಾಗೂ ಕಾರ್ಯಗತಿಯ ಮೂಲಕ, ಸತ್ತೆಯ ಎಲ್ಲ ಭಾಗಗಳನ್ನು ಪರಿವರ್ತನೆಗಾಗಿ ತೆರೆದಿರಿಸುವುದಕ್ಕೆ ಉಪಯೋಗಿಸಬಹುದು.

**ಸಾಧನೆಯ ವಿಧಾನ:**

ಇದನ್ನು ಒಮ್ಮೆಗೆ ಇಲ್ಲವೆ ಅಲ್ಪಕಾಲದಲ್ಲಿ ಇಲ್ಲವೆ ಯಾವುದೇ ತೀವ್ರಗತಿಯ ಪವಾಡ ಸದೃಶ ಪರಿವರ್ತನೆಯ ಮೂಲಕ ಕೈಕೊಳ್ಳಲಾಗುವುದಿಲ್ಲ. ಅತಿಮಾನಸದ ಅವರೋಹಣವಾಗುವುದಕ್ಕಿಂತ ಮೊದಲು ಅನ್ವೇಷಕ ಹಲವಾರು ಹೆಜ್ಜೆಗಳನ್ನು ಇರಿಸಬೇಕಾಗುವುದು. ಮನುಷ್ಯ ಹೆಚ್ಚಾಗಿ ಮೇಲ್ಮೈಯಲ್ಲಿರುವ ಮನಸ್ಸು, ಪ್ರಾಣ ಹಾಗೂ ದೇಹಗಳಲ್ಲಿ ಜೀವಿಸುತ್ತಾನೆ, ಆದರೆ ಅವನೊಳಗೆ ಆಂತರಿಕ ಸತ್ತೆಯೊಂದಿದೆ, ಅದಕ್ಕೆ ಅನೇಕ ಸಾಧ್ಯತೆಗಳಿವೆ. ಇವುಗಳಿಗೆ ಅವನು ಎಚ್ಚತ್ತುಕೊಳ್ಳಬೇಕು – ಏಕೆಂದರೆ ಈಗ ಅವನು ಅದರಿಂದ ಕೇವಲ ಬಹಳ ನಿರ್ಬಂಧಿತ ಪ್ರಭಾವವನ್ನು ಸ್ವೀಕರಿಸುತ್ತಾನೆ ಮತ್ತು ಅದು ಶ್ರೇಷ್ಠತರ ಸೌಂದರ್ಯ, ಸಾಮರಸ್ಯ, ಸಾಮರ್ಥ್ಯ ಹಾಗೂ ಜ್ಞಾನಗಳನ್ನು ಸತತ ಬೆಂಬತ್ತುವಂತೆ ಅವನ ಮೇಲೆ ಒತ್ತಾಯ ತರುತ್ತದೆ. ಹಾಗಾಗಿ ಯೋಗದ ಮೊದಲ ವಿಧಾನ ಈ ಆಂತರಿಕ

ಸತ್ತೆಯ ಸೀಮೆಗಳನ್ನು ತೆರೆದಿರಿಸುವುದಾಗಿದೆ ಮತ್ತು ಅಲ್ಲಿಂದ ಮನುಷ್ಯ ಬಾಹ್ಯದಲ್ಲಿ ಜೀವಿಸುವುದಾಗಿದೆ ಮತ್ತು ಜೀವನದ ಮೇಲೆ ಆಂತರಿಕ ಪ್ರಕಾಶ ಹಾಗೂ ಶಕ್ತಿಗಳ ಆಳಿಕೆ ಬರುವಂತೆ ಮಾಡುವುದಾಗಿದೆ. ಹಾಗೆ ಮಾಡುತ್ತಿರುವಾಗ ಅವನು ತನ್ನಲ್ಲಿ ಭೌತಿಕ, ಪ್ರಾಣಿಕ ಹಾಗೂ ಮಾನಸಿಕ ಅಂಶಗಳಿಂದ ಮಿಶ್ರಣಕ್ಕೊಳಗಾಗಿರದ, ಆದರೆ ಅವುಗಳ ಹಿಂದೆ ಇರುವ ದೈವೀ ನೈಜತೆಯ ಏನೋ ಒಂದಾಗಿರುವುದನ್ನು, ದೈವೀ ಅಗ್ನಿಯ ಕಿಡಿಯೊಂದನ್ನು ಶೋಧಿಸುತ್ತಾನೆ. ಅವನು ತನ್ನ ಆತ್ಮದಲ್ಲಿ ಜೀವಿಸುವುದನ್ನು ಮತ್ತು ಅದರ ಮುಂದೂಡುವಿಕೆಯಿಂದಾಗಿ ತನ್ನ ಉಳಿದ ಸ್ವಭಾವ ಪರಿಶುದ್ಧಗೊಳ್ಳುವಂತೆ, ದೈವೀ ಸತ್ಯದತ್ತ ನೆಲೆ ನಿರ್ದೇಶನ ಕಂಡುಕೊಳ್ಳುವಂತೆ ಮಾಡುವುದನ್ನು ಕಲಿತುಕೊಳ್ಳಬೇಕಾಗಿರುತ್ತದೆ. ನಂತರ ಅಲ್ಲಿ ಮೇಲ್ಗಡೆ ತೆರೆದುಕೊಳ್ಳುವಿಕೆ ಮತ್ತು ದೈವೀಸತ್ತೆಯ ಉಚ್ಚತರ ಅವರೋಹಣ ಅನುಸರಿಸಿ ಬರಬಲ್ಲವು. ಆದರೆ ಆಗಲೂ ಕೂಡ ಅದು ಒಮ್ಮೆಗೆ ಇಡಿಯಾದ ಅತಿಮಾನಸ ಪ್ರಕಾಶ ಹಾಗೂ ಶಕ್ತಿಯಾಗಿರುವುದಿಲ್ಲ. ಏಕೆಂದರೆ ಸಾಮಾನ್ಯ ಮಾನವ ಮನಸ್ಸು ಮತ್ತು ಅತಿಮಾನಸ ಸತ್ಯಪ್ರಜ್ಞೆ (ಋತಚಿತ್) ಇವುಗಳ ಮಧ್ಯೆ ಪ್ರಜ್ಞೆಯ ಅನೇಕ ಸ್ತರಗಳಿವೆ. ಮಧ್ಯವರ್ತಿಯಾಗಿರುವ ಈ ಸ್ತರಗಳನ್ನು ತೆರೆದಿರಿಸಬೇಕಾಗುತ್ತದೆ ಮತ್ತು ಅವುಗಳ ಸಾಮರ್ಥ್ಯವನ್ನು, ದೇಹ, ಪ್ರಾಣ ಹಾಗೂ ಮನಸ್ಸುಗಳಲ್ಲಿ ಕೆಳಗಿಳಿಸಿ ತರಬೇಕಾಗುತ್ತದೆ. ನಂತರ ಮಾತ್ರ ಸತ್ಯಪ್ರಜ್ಞೆಯ ಪೂರ್ಣ ಸಾಮರ್ಥ್ಯ ಸ್ವಭಾವದಲ್ಲಿ ಕಾರ್ಯ ಮಾಡಬಲ್ಲದು. ಸ್ವ–ಶಿಸ್ತುಪಾಲನೆಯ ಇಲ್ಲವೆ ಸಾಧನೆಯ ಈ ವಿಧಾನ ಆ ಕಾರಣದಿಂದಾಗಿ ದೀರ್ಘವಾದದ್ದು ಮತ್ತು ಕಠಿಣವಾದದ್ದು, ಆದರೆ ಅದರ ಸ್ವಲ್ಪ ಮಾತ್ರವೂ ಕೂಡ ಒಂದು ದೊಡ್ಡ ಗಳಿಕೆಯಾಗಿರುತ್ತದೆ, ಏಕೆಂದರೆ ಕೊನೆಯಲ್ಲಿ ವಿಮೋಚನೆ ಹಾಗೂ ಪರಿಪೂರ್ಣತೆ ಹೆಚ್ಚು ಸಾಧ್ಯವಾಗುವಂತಾಗುತ್ತದೆ.

**ಹಳೆಯ ಪದ್ಧತಿಯ ಹಲವಾರು ವಿಷಯಗಳು ಸಾಧನೆಯಲ್ಲಿ ಅವಶ್ಯವಾಗಿವೆ:**

ಹಳೆಯ ಪದ್ಧತಿಗಳಿಗೆ ಸೇರಿದ ಹಲವಾರು ವಿಷಯಗಳಿವೆ, ಅವು ಆಧ್ಯಾತ್ಮಿಕ ಮಾರ್ಗದಲ್ಲಿ ಅವಶ್ಯವಾಗಿವೆ – ಶ್ರೇಷ್ಠತರ ವಿಸ್ತಾರಕ್ಕೆ ಮತ್ತು ಆತ್ಮದ ಹಾಗೂ ಅನಂತದ ಅರ್ಥಕ್ಕೆ ಮನಸ್ಸನ್ನು ತೆರೆದಿರಿಸುವುದು, ವಿಶ್ವವ್ಯಾಪಿ ಪ್ರಜ್ಞೆ ಎಂದು ಕರೆಯಲಾದುದರಲ್ಲಿ ಹೊರಹೊಮ್ಮುವುದು, ಆಸೆಗಳ ಮೇಲೆ, ಭಾವೋದ್ರೇಕಗಳ ಮೇಲೆ ಪ್ರಭುತ್ವ ಪಡೆಯುವುದು; ಬಾಹ್ಯ ವೈರಾಗ್ಯದ ಆವಶ್ಯಕತೆಯಿಲ್ಲ, ಆದರೆ ಆಸೆ ಮತ್ತು ಆಸಕ್ತಿಗಳ ಮೇಲೆ ಪ್ರಭುತ್ವ, ದೇಹ, ಅದರ ಆವಶ್ಯಕತೆಗಳು, ಅತ್ಯಾಸೆಗಳು,



ಹಾಗೂ ಹುಟ್ಟುಗುಣಗಳು ಇವುಗಳ ಮೇಲೆ ಜಯ ಇದೆಲ್ಲ ಅತ್ಯಗತ್ಯದ್ದಾಗಿದೆ. ಹಳೆಯ ಪದ್ಧತಿಗಳ ಸಂಯೋಜನೆ ಇದೆ: ದೈವೀ ನೈಜತೆ ಮತ್ತು ತೋರಿಕೆಗಳ ನಡುವಿರುವ ವ್ಯತ್ಯಾಸ ಗುರುತಿಸುವಿಕೆ, ಇವುಗಳ ಜ್ಞಾನದ ಮಾರ್ಗ, ಹೃದಯದ ಭಕ್ತಿ ಮಾರ್ಗ, ಪ್ರೇಮ ಹಾಗೂ ಶರಣಾಗತಿ, ಸ್ವ–ಆಸಕ್ತಿಯ ಉದ್ದೇಶಗಳಿಂದ ಸಂಕಲ್ಪವನ್ನು ಅಹಂಕಾರದ ಸೇವೆ ಮಾಡುವುದಕ್ಕಿಂತ ಹೆಚ್ಚಾಗಿ ದೈವೀ ಸತ್ಯ ಹಾಗೂ ಹೆಚ್ಚು ಶ್ರೇಷ್ಠವಾದ ದೈವೀ ನೈಜತೆ ಇವುಗಳ ಸೇವೆ ಕೈಕೊಳ್ಳಲು ಪ್ರೇರಿಸುವ ಕರ್ಮಮಾರ್ಗ. ಏಕೆಂದರೆ ಇಡೀ ಸತ್ತೆಗೆ ತರಬೇತು ನೀಡಬೇಕಾಗುತ್ತದೆ, ಅದರಿಂದಾಗಿ ಶ್ರೇಷ್ಠತರ ದೈವೀ ಪ್ರಕಾಶ ಹಾಗೂ ದೈವೀ ಶಕ್ತಿ ಸ್ವಭಾವದಲ್ಲಿ ಕಾರ್ಯ ಮಾಡಲು ಸಾಧ್ಯವಾದಾಗ ಆ ಸತ್ತೆ ಪ್ರತಿಸ್ಪಂದಿಸಬಲ್ಲದು ಮತ್ತು ಪರಿವರ್ತನೆಗೆ ಒಳಗಾಗಬಲ್ಲದು.

**ಗುರುವಿನ ಪಾತ್ರ:**

ಈ ಶಿಸ್ತುಪಾಲನೆಯಲ್ಲಿ ಗುರುವಿನ ಸ್ಫೂರ್ತಿ ಮತ್ತು ಕಠಿಣ ಹಂತಗಳಲ್ಲಿ ಅವನ ನಿಯಂತ್ರಣ ಹಾಗೂ ಸಾನ್ನಿಧ್ಯ ಅತ್ಯವಶ್ಯವಾಗಿರುತ್ತವೆ. – ಏಕೆಂದರೆ ಯಶಸ್ಸಿನ ಎಲ್ಲ ಅವಕಾಶಗಳನ್ನು ತಡೆಗಟ್ಟುವ ಬಹಳಷ್ಟು ಎಡವುವಿಕೆ ಹಾಗೂ ದೋಷ ಇವುಗಳ ಮೂಲಕ ಸಾಗಿ ಹೋಗುವುದು ಅಸಾಧ್ಯವಾಗುತ್ತದೆ. ಉಚ್ಚತರ ಪ್ರಜ್ಞೆಯಲ್ಲಿ ಹಾಗೂ ಸತ್ತೆಯಲ್ಲಿ ಏರಿ ಹೋದವನು ಗುರುವಾಗಿರುತ್ತಾನೆ ಮತ್ತು ಅವನನ್ನು ಆ ಪ್ರಜ್ಞೆಯ ಹಾಗೂ ಸತ್ತೆಯ ಪ್ರಕಟಣೆ ಇಲ್ಲವೆ ಪ್ರತಿನಿಧಿಯೆಂದು ಪರಿಗಣಿಸಲಾಗುತ್ತದೆ. ಅವನು ತನ್ನ ಬೋಧನೆಯ ಮೂಲಕ, ಅದಕ್ಕಿಂತಲೂ ಹೆಚ್ಚಾಗಿ ಅವನ ಪ್ರಭಾವ ಹಾಗೂ ಉದಾಹರಣೆಯ ಮೂಲಕ ಸಹಾಯ ಮಾಡುತ್ತಾನಷ್ಟೇ ಅಲ್ಲ, ಆದರೆ ತನ್ನದೇ ಅನುಭವವನ್ನು ಇತರರಿಗೆ ತಿಳಿಸಿಕೊಡುವುದರ ಮೂಲಕ ಕೂಡ ಸಹಾಯ ಮಾಡುತ್ತಾನೆ.

**ಸಂಕ್ಷಿಪ್ತದಲ್ಲಿ**

ಇದು ಶ್ರೀ ಅರವಿಂದರ ಬೋಧನೆ ಹಾಗೂ ಅವರ ಯೋಗದ ವಿಧಾನ. ಅವರ ಉದ್ದೇಶ ಯಾವುದೇ ಒಂದು ಧರ್ಮವನ್ನು ಅಭಿವೃದ್ಧಿ ಪಡಿಸುವುದಾಗಿರಲಿಲ್ಲ, ಇಲ್ಲವೆ ಪ್ರಾಚೀನ ಕಾಲದ ಧರ್ಮಗಳನ್ನು ಒಂದಾಗಿಸುವುದಾಗಿರಲಿಲ್ಲ, ಇಲ್ಲವೆ ಹೊಸ ಧರ್ಮವನ್ನು ಹುಟ್ಟುಹಾಕುವುದಾಗಿರಲಿಲ್ಲ, – ಏಕೆಂದರೆ ಇವುಗಳಲ್ಲಿ

ಪ್ರತಿಯೊಂದೂ ಅವರ ಪ್ರಮುಖ ಉದ್ದೇಶದಿಂದ ದೂರ ಕೊಂಡೊಯ್ಯುತ್ತಿತ್ತು. ಅವರ ಯೋಗದ ಒಂದು ಉದ್ದೇಶ ಆಂತರಿಕ ಸ್ವ–ಆಭಿವೃದ್ಧಿ ಮಾಡಿಕೊಳ್ಳುವು–ದಾಗಿದೆ, ಅದನ್ನನುಸರಿಸುವ ಪ್ರತಿಯೊಬ್ಬನೂ, ಕಾಲಾನುಕ್ರಮದಲ್ಲಿ, ಎಲ್ಲರಲ್ಲಿರುವ ಏಕೈಕನಾದವನನ್ನು ಶೋಧಿಸಬಲ್ಲನು, ಮತ್ತು ಮಾನಸಿಕವಾದುದಕ್ಕಿಂತ ಉಚ್ಚತರ ಪ್ರಜ್ಞೆಯನ್ನು ವಿಕಾಸಗೊಳಿಸಬಲ್ಲನು. ವಿಕಾಸಗೊಂಡ ಆ ಪ್ರಜ್ಞೆ ಮಾನವ ಸ್ವಭಾವವನ್ನು ಪರಿವರ್ತಿಸಬಲ್ಲದು, ದೈವೀಕರಣಗೊಳಿಸಬಲ್ಲದು.

**(CWSA, 36/547–50)** – ಶ್ರೀ ಅರವಿಂದರು

*

## ಶ್ರೀ ಅರವಿಂದರ ಬೋಧನೆಯ ಹೊಸತನ

ನಾನದನ್ನು ಸಮಗ್ರ ಯೋಗವೆಂದು ಕರೆದಿದ್ದೇನೆ ಮತ್ತು ಅದರರ್ಥ ಅದು ಹಳೆಯ ಯೋಗಗಳ ಸಾರವನ್ನು ಮತ್ತು ಹಲವಾರು ನಿರ್ವಹಣ ವಿಧಾನಗಳನ್ನು ಕೈಗೆತ್ತಿಕೊಳ್ಳುತ್ತದೆ – ಅದರ ಹೊಸತನ ಅದರ ಗುರಿ, ನಿಲುವು ಮತ್ತು ವಿಧಾನ ಇಡಿಯಾಗಿರುವಿಕೆ ಇವುಗಳಲ್ಲಿದೆ....

ಹಳೆಯ ಯೋಗಗಳಿಗೆ ಹೋಲಿಸಿದರೆ ಅದು ನವೀನ.

1. ಏಕೆಂದರೆ ಅದರ ಗುರಿ ಜಗತ್ತಿನಿಂದ ಹಾಗೂ ಜೀವನದಿಂದ ಸ್ವರ್ಗ ಇಲ್ಲವೆ ನಿರ್ವಾಣದತ್ತ ಪಲಾಯನ ಮಾಡುವುದಲ್ಲ, ಆದರೆ ಜೀವನ ಹಾಗೂ ಅಸ್ತಿತ್ವದ ಬದಲಾವಣೆ ಮಾಡುವುದಾಗಿದೆ, ಅದನ್ನು ಗೌಣವೆಂದಾಗಲಿ, ಪ್ರಾಸಂಗಿಕ–ವೆಂದಾಗಲಿ ಪರಿಗಣಿಸುವುದಿಲ್ಲ, ಆದರೆ ಭಿನ್ನವಾದ ಹಾಗೂ ಪ್ರಮುಖ ಉದ್ದೇಶವೆಂದು ಭಾವಿಸುವುದಾಗಿದೆ. ಇತರ ಯೋಗಗಳಲ್ಲಿ ಅವರೋಹಣ ಎಂಬುದಿದ್ದರೆ ಅದು ಕೇವಲ ಮಾರ್ಗದಲ್ಲಿ ಒಂದು ಪ್ರಸಂಗ ಇಲ್ಲವೆ ಆರೋಹಣದ ಪರಿಣಾಮ – ಆರೋಹಣವೇ ನಿಜವಾದ ವಿಷಯ. ಇಲ್ಲಿ ಆರೋಹಣ ಪ್ರಥಮ ಹೆಜ್ಜೆ, ಆದರೆ ಅದು ಅವರೋಹಣಕ್ಕೆ ಒಂದು ಸಾಧನ, ಆರೋಹಣದಿಂದ ಸಿದ್ಧಿಸಿಕೊಂಡ ಹೊಸ ಪ್ರಜ್ಞೆಯ ಅವರೋಹಣವೇ ಸಾಧನೆಯ ಮೊಹರು ಹಾಗೂ ಮುದ್ರೆ.
2. ಏಕೆಂದರೆ ಅರಸುತ್ತಿರುವ ಗುರಿಯಾದ ವ್ಯಕ್ತಿಗತ ದೈವೀ ಸಿದ್ಧಿ ವ್ಯಕ್ತಿಯ ಸಲುವಾಗಿ ಅಲ್ಲ. ಆದರೆ ಇಲ್ಲಿ, ಪೃಥ್ವಿಯ ಪ್ರಜ್ಞೆಗೆ ಗಳಿಸಬೇಕಾದ ಏನೋ ಒಂದು, ವಿಶ್ವವ್ಯಾಪಿಯಾದದ್ದು, ಕೇವಲ ವಿಶ್ವವನ್ನು ಮೀರಿಹೋದ ಸಿದ್ಧಿಯಲ್ಲ. ಗಳಿಸಬೇಕಾದುದೇನೆಂದರೆ ಪೃಥ್ವಿಯ ಸ್ವಭಾವದಲ್ಲಿ, ಆಧ್ಯಾತ್ಮಿಕ ಜೀವನದಲ್ಲಿಯೂ ಕೂಡ ಇನ್ನೂ ಸಂಘಟಿತವಾಗಿರದ ಇಲ್ಲವೆ ನೇರವಾಗಿ ಕ್ರಿಯಾಶೀಲವಾಗಿರದ ದೈವೀ ಪ್ರಜ್ಞೆಯ ಸಾಮರ್ಥ್ಯ(ಅತಿಮಾನಸ)ವನ್ನು ಕೆಳಗಿಳಿಸಿ ತರುವುದಾಗಿದೆ, ಆ ಸಾಮರ್ಥ್ಯವನ್ನು ಇನ್ನೂ ಸಂಘಟಿಸಿ ಅದು ನೇರವಾಗಿ ಕ್ರಿಯಾಶೀಲವಾಗುವಂತೆ ಮಾಡಬೇಕಾಗಿದೆ.



3. ಈ ಉದ್ದೇಶವನ್ನು ಸಿದ್ಧಿಸಿಕೊಳ್ಳುವುದಕ್ಕಾಗಿ ವಿಧಾನವೊಂದನ್ನು ಬಹಿರಂಗವಾಗಿ ಸಾರಲಾಗಿದೆ, ಅದು ನಾವಿರಿಸಿಕೊಂಡ ಗುರಿಯಷ್ಟೇ ಇಡಿಯಾದದ್ದು ಮತ್ತು ಸಮಗ್ರವಾದದ್ದು, ಎಂದರೆ ಪ್ರಜ್ಞೆಯ ಹಾಗೂ ಸ್ವಭಾವದ ಇಡಿಯಾದ, ಸಮಗ್ರವಾದ ಬದಲಾವಣೆ, ಕ್ರಿಯೆಯ ಒಂದು ಭಾಗವೆಂದು, ಭಿನ್ನವಾದ ಇತರ ಭಾಗಗಳಿಗೆ ಸಹಾಯ ಒದಗಿಸಲೆಂದು ಹಳೆಯ ವಿಧಾನಗಳನ್ನು ಕೈಗೆತ್ತಿಕೊಳ್ಳುವಿಕೆ ಇದೆಲ್ಲ ಇದೆ. ಈ ವಿಧಾನವನ್ನು (ಇಡಿಯಾಗಿ) ಇಲ್ಲವೆ ಇದರಂತಹದನ್ನು ಹಳೆಯ ಯೋಗದಲ್ಲಿ ನಾನು ಕಂಡಿಲ್ಲ, ಅಂತಹದನ್ನು ಕಂಡಿದ್ದರೆ ಹೊಸ ಮಾರ್ಗವನ್ನು ಮಾಡಿಕೊಳ್ಳುವುದಕ್ಕೆ ಅದರ ಶೋಧದಲ್ಲಿ ಹಾಗೂ ಆಂತರಿಕ ಸೃಷ್ಟಿಯಲ್ಲಿ ಮೂವತ್ತು ವರ್ಷಗಳ ಸಮಯವನ್ನು ಹಾಳು ಮಾಡುತ್ತಿರಲಿಲ್ಲ, ಬದಲಾಗಿ ತೀವ್ರಗತಿಯಿಂದ ನಾನು ತಲುಪಬೇಕಾದ ಗುರಿಯಿರುವ ನೆಲೆಯತ್ತ ಸಾಗುತ್ತಿದ್ದೆ, ಅಲ್ಲಿಗೆ ಸಾಗಲು ಸಿದ್ಧಪಡಿಸಿದ ಮಾರ್ಗಗಳು ಮತ್ತು ಅವುಗಳನ್ನು ಕುರಿತು ಪರಿಪೂರ್ಣಗೊಳಿಸಿದ ನಕಾಶ ಇತ್ಯಾದಿಗಳಿರುತ್ತಿದ್ದವು, ಮಾರ್ಗ ಸುರಕ್ಷಿತ ಹಾಗೂ ಸಾರ್ವತ್ರಿಕವಾಗುತ್ತಿತ್ತು. ನಮ್ಮ ಯೋಗ ಹಳೆಯ ಮಾರ್ಗಗಳಲ್ಲಿ ನಡೆದು ಹೋಗುವ ರೀತಿಯದಲ್ಲ, ಅದೊಂದು ಆಧ್ಯಾತ್ಮಿಕ ಸಾಹಸವಾಗಿದೆ.

**(CWSA, 35/154–56)**

*

**ಸಮಗ್ರ ಯೋಗವೆಂದರೇನು?**

ಸಮಗ್ರ ಯೋಗವೆಂದರೇನು?

ಅದು ಸಂಪೂರ್ಣವಾಗಿ ಭಗವಂತನ ಸಾಕ್ಷಾತ್ಕಾರ ಹಾಗೂ ಆತ್ಮ–ಸಾಕ್ಷಾತ್ಕಾರಗಳನ್ನು ಸಿದ್ಧಿಸಿಕೊಳ್ಳುವುದಾಗಿದೆ, ಸತ್ತೆಯ ಹಾಗೂ ಪ್ರಜ್ಞೆಯ

ಸಂಪೂರ್ಣ ನೆರವೇರಿಕೆ ಕಂಡುಕೊಳ್ಳುವುದಾಗಿದೆ, ನಮ್ಮ ಸ್ವಭಾವ ಪರಿಪೂರ್ಣ ಪರಿವರ್ತನೆ ಹೊಂದುವುದಾಗಿದೆ – ಮತ್ತು ಇಲ್ಲಿ (ಪೃಥ್ವಿಯ ಮೇಲೆ) ಜೀವನವು ಪರಿಪೂರ್ಣತೆ ಪಡೆಯುವುದನ್ನು ಒಳಗೊಳ್ಳುತ್ತದೆ, ಕೇವಲ ಬೇರೆ ಇನ್ನೆಲ್ಲಿಯೋ ದೊರಕಬಹುದಾದ ಸನಾತನ ಪರಿಪೂರ್ಣತೆಯನ್ನಲ್ಲ.

ಇದೇ ಅದರ ಉದ್ದೇಶವಾಗಿದೆ, ಅದರ ವಿಧಾನದಲ್ಲಿಯೂ ಕೂಡ ಅದೇ ಬಗೆಯ ಸಮಗ್ರತೆ ಇದೆ, ಏಕೆಂದರೆ ಉದ್ದೇಶದ ಸಂಪೂರ್ಣತೆಯನ್ನು ವಿಧಾನದ ಸಂಪೂರ್ಣತೆಯಿಲ್ಲದೆ ಸಿದ್ಧಿಸಿಕೊಳ್ಳಲಾಗುವುದಿಲ್ಲ. ವಿಧಾನದ ಸಂಪೂರ್ಣತೆ ಎಂದರೆ ನಾವು ಸಿದ್ಧಿಸಿಕೊಳ್ಳಲು ಬಯಸುವುದಕ್ಕೆ ನಮ್ಮ ಸತ್ತೆ ಹಾಗೂ ಸ್ವಭಾವ ಇವುಗಳಲ್ಲಿಯ ಎಲ್ಲ ಭಾಗಗಳಲ್ಲಿ, ರೀತಿಗಳಲ್ಲಿ ಹಾಗೂ ಚಲನೆಗಳಲ್ಲಿ ಸಂಪೂರ್ಣ ಹೊರಳುವಿಕೆ, ತೆರೆದಿರಿಸಿಕೊಳ್ಳುವಿಕೆ, ಸ್ವ–ಅರ್ಪಣ ಇರುವುದಾಗಿದೆ.

ನಮ್ಮ ಮನಸ್ಸು, ಸಂಕಲ್ಪ, ಹೃದಯ, ಪ್ರಾಣ, ದೇಹ, ನಮ್ಮ ಬಾಹ್ಯ, ಆಂತರಿಕ ಹಾಗೂ ಆಳಾತಿ ಆಳದ ಅಸ್ತಿತ್ವ, ನಮ್ಮ ಅತಿಮಾನಸದ, ಅವಚೇತನದ ಹಾಗೆಯೇ ನಮ್ಮ ಅರಿವಿಗೆ ಬರುವ ಭಾಗಗಳು ಇವೆಲ್ಲವನ್ನೂ ಹೀಗೆ ಕೊಟ್ಟುಬಿಡಬೇಕಾಗುತ್ತದೆ ಮತ್ತು ಇವೆಲ್ಲವೂ ಈ ಸಿದ್ಧಿಗಾಗಿ, ಪರಿವರ್ತನೆಗಾಗಿ ಒಂದು ಸಾಧನ, ಒಂದು ಕ್ಷೇತ್ರ ಆಗಬೇಕಾಗಿರುತ್ತದೆ. ಮತ್ತು ಮಾನವ ಪ್ರಜ್ಞೆ ಹಾಗೂ ಸ್ವಭಾವ ದೈವಿಕವಾಗಿ ಬದಲಾಗುವ ಹಾಗೂ ಜ್ಞಾನೋದಯ ಪಡೆಯುವ ಕ್ರಿಯೆಯಲ್ಲಿ ಭಾಗವಹಿಸ–ಬೇಕಾಗುತ್ತದೆ.

ಇದು ಸಮಗ್ರ ಯೋಗದ ಗುಣಲಕ್ಷಣ.

**(CWSA, 12/358)** **– ಶ್ರೀ ಅರವಿಂದರು**

“ಈ ಯೋಗದಲ್ಲಿ ಅನುಸರಿಸಬೇಕಾದ ಎರಡು ಹೆಜ್ಜೆಗಳಲ್ಲಿ ಒಂದು ಶ್ರೀಮಾತೆಯವರಲ್ಲಿ ಆಶ್ರಯ ಪಡೆಯುವುದಾಗಿದೆ” ಎಂದು ಶ್ರೀ ಅರವಿಂದರು ಹೇಳಿದ್ದರು. ಬೇರೊಂದು ಸಂದರ್ಭದಲ್ಲಿ ಎರಡನೆ ಹೆಜ್ಜೆ ಯಾವುದು ಎಂದು ಅವರನ್ನು ಕೇಳಿದಾಗ ಅವರು ದೈವೀ ಜೀವನಕ್ಕಾಗಿ ಅಭೀಪ್ಸೆ ಪಡುವುದಾಗಿದೆ ಎಂದು ಹೇಳಿದರು.

**(CWSA, 32/36)**

*



## ಅತಿಮಾನಸದ ದ್ವಾರಗಳನ್ನು ಪೃಥ್ವಿ ಪ್ರಜ್ಞೆಗೆ ತೆರೆದಿರಿಸುವುದು

ಅತಿಮಾನಸವನ್ನು ಕೇವಲ ನನಗಾಗಿ ಸಿದ್ಧಿಸಿಕೊಳ್ಳುವ ಉದ್ದೇಶ ನನ್ನಲ್ಲಿಲ್ಲ – ನನಗಾಗಿ ನಾನು ಏನನ್ನೂ ಕೈಕೊಳ್ಳುತ್ತಿಲ್ಲ, ಮೋಕ್ಷಕ್ಕಾಗಿ ಕೂಡ ನಾನು ಪ್ರಯತ್ನ ಮಾಡುತ್ತಿಲ್ಲ. ನಾನು ಅತಿಮಾನಸವನ್ನು ಅರಸುತ್ತಿದ್ದರೆ ಅದಕ್ಕೆ ಕಾರಣ ಅದು ಪೃಥ್ವಿ ಪ್ರಜ್ಞೆಗಾಗಿ ಕೈಕೊಳ್ಳಬೇಕಾದ ಒಂದು ವಿಷಯವಾಗಿದೆ, ಅದನ್ನು ನನ್ನಲ್ಲಿ ಸಿದ್ಧಿಸಿಕೊಳ್ಳದಿದ್ದರೆ ಇತರರಲ್ಲಿ ಅದು ಸಾಧ್ಯವಾಗುವುದಿಲ್ಲ. ನನ್ನ ಅತಿಮಾನಸೀಕರಣ ಪೃಥ್ವಿ ಪ್ರಜ್ಞೆಗಾಗಿ ಅತಿಮಾನಸದ ದ್ವಾರಗಳನ್ನು ತೆರೆದಿರಿಸುವುದಾಗಿದೆ, ಅದನ್ನು ಕೇವಲ ಅದಕ್ಕಾಗಿಯೇ ಕೈಕೊಂಡರೆ ಅದು ಸಂಪೂರ್ಣವಾಗಿ ವ್ಯರ್ಥ ಪ್ರಯತ್ನವಾಗುವುದು. ಆದರೆ ಅದರರ್ಥ ನಾನು ಅತಿಮಾನಸೀಕರಣಗೊಂಡರೆ ಇಲ್ಲವೆ ಅತಿಮಾನಸೀಕರಣಗೊಂಡಾಗ ಪ್ರತಿಯೊಬ್ಬರು ಅತಿಮಾನಸೀಕರಣ–ಗೊಂಡವರು ಆಗುತ್ತಾರೆ ಎಂದಲ್ಲ. ಅದಕ್ಕಾಗಿ ತಯಾರಿ ಮಾಡಿಕೊಂಡವರು, ಇಲ್ಲವೆ ತಯಾರಿ ಮಾಡಿಕೊಳ್ಳುವವರು ಅತಿಮಾನಸೀಕರಣಗೊಂಡವರು ಆಗಬಹುದು – ಆದಾಗ್ಯೂ ನನ್ನಲ್ಲಿ ಸಿದ್ಧಿಸಿಕೊಂಡದ್ದು ಅದರತ್ತ ಇತರರಿಗೆ ಬಹಳ ಸಹಾಯಕವಾಗಬಹುದು.

ಆದ್ದರಿಂದ ಅದಕ್ಕಾಗಿ ಅಭೀಪ್ಸೆ ಹೊಂದಿರುವುದು ಬಹಳ ನ್ಯಾಯ ಸಮ್ಮತವಾದದ್ದು, – ಅದಕ್ಕಾಗಿ ಹೊಂದಿರಬೇಕಾದ ಮನೋಭಾವವೆಂದರೆ –

1. ಅದನ್ನು ಬಹಳ ವೈಯಕ್ತಿಕ ಇಲ್ಲವೆ ಅಹಂಮನ್ಯತೆಯ ವಿಷಯವನ್ನಾಗಿ ಮಾಡಿ ಅತಿಮಾನಸರಾಗಲು ನೀಟ್ಷೆನದಂತಹ ಇಲ್ಲವೆ ಇತರ ಬಗೆಯ ಮಹತ್ವಾಕಾಂಕ್ಷೆ ಹೊಂದಿರಬಾರದು.

2. ಅದನ್ನು ಸಿದ್ಧಿಸಿಕೊಳ್ಳಲು ಅವಶ್ಯವಿರುವ ಸ್ಥಿತಿಗಳ ಹಾಗೂ ಹಂತಗಳ ಮೂಲಕ ಹಾದು ಹೋಗಲು ಮನುಷ್ಯ ತಯಾರಾಗಿರಬೇಕು.

3. ಮನುಷ್ಯ ನಿಷ್ಕಪಟನಾಗಿರಬೇಕು ಮತ್ತು ಅದು ಭಗವಂತನನ್ನು ಅರಸುತ್ತಿರುವುದರ ಒಂದು ಭಾಗವೆಂದು ಪರಿಗಣಿಸಬೇಕು, ಪರಿಣಾಮವಾಗಿ ಮನುಷ್ಯ ತನ್ನ ದೈವೀ ಸಂಕಲ್ಪದಲ್ಲಿ ಅದರ ಪರಾಕಾಷ್ಠೆ ಕಂಡುಕೊಳ್ಳುತ್ತಾನೆ. ಆ ಸಂಕಲ್ಪ ಚೈತ್ಯೀಕರಣ, ಆಧ್ಯಾತ್ಮೀಕರಣ, ಅತಿಮಾನಸೀಕರಣ ಇಂತಹ ಯಾವುದಕ್ಕಾಗಿಯೇ ಆಗಿರಲಿ ಅದು ಜಗತ್ತಿನಲ್ಲಿ ಭಗವಂತನ ಕಾರ್ಯದ

ನೆರವೇರಿಕೆ ಎಂದು ಪರಿಗಣಿಸಬೇಕು, ವೈಯಕ್ತಿಕ ಅವಕಾಶವೆಂದಾಗಲಿ, ಸಿದ್ಧಿಯೆಂದಾಗಲಿ ಅಲ್ಲ.

**(CWSA, 35/283–84)** – ಶ್ರೀ ಅರವಿಂದರು

*

## ಪರಮೋಚ್ಚ ವಿಜಯಕ್ಕಾಗಿ ನಿಬಂಧನೆಗಳು ಹಾಗೂ ಶ್ರೇಷ್ಠ ರೂಪ ಪರಿವರ್ತನೆ

ಕೆಳಗಿನಿಂದ ಕರೆ ಕೊಡುವ ನಮ್ಮ ಅಭೀಪ್ಸೆ ಹಾಗೂ ಮೇಲ್ಗಡೆಯಿಂದ ಆ ಕರೆಗೆ ಉತ್ತರ ನೀಡುವ ಪರಮೋಚ್ಚ ದೈವೀಕೃಪೆ ಎಂಬ ಎರಡು ಸಾಮರ್ಥ್ಯಗಳಿವೆ. ಇವುಗಳ ಸಂಯೋಗದಿಂದ ಮಾತ್ರ ಶ್ರೇಷ್ಠ ಹಾಗೂ ಕಠಿಣಸಾಧ್ಯವಾದ ನಮ್ಮ ಗುರಿಯನ್ನು ಕಾರ್ಯಗತ ಮಾಡಬಹುದು.

ಆದರೆ ದೈವೀ ಪ್ರಕಾಶ ಹಾಗೂ ದೈವೀ ಸಾಮರ್ಥ್ಯ ಇವು ಇರಿಸುವ ಷರತ್ತುಗಳ ಪ್ರಕಾರ ದೈವೀಕೃಪೆ ಕಾರ್ಯ ಮಾಡಬಲ್ಲದು. ಅದು ಮಿಥ್ಯೆ ಮತ್ತು ಅವಿದ್ಯೆ ಇರಿಸುವ ಷರತ್ತುಗಳ ಪ್ರಕಾರ ಕಾರ್ಯಕೈಕೊಳ್ಳುವುದಿಲ್ಲ. ಏಕೆಂದರೆ ದೈವೀಕೃಪೆ ಮಿಥ್ಯೆಯ ಬೇಡಿಕೆಗಳನ್ನು ಮನ್ನಿಸಿದರೆ, ತನ್ನದೇ ಉದ್ದೇಶ ನಿರರ್ಥಕವಾಗುವಂತೆ ಮಾಡುವುದು.

ಅತ್ಯುಚ್ಚ ದೈವೀಶಕ್ತಿ ಕೆಳಗಿಳಿದು ಬರುವುದಕ್ಕೆ ದೈವೀ ಸತ್ಯದ ಹಾಗೂ ದೈವೀ ಸಾಮರ್ಥ್ಯದ ಇವೆರಡು ಷರತ್ತುಗಳನ್ನು ಪಾಲಿಸಬೇಕು, ಮೇಲಿನಿಂದ ಕೆಳಗಿಳಿದು ಬರುವ ಪರಮೋಚ್ಚ ಅತಿಮಾನಸ ಶಕ್ತಿ ಮತ್ತು ಕೆಳಗೆ ಅದಕ್ಕೆ ನಮ್ಮ ತೆರೆದಿರಿಸಿಕೊಳ್ಳುವಿಕೆ ಇವು ಭೌತಿಕ ಪ್ರಕೃತಿಯನ್ನು ಜಯಶಾಲಿಯಾಗಿ ಹಿಡಿತದಲ್ಲಿಟ್ಟುಕೊಳ್ಳಬಲ್ಲವು ಮತ್ತು ಅದರ ತೊಂದರೆಗಳನ್ನು ನಿರ್ಮೂಲ ಮಾಡಬಲ್ಲವು. ಇಡಿಯಾದ, ನಿಷ್ಪಾಪಟ್ಯದ ಸಮರ್ಪಣವಿರಬೇಕು, ದೈವೀ ಸಾಮರ್ಥ್ಯಕ್ಕೆ ಏಕನಿಷ್ಠ ತೆರೆದಿರಿಸಿಕೊಳ್ಳುವಿಕೆ ಇರಬೇಕು, ಕೆಳಗಿಳಿದು ಬರುತ್ತಿರುವ ದೈವೀ ಸತ್ಯವನ್ನು ಸತತ ಹಾಗೂ ಸಮಗ್ರವಾಗಿ ಆಯ್ದುಕೊಳ್ಳಬೇಕು, ಇನ್ನೂ ಪೃಥ್ವಿ – ಸ್ವಭಾವದ ಮೇಲೆ ಆಳಿಕೆ ನಡೆಸುತ್ತಿರುವ ಮಾನಸಿಕ, ಪ್ರಾಣಿಕ ಹಾಗೂ ಭೌತಿಕ ಸಾಮರ್ಥ್ಯಗಳ ಹಾಗೂ ತೋರಿಕೆಗಳ ಮಿಥ್ಯೆಯನ್ನು ಸತತ ಹಾಗೂ ಸಮಗ್ರವಾಗಿ ನಿರಾಕರಿಸಬೇಕು.



ಜಗತ್ತಿನಲ್ಲಿ ಕೈಕೊಳ್ಳಲಾದ ಎಲ್ಲದರ ಹಿಂದೆ, ಭಗವಂತ ತನ್ನ ದೈವೀಶಕ್ತಿಯ ಮೂಲಕ, ಎಲ್ಲ ಕ್ರಿಯೆಯ ಹಿಂದೆ ಇರುತ್ತಾನೆ, ಆದರೆ ಅವನು ಯೋಗಮಾಯೆಯ ಪರದೆಯ ಹಿಂದೆ ಇರುತ್ತಾನೆ. ನಿಮ್ಮ ಸ್ವಭಾವದಲ್ಲಿ ಜೀವಿಯು ಅಹಂಕಾರದ ಮೂಲಕ ಕಾರ್ಯಕೈಕೊಳ್ಳುತ್ತಾನೆ.

ಯೋಗದಲ್ಲಿಯೂ ಕೂಡ ಭಗವಂತನೇ ಸಾಧಕ ಹಾಗೂ ಸಾಧನೆ ಆಗಿರುತ್ತಾನೆ, ಅವನ ದೈವೀಶಕ್ತಿ ತನ್ನ ಪ್ರಕಾಶ, ಸಾಮರ್ಥ್ಯ, ಜ್ಞಾನ, ಪ್ರಜ್ಞೆ, ಆನಂದ ಇವುಗಳೊಡನೆ (ಜೀವಿಯ) ಆಧಾರದ ಮೇಲೆ ಕಾರ್ಯಕೈಕೊಳ್ಳುತ್ತದೆ. ತೆರೆದುಕೊಂಡ ಆಧಾರದಲ್ಲಿ ಈ ಶಕ್ತಿಗಳನ್ನು ಆ ದೈವೀಶಕ್ತಿ ಸುರಿಯುತ್ತದೆ. ಅದರಿಂದಾಗಿ ಸಾಧನೆಯನ್ನು ಕೈಕೊಳ್ಳುವುದು ಸಾಧ್ಯವಾಗುತ್ತದೆ.

ಆದರೆ ನಿಮ್ಮ ಸ್ವಭಾವ ಕ್ರಿಯಾಶೀಲವಾಗಿರುವವರೆಗೆ ಸಾಧಕನ ವೈಯಕ್ತಿಕ ಪ್ರಯತ್ನದ ಆವಶ್ಯಕತೆ ಇರುತ್ತದೆ.

ಅವಶ್ಯವಾದ ವೈಯಕ್ತಿಕ ಪ್ರಯತ್ನವು, ಅಭೀಪ್ಸೆ, ನಿರಾಕರಣ ಮತ್ತು ಸಮರ್ಪಣ ಎಂಬ ಮೂರು ಬಗೆಯ ಶ್ರಮಸಾಧನೆಯನ್ನು ಒಳಗೊಂಡಿರುತ್ತದೆ:

- ಜಾಗರೂಕವಾಗಿರುವ, ನಿರಂತರ, ತಡೆಯಿಲ್ಲದ ಅಭೀಪ್ಸೆ – ಅದಕ್ಕಾಗಿ ಮನಸ್ಸಿನ ಸಂಕಲ್ಪ, ಹೃದಯದ ಅರಸುವಿಕೆ, ಪ್ರಾಣಿಕ ಸತ್ತೆಯ ಸಮ್ಮತಿ, ಭೌತಿಕ ಪ್ರಜ್ಞೆಯನ್ನು, ಸ್ವಭಾವವನ್ನು ತೆರೆದಿರಿಸುವ, ನಮ್ಯವಾಗಿರುವ (ಬೇಕಾದ ರೀತಿಯಲ್ಲಿ ತಿದ್ದಬಹುದಾದ) ಸಂಕಲ್ಪವಿರಬೇಕಾಗುತ್ತದೆ.
- ನಿಮ್ಮ ಸ್ವಭಾವದ ಚಲನೆಗಳನ್ನು ನಿರಾಕರಿಸುವುದು.

ಮನಸ್ಸಿನ ವಿಚಾರಗಳನ್ನು, ಅಭಿಪ್ರಾಯಗಳನ್ನು, ಆದ್ಯತೆಗಳನ್ನು, ರೂಢಿಗಳನ್ನು, ರಚನೆಗಳನ್ನು ನಿರಾಕರಿಸುವುದು, ಅದರಿಂದಾಗಿ ನಿಶ್ಚಲನೀರವತೆ ಇರುವ ಮನಸ್ಸಿನಲ್ಲಿ ನಿಜವಾದ ಜ್ಞಾನಕ್ಕೆ ಮುಕ್ತಾವಕಾಶ ದೊರಕುವುದು.

ಪ್ರಾಣಿಕ ಸ್ವಭಾವದ ಆಸೆಗಳು, ಬೇಡಿಕೆಗಳು, ಪಿಪಾಸೆಗಳು, ಸಂವೇದನೆಗಳು, ಭಾವೋದ್ರೇಕಗಳು, ಸ್ವಾರ್ಥ, ಅಭಿಮಾನ, ಔದ್ಧತ್ಯ, ಕಾಮ, ಲಾಲಸೆ, ಮತ್ಸರ, ದೈವೀ ಸತ್ಯವನ್ನು ದ್ವೇಷಿಸುವುದು, ಇವೆಲ್ಲವುಗಳನ್ನು ನಿರಾಕರಿಸಬೇಕು. ಅದರಿಂದಾಗಿ ಸ್ಥಿರ, ಭವ್ಯ, ದೃಢ ಮತ್ತು ಮುಡುಪಾಗಿರಿಸಿಕೊಂಡ ಪ್ರಾಣಿಕ ಸತ್ತೆಯಲ್ಲಿ ನಿಜವಾದ ಸಾಮರ್ಥ್ಯ ಮತ್ತು ಸಂತೋಷ ತಮ್ಮನ್ನು ಸುರಿದುಕೊಳ್ಳುವಂತಾಗುವುದು.

ಭೌತಿಕ ಸ್ವಭಾವದ ಮೌಢ್ಯ, ಸಂಶಯ, ಅಪನಂಬಿಕೆ, ಮಬ್ಬುತನ, ಹಟಮಾರಿತನ, ಕ್ಷುಲ್ಲಕತನ, ಆಲಸ್ಯ, ಬದಲಾವಣೆಗೆ ಇಷ್ಟವಿಲ್ಲದಿರುವಿಕೆ, ತಮಸ್ಸು ಇವೆಲ್ಲವುಗಳನ್ನು ನಿರಾಕರಿಸುವುದು, ಅದರಿಂದಾಗಿ ಸತತ ಹೆಚ್ಚು ದೈವಿಕವಾಗಿ ಬೆಳೆಯುತ್ತಿರುವ ದೇಹದಲ್ಲಿ ದೈವೀ ಪ್ರಕಾಶದ, ಆನಂದದ ಸುಭದ್ರತೆ ನೆಲೆಸುವಂತಾಗುವುದು.

– ಮನುಷ್ಯ ತನ್ನನ್ನು, ತಾನಾಗಿರುವುದನ್ನು, ತನ್ನ ಬಳಿ ಇರುವುದೆಲ್ಲವನ್ನು, ತನ್ನ ಪ್ರಜ್ಞೆಯ ಪ್ರತಿ ಸ್ತರವನ್ನು ಮತ್ತು ಪ್ರತಿಯೊಂದು ಚಲನೆಯನ್ನು ಭಗವಂತನಿಗೆ ಹಾಗೂ ಅವನ ದೈವೀಶಕ್ತಿಗೆ ಸಮರ್ಪಿಸಬೇಕು.

**(CWSA, 35/283–84)** – **ಶ್ರೀ ಅರವಿಂದರು**

*

ನಾವು ಎದುರುನೋಡುತ್ತಿರುವುದು ದೈವೀ ದೇಹವೊಂದರಲ್ಲಿ ದೈವೀ ಜೀವನವಿರುವುದರ ಆದರ್ಶದ ಸೂತ್ರವಾಗಿದೆ.

**(CWSA, 13/536)** – **ಶ್ರೀ ಅರವಿಂದರು**

*

## ಮಾನವನ ಪರಿಪೂರ್ಣತೆಗಾಗಿ ಕೊನೆಯ ಭರವಸೆ ಆಧ್ಯಾತ್ಮಿಕತೆಯಲ್ಲಿರುತ್ತದೆ

ವ್ಯಕ್ತಿಯ ಇಲ್ಲವೆ ಸಮಾಜದಲ್ಲಿರುವ ಮನುಷ್ಯನ ಪರಿಪೂರ್ಣತೆಗಾಗಿ ನಮ್ಮ ಏಕೈಕ ಭರವಸೆ ಆಧ್ಯಾತ್ಮಿಕತೆಯಲ್ಲಿರುತ್ತದೆ. ತನ್ನದೇ ಪ್ರತ್ಯೇಕ ತೃಪ್ತಿಗಾಗಿ ಪೃಥ್ವಿಯಿಂದ ಹಾಗೂ ಅದರ ಕಾರ್ಯಗಳಿಂದ ಹೊರಳಿಕೊಳ್ಳುವ ಮನೋಭಾವವಲ್ಲ, ಆದರೆ ಅವುಗಳನ್ನು ಸ್ವೀಕರಿಸಿದಾಗ್ಯೂ ಮೀರಿ ಹೋಗಿ ಅವುಗಳಿಗೆ ನೆರವೇರಿಕೆ ತಂದುಕೊಡುವ ಶ್ರೇಷ್ಠತರ ಮನೋಭಾವ ಬೇಕಾಗುತ್ತದೆ. ಈ ಆಧ್ಯಾತ್ಮಿಕತೆ ತನ್ನಲ್ಲಿ ಕೈಗೆತ್ತಿಕೊಳ್ಳಬೇಕಾದ ವಿಷಯಗಳೆಂದರೆ ಮನುಷ್ಯನ ತರ್ಕಬದ್ಧತೆ, ಸೌಂದರ್ಯಾಭಿರುಚಿ, ನೈತಿಕತೆ, ಜೀವನೋತ್ಸಾಹ, ಜ್ಞಾನಕ್ಕಾಗಿ ಅವನ ಅಭೀಪ್ಸೆ, ಸಶರೀರತೆ, ಪ್ರೇಮಕ್ಕಾಗಿ ಅವನ ಆವಶ್ಯಕತೆ, ಪರಿಪೂರ್ಣತೆಯತ್ತ ಹಂಬಲ, ತನ್ನ ಜೀವನ ಹಾಗೂ ಸತ್ತೆಗಳಿಗಾಗಿ ಸಾಮರ್ಥ್ಯ ಹಾಗೂ ಪರಿಪೂರ್ಣತೆಗಳಿಗಾಗಿ ಒತ್ತಾಯದ ಬೇಡಿಕೆ ಇವೆಲ್ಲವುಗಳಿಗಾಗಿ ಹಾಗೆಯೇ ಕೆಟ್ಟದ್ದಾಗಿ ಪ್ರದಾನ ಮಾಡಿದ



ಶಕ್ತಿಗಳಿಗೆ ಅವುಗಳ ದೈವೀ ಅರ್ಥವನ್ನು ಮತ್ತು ತಮ್ಮ ದೇವಪ್ರಮುಖತೆಗೆ ನಿಬಂಧನೆಗಳನ್ನು ತೆರೆದು ತೋರಿಸುವುದನ್ನು, ಪರಸ್ಪರ ಶಕ್ತಿಗಳಲ್ಲಿ ರಾಜಿಯನ್ನುಂಟುಮಾಡುವುದನ್ನು, ಅರ್ಧ ಪ್ರಕಾಶದಲ್ಲಿ ಛಾಯೆಯಲ್ಲಿ ಕುರುಡುತನದಲ್ಲಿ ಇಲ್ಲವೆ ವಿಚಲಿತಗೊಂಡದ್ದರಲ್ಲಿ ತೊಡಗಿಕೊಂಡ ಪ್ರತಿಯೊಂದರ ದೃಷ್ಟಿಗೆ ಪ್ರಕಾಶ ನೀಡುವುದನ್ನು ಕೈಕೊಳ್ಳುವುದಕ್ಕಾಗಿ ಈ ಆಧ್ಯಾತ್ಮಿಕತೆ ಒಂದು ಸಾಮರ್ಥ್ಯವಾಗಿದೆ, ಈ ಸಾಮರ್ಥ್ಯವನ್ನು ಮನುಷ್ಯನ ಅತಿ–ಸ್ವಸಂತೃಪ್ತಿಯ ತರ್ಕ ಕೂಡ ಸ್ವೀಕರಿಸಬಹುದು ಇಲ್ಲವೆ ಅದು ಸಾರ್ವಭೌಮ ರೀತಿಯದು ಎಂದು ಒಪ್ಪಿಕೊಳ್ಳುವಂತೆ ಮತ್ತು ಅದರಲ್ಲಿ ತನ್ನದೇ ಪರಮೋಚ್ಚ ಪ್ರಕಾಶ, ತನ್ನದೇ ಅನಂತ ಮೂಲಗಳಿರುವುದನ್ನು ನೋಡುವಂತೆ ಮಾಡಬಹುದು. ಏಕೆಂದರೆ ಕೊನೆಗೆ ಅದು ತನ್ನನ್ನು ತರ್ಕಬದ್ಧ ಕೊನೆಯ ವಿಧಾನವೆಂದು, ಅನಿವಾರ್ಯವಾದ ಅಭಿವೃದ್ಧಿಯೆಂದು ಮತ್ತು ಮನುಷ್ಯ ವ್ಯಕ್ತಿಗತವಾಗಿ ಹಾಗೂ ಸಾಮಾಜಿಕವಾಗಿ ಹೆಣಗುತ್ತಿರುವುದೆಲ್ಲದರ ಪರಾಕಾಷ್ಠೆಯೆಂದು ತೆರೆದು ತೋರಿಸುವುದು.

ಆಧ್ಯಾತ್ಮೀಕರಣಗೊಂಡ ಸಮಾಜ ಮಾತ್ರ ವ್ಯಕ್ತಿಗತ ಸಾಮರಸ್ಯ ಮತ್ತು ಸಾಮಾಜಿಕ ಸಂತೋಷ ಇವುಗಳ ಆಳಿಕೆ ಬರುವಂತೆ ಮಾಡಬಹುದು, ಇಲ್ಲವೆ ತರ್ಕದಿಂದ ಹಾಗೂ ಭಾವೋದ್ರೇಕದಿಂದ ದುರುಪಯೋಗ ಪಡಿಸಿಕೊಳ್ಳಬಹುದಾದ ಶಬ್ದಗಳು ಎನಿಸಿದರೂ ಕೂಡ ಅವು ನಾವು ಕಂಡುಕೊಳ್ಳಬಹುದಾದ ಅತ್ಯಂತ ಅಭಿವ್ಯಕ್ತಿಕಾರಕ ಶಬ್ದಗಳು, ಎಂದರೆ ಹೊಸ ಬಗೆಯ ದೇವ ಪ್ರಭುತ್ವ (theocracy), ಪೃಥ್ವಿಯ ಮೇಲೆ ದೇವನ ರಾಜ್ಯ, ಅದು ಮನುಷ್ಯರ ಮನಸ್ಸುಗಳಲ್ಲಿ ಹಾಗೂ ಹೃದಯಗಳಲ್ಲಿ ಭಗವಂತ ನಡೆಸುವ ಮನುಷ್ಯರ ಮೇಲಿನ ಆಳಿಕೆ.

**(CWSA, 25/182–83)** – **ಶ್ರೀ ಅರವಿಂದರು**

*

## ಆಚರಣೆಯ ವಿಧಾನಗಳು – ಮೂರು ಮುಖಗಳು

### ಆಧ್ಯಾತ್ಮಿಕ ಅರಸುವಿಕೆಯ ಮೊದಲ ನಿಜವಾದ ಉದ್ದೇಶ:

ಆಧ್ಯಾತ್ಮಿಕ ದೈವೀ ಸತ್ಯವನ್ನು, ಆಧ್ಯಾತ್ಮಿಕ ಜೀವನವನ್ನು ಅರಸುವುದಕ್ಕಾಗಿರುವ ಮೊದಲ ಕಾರಣ ನಿಜವಾಗಿ ಭಗವಂತನನ್ನು ಕಂಡುಕೊಳ್ಳುವುದಾಗಿದೆ, ಅದು ಅತ್ಯಗತ್ಯದ್ದಾದ ಒಂದು ವಿಷಯ, ಅದಿಲ್ಲದೆ ಉಳಿದದ್ದೆಲ್ಲ ಏನೂ ಅಲ್ಲ. ಭಗವಂತನನ್ನು ಒಮ್ಮೆ ಕಂಡುಕೊಂಡ ನಂತರ ಅವನನ್ನು ಪ್ರಕಟಪಡಿಸಬೇಕು –

ಎಂದರೆ ಮೊಟ್ಟಮೊದಲಿಗೆ ಮನುಷ್ಯ ತನ್ನ ಮಿತಿಗೊಳಗಾದ ಪ್ರಜ್ಞೆ ದೈವೀ ಪ್ರಜ್ಞೆಯಾಗುವಂತೆ ಪರಿವರ್ತನೆಗೆ ಒಳಪಡಿಸಬೇಕು, ಅನಂತ ದೈವೀ ಶಾಂತಿ, ಪ್ರಕಾಶ, ಪ್ರೇಮ, ಬಲ, ದಿವ್ಯಾನಂದ ಇವುಗಳಲ್ಲಿ ಜೀವಿಸಬೇಕು, ಮನುಷ್ಯನ ಸಾರಭೂತ ಸ್ವಭಾವದಲ್ಲಿ ಅದೇ ಆಗಿಬಿಡಬೇಕು. ಅದರ ಪಾತ್ರೆ, ವಾಹಿನಿ ಉಪಕರಣವಾಗುವಿಕೆ ಮನುಷ್ಯನ ಕ್ರಿಯಾಶೀಲ ಸ್ವಭಾವದಲ್ಲಿರಬೇಕು. ಭೌತಿಕ ಸ್ತರದಲ್ಲಿ ಏಕತೆಯ ತತ್ವವನ್ನು ಕ್ರಿಯಾಶೀಲವಾದದ್ದನ್ನಾಗಿ ಮಾಡುವುದು ಇಲ್ಲವೆ ಮನುಕುಲಕ್ಕಾಗಿ ಕಾರ್ಯಕೈಕೊಳ್ಳುವುದು ದೈವೀ ಸತ್ಯವನ್ನು ತಪ್ಪಾಗಿ ಅನುವಾದ ಮಾಡಿದ ಹಾಗಿರುತ್ತದೆ – ಈ ವಿಷಯಗಳು ಆಧ್ಯಾತ್ಮಿಕ ಅರಸುವಿಕೆಯ ಮೊದಲ ನಿಜವಾದ ಉದ್ದೇಶದವು ಎಂದು ಎನಿಸಲಾರವು. ನಾವು ಮೊದಲು ದಿವ್ಯಾತ್ಮನಾದ ಭಗವಂತನನ್ನು ಕಂಡುಹಿಡಿಯಬೇಕು, ನಂತರವಷ್ಟೆ ಆ ದಿವ್ಯಾತ್ಮ ನಮ್ಮಿಂದ ಯಾವ ಕಾರ್ಯವನ್ನು ಒತ್ತಾಯದಿಂದ ಬಯಸುತ್ತಿದ್ದಾನೆ ಎಂಬುದನ್ನು ನಾವು ಅರಿತುಕೊಳ್ಳಬಲ್ಲೆವು. ಅಲ್ಲಿಯ ವರೆಗೆ ನಮ್ಮ ಜೀವನ ಮತ್ತು ಕ್ರಿಯೆ ಕೇವಲ ಭಗವಂತನನ್ನು ಅರಸುವ ಕಾರ್ಯದಲ್ಲಿ ಸಹಾಯಕವಾಗಬಹುದು, ಸಾಧನ ರೂಪದ್ದಾಗಬಹುದು ಮತ್ತು ಅದಕ್ಕೆ ಬೇರೆ ಯಾವ ಉದ್ದೇಶವೂ ಇರಬಾರದು. ನಾವು ಆಂತರಿಕ ಪ್ರಜ್ಞೆಯಲ್ಲಿ ಬೆಳೆದ ಹಾಗೆ ಇಲ್ಲವೆ ಆಧ್ಯಾತ್ಮಿಕ ಸತ್ಯ ನಮ್ಮಲ್ಲಿ ಬೆಳೆದ ಹಾಗೆ ನಮ್ಮ ಜೀವನ ಮತ್ತು ಕ್ರಿಯೆ ನಿಜವಾಗಿ ಅಲ್ಲಿಂದಲೇ ಹೆಚ್ಚು ಹೆಚ್ಚಾಗಿ ಹರಿದು ಬರಬೇಕು, ಮತ್ತು ಅದರೊಂದಿಗೆ ಏಕವಾಗಬೇಕು. ಆದರೆ ಅದಕ್ಕೂ ಮೊದಲು ನಮ್ಮ ಮಿತಿಗೊಳಪಟ್ಟ ಕಲ್ಪನೆಗಳಿಂದ ಅವು ಏನಾಗಿರಬೇಕು ಎಂಬುದನ್ನು ನಿರ್ಧರಿಸುವುದೆಂದರೆ ನಮ್ಮ ಅಂತರಂಗದಲ್ಲಿ ಆಧ್ಯಾತ್ಮಿಕ ಸತ್ಯ ಬೆಳೆಯುವುದಕ್ಕೆ ತಡೆಯನ್ನುಂಟು ಮಾಡಿದಂತಾಗುತ್ತದೆ. ಅದು ಬೆಳೆದ ಹಾಗೆ ದೈವೀ ಪ್ರಕಾಶ ಹಾಗೂ ಸತ್ಯ, ದೈವೀ ಸಾಮರ್ಥ್ಯ ಹಾಗೂ ಶಕ್ತಿ, ದೈವೀ ಪರಿಶುದ್ಧತೆ ಹಾಗೂ ಶಾಂತಿ ನಮ್ಮೊಳಗೆ ಕಾರ್ಯಮಾಡುತ್ತಿರುವುದರ ಭಾವನೆ ತಂದುಕೊಳ್ಳುತ್ತೇವೆ, ಇವೆಲ್ಲ ನಮ್ಮ ಕ್ರಿಯೆಗಳೊಂದಿಗೆ ಮತ್ತು ಪ್ರಜ್ಞೆಯೊಂದಿಗೆ ವ್ಯವಹರಿಸುತ್ತ ನಾವು ದೈವೀ ಪ್ರತೀಕದಲ್ಲಿ ಆಕಾರ ಪಡೆಯುವಂತೆ ಮಾಡುತ್ತವೆ, ಕಲ್ಮಶವನ್ನು ತೆಗೆದು ಹಾಕಿ ಅದರ ಸ್ಥಾನದಲ್ಲಿ ದಿವ್ಯಾತ್ಮದ ಪರಿಶುದ್ಧ ಚಿನ್ನವನ್ನಿರಿಸುತ್ತವೆ. ನಮ್ಮಲ್ಲಿ ಯಾವಾಗಲೂ ದೈವೀ ಸಾನ್ನಿಧ್ಯವಿದ್ದಾಗ ಮಾತ್ರ ಮತ್ತು ಪ್ರಜ್ಞೆ ಪರಿವರ್ತನೆಗೊಂಡಾಗ ಮಾತ್ರ ನಾವು ಭೌತಿಕ ಸ್ತರದ ಮೇಲೆ ಭಗವಂತನನ್ನು ಪ್ರಕಟಿಸಲು ತಯಾರಾಗಿದ್ದೇವೆ ಎಂದು ಹೇಳಲು ನಮಗೆ ಹಕ್ಕಿರುತ್ತದೆ. ಒಂದು ಮಾನಸಿಕ ಆದರ್ಶ ಇಲ್ಲವೆ ತತ್ವವನ್ನು ಎತ್ತಿ ಹಿಡಿದು ಅದನ್ನು ಆಂತರಿಕ ಕಾರ್ಯಗತಿಯ ಮೇಲೆ ಹೇರುವುದು ನಾವು ಮಾನಸಿಕ



ಸಿದ್ಧಿಯನ್ನು ಪಡೆಯುವುದಕ್ಕೆ ಸೀಮಿತಗೊಳಿಸಿಕೊಳ್ಳುವ ಅಪಾಯವನ್ನು ತರುತ್ತದೆ ಇಲ್ಲವೆ ಸಂಪೂರ್ಣ ಸಂಸರ್ಗ ಹಾಗೂ ಏಕತೆಯಲ್ಲಿ ಮತ್ತು ಅವನ ಸಂಕಲ್ಪದ ಮುಕ್ತ ಮತ್ತು ನಿಕಟ ಹೊರಹರಿಯುವಿಕೆಗಳ ನಿಜವಾದ ಬೆಳವಣಿಗೆ ನಮ್ಮ ಜೀವನದಲ್ಲಾಗುವುದನ್ನು ಅರ್ಧರೂಪ ತಾಳುವಂತೆ ಮಾಡಿ ಅಲ್ಲಗಳೆಯುವ ಇಲ್ಲವೆ ಮಿಥ್ಯೆಯ ರೂಪ ತಾಳುವಂತೆ ಮಾಡುವ ಅಪಾಯ ತರುತ್ತದೆ. ಇದು ನೆಲೆ ನಿರ್ದೇಶನದ ಒಂದು ತಪ್ಪು, ಇಂತಹ ತಪ್ಪು ಮಾಡುವ ಪ್ರವೃತ್ತಿಯನ್ನು ಇಂದಿನ ಮಾನವ ಮನಸ್ಸು ವಿಶೇಷವಾಗಿ ಹೊಂದಿದೆ. ಭಗವಂತನನ್ನು ಸಿದ್ಧಿಸಿಕೊಳ್ಳುವು–ದರಿಂದ ದೊರಕುವ ಅವನ ದೈವೀ ಶಾಂತಿ ಇಲ್ಲವೆ ದೈವೀ ಪ್ರಕಾಶ ಇಲ್ಲವೆ ದಿವ್ಯಾನಂದ ಇವುಗಳಿಗಾಗಿ ಅವನನ್ನು ಸಮೀಪಿಸುವುದು ಹೆಚ್ಚು ಒಳ್ಳೆಯದು, ನಮಗೆ ಅತ್ಯಂತ ಅವಶ್ಯವಾಗಿರುವ ಒಂದು ವಿಷಯದಿಂದ ನಮ್ಮನ್ನು ಬೇರೆಡೆ ಹೊರಳಿಸುವ ಚಿಕ್ಕಪುಟ್ಟ ವಿಷಯಗಳನ್ನು ಒಳಗೆ ತರಬಾರದು. ಪ್ರಾಪಂಚಿಕ ಜೀವನದ ಹಾಗೂ ಆಂತರಿಕ ಜೀವನದ ದೈವೀಕರಣ ದೈವೀ ಯೋಜನೆಯ ಒಂದು ಭಾಗವಾಗಿದೆ ಎಂಬುದನ್ನು ನಾವು ನೋಡುತ್ತೇವೆ, ಆದರೆ ಅದು ಆಂತರಿಕ ಸಿದ್ಧಿಯ ಹೊರಹರಿಯುವಿಕೆಯಿಂದ ನೆರವೇರಿಕೆ ಕಂಡುಕೊಳ್ಳುತ್ತದೆ, ಅದು ಅಂತರಂಗದಿಂದ ಹೊರಗೆ ಬೆಳೆಯುವ ಏನೋ ಒಂದು, ಮಾನಸಿಕ ತತ್ವವೊಂದನ್ನು ಕಾರ್ಯಗತಗೊಳಿಸುವುದರಿಂದ ಆಗುವಂತಹದಲ್ಲ.

**ಮಾನಸಿಕ ಅರಸುವಿಕೆಯನ್ನು ಆಧ್ಯಾತ್ಮಿಕ ಅನುಭವವನ್ನಾಗಿ ಪರಿವರ್ತಿಸಲು ಅವಶ್ಯವಾದ ಶಿಸ್ತುಪಾಲನೆ:**

ಮಾನಸಿಕ ಅರಸುವಿಕೆಯನ್ನು ಜೀವಂತ ಆಧ್ಯಾತ್ಮಿಕ ಅನುಭವವನ್ನಾಗಿ ಪರಿವರ್ತಿಸುವುದಕ್ಕೆ ಅನುಸರಿಸಬೇಕಾದ ಶಿಸ್ತುಪಾಲನೆಯನ್ನು ಕುರಿತು ನೀನು ಪ್ರಶ್ನೆ ಕೇಳಿರುವಿ. ಮೊದಲ ಆವಶ್ಯಕತೆ ಎಂದರೆ ನಿನ್ನ ಪ್ರಜ್ಞೆಯನ್ನು ನಿನ್ನಂತರಂಗದಲ್ಲಿ ಏಕಾಗ್ರತೆಯಲ್ಲಿ ಇರಿಸುವ ಆಚರಣೆಯನ್ನು ಕೈಕೊಳ್ಳುವುದಾಗಿದೆ. ಸಾಮಾನ್ಯ ಮಾನವ ಮನಸ್ಸು ಮೇಲ್ಮೈಯಲ್ಲಿ ಚಟುವಟಿಕೆಯಿಂದಿರುತ್ತದೆ, ಅದು ನಿಜವಾದ ಆತ್ಮವನ್ನು ಪರದೆಯ ಹಿಂದಿರಿಸುತ್ತದೆ. ಆದರೆ ಅಲ್ಲಿ ಮೇಲ್ಮೈಯ ಹಿಂದೆ ಅಡಗಿಕೊಂಡಿರುವ ಇನ್ನೊಂದು ಪ್ರಜ್ಞೆಯಿದೆ, ಅದರಲ್ಲಿ ನಾವು ನಮ್ಮ ನಿಜವಾದ ಪ್ರಜ್ಞೆಯ ಬಗ್ಗೆ ಹಾಗೂ ಭವ್ಯ ಆಳಾತಿ ಆಳದಲ್ಲಿರುವ ಸ್ವಭಾವದ ಸತ್ಯದ ಬಗ್ಗೆ ಅರಿವುಳ್ಳವರು ಆಗಬಲ್ಲೆವು, ಆತ್ಮವನ್ನು ಸಿದ್ಧಿಸಿಕೊಳ್ಳಬಲ್ಲೆವು ಮತ್ತು ಸ್ವಭಾವವನ್ನು

ವಿಮೋಚನೆಗೊಳಿಸಬಲ್ಲೆವು ಹಾಗೂ ಪರಿವರ್ತನೆಗೆ ಒಳಪಡಿಸಬಲ್ಲೆವು. ಮೇಲ್ಮೈ ಮನಸ್ಸನ್ನು ಅಚಂಚಲಗೊಳಿಸುವುದು ಮತ್ತು ಅಂತರಂಗದಲ್ಲಿ ಜೀವಿಸುವುದನ್ನು ಪ್ರಾರಂಭಿಸುವುದು ಈ ಏಕಾಗ್ರತೆಯ ಉದ್ದೇಶವಾಗಿದೆ. ಮೇಲ್ಮೈಯದಲ್ಲದ ಈ ನಿಜವಾದ ಪ್ರಜ್ಞೆಗೆ ಎರಡು ಕೇಂದ್ರಗಳಿವೆ: ಒಂದು ಹೃದಯದಲ್ಲಿದೆ (ಭೌತಿಕ ಹೃದಯದಲ್ಲಲ್ಲ, ಆದರೆ ಎದೆಯ ಮಧ್ಯದಲ್ಲಿರುವ ಗುಂಡಿಗೆಯಲ್ಲಿ (cardiac centre) ಇನ್ನೊಂದು ಶಿರದಲ್ಲಿದೆ. ಹೃದಯದಲ್ಲಿ ಕೈಕೊಳ್ಳುವ ಏಕಾಗ್ರತೆ ಅಂತರಂಗದಲ್ಲಿ ತೆರೆದುಕೊಳ್ಳುತ್ತದೆ, ಮತ್ತು ಅಂತರ್ಮುಖವಾಗಿರುವ ಈ ತೆರೆದಿರಿಸುವಿಕೆಯನ್ನು ಅನುಸರಿಸುತ್ತ ಮನುಷ್ಯ ಆತ್ಮದ ಬಗ್ಗೆ ಎಂದರೆ ಚೈತ್ಯಸತ್ತೆಯ ಬಗ್ಗೆ ಅರಿವುಳ್ಳವನಾಗುತ್ತಾನೆ, ಅದು ಮನುಷ್ಯನಲ್ಲಿರುವ ದೈವೀ ಅಂಶವಾಗಿದೆ. ಪರದೆಯಿಂದ ಹೊರಬಂದ ಈ ಸತ್ತೆ ಮುಂಭಾಗಕ್ಕೆ ಬರಲು ಪ್ರಾರಂಭಿಸುತ್ತದೆ, ಅದು ಸ್ವಭಾವದ ಮೇಲೆ ಆಳಿಕೆ ನಡೆಸುತ್ತದೆ, ಅದನ್ನು ಹಾಗೂ ಅದರ ಚಲನೆಗಳನ್ನು ದೈವೀ ಸತ್ಯದತ್ತ, ಭಗವಂತನತ್ತ ಹೊರಳಿಸುತ್ತದೆ ಮತ್ತು ಅದರಲ್ಲಿ ಬರಲು ಮೇಲ್ಗಡೆಗೆ ಇರುವುದೆಲ್ಲದಕ್ಕೆ ಕರೆಕೊಡುತ್ತದೆ. ಅದು ದೈವೀ ಸಾನ್ನಿಧ್ಯದ ಬಗೆಗಿನ ಹಾಗೂ ದೈವೀ ಅತ್ಯುಚ್ಚವಾದದ್ದಕ್ಕೆ ಸತ್ತೆಯ ಮುಡಿಪಾಗಿರಿಸುವಿಕೆಯ ಪ್ರಜ್ಞೆಯನ್ನು ತರುತ್ತದೆ ಮತ್ತು ಮೇಲ್ಗಡೆ ಕಾದುಕೊಂಡಿರುವ ಶ್ರೇಷ್ಠತರ ದೈವೀಶಕ್ತಿ ಹಾಗೂ ದೈವೀ ಪ್ರಜ್ಞೆ ನಮ್ಮ ಸ್ವಭಾವದಲ್ಲಿ ಅವರೋಹಣ ಮಾಡುವುದಕ್ಕೆ ಆಹ್ವಾನಿಸುತ್ತದೆ. ಹೃದಯ ಕೇಂದ್ರದಲ್ಲಿ ತನ್ನನ್ನು ಭಗವಂತನಿಗೆ ಅರ್ಪಿಸುತ್ತ, ಈ ಆಂತರಿಕ ತೆರೆದಿರಿಸಿಕೊಳ್ಳುವಿಕೆಗೆ ಮತ್ತು ಹೃದಯದಲ್ಲಿ ದೈವೀ ಸಾನ್ನಿಧ್ಯವಿರುವುದಕ್ಕೆ ಅಭೀಪ್ಸೆಪಡುತ್ತ ಏಕಾಗ್ರತೆಯಲ್ಲಿರುವುದು ಮೊದಲು ಅನುಸರಿಸಬೇಕಾದ ರೀತಿ, ಏಕೆಂದರೆ ಒಮ್ಮೆ ದೊರಕಿಸಿದ ಅದರ ಪರಿಣಾಮ ಆಧ್ಯಾತ್ಮಿಕ ಮಾರ್ಗವನ್ನು ಇನ್ನೊಂದು ರೀತಿಯಲ್ಲಿ ಅನುಸರಿಸುವುದಕ್ಕಿಂತ ಹೆಚ್ಚು ಸುಲಭವಾದದ್ದನ್ನಾಗಿ, ಸುರಕ್ಷಿತವಾದದ್ದನ್ನಾಗಿ ಮಾಡುತ್ತದೆ.

ಆ ಇನ್ನೊಂದು ರೀತಿ ಶಿರದಲ್ಲಿರುವ ಮನಸ್ಸಿನ ಕೇಂದ್ರದಲ್ಲಿ ಏಕಾಗ್ರತೆ ಕೈಕೊಳ್ಳುವುದಾಗಿದೆ. ಇದು ಮೇಲ್ಮೈಯಲ್ಲಿರುವ ಮನಸ್ಸಿನ ನಿಶ್ಚಲನೀರವತೆಯನ್ನು ತಂದುಕೊಟ್ಟರೆ ಆಂತರಿಕ ಹೆಚ್ಚು ಭವ್ಯವಾದ, ಆಳದಲ್ಲಿರುವ ಮನಸ್ಸನ್ನು ತೆರೆದಿರಿಸುತ್ತದೆ. ಅದು ಆಧ್ಯಾತ್ಮಿಕ ಅನುಭವವನ್ನು ಮತ್ತು ಆಧ್ಯಾತ್ಮಿಕ ಜ್ಞಾನವನ್ನು ಸ್ವೀಕರಿಸಲು ಹೆಚ್ಚಿನ ಕ್ಷಮತೆ ಹೊಂದಿರುತ್ತದೆ. ಆದರೆ ಒಮ್ಮೆ ಇಲ್ಲಿ ಏಕಾಗ್ರತೆಯನ್ನು ಸಾಧಿಸಿದ ನಂತರ ಮನುಷ್ಯ ನಿಶ್ಚಲನೀರವತೆಯಲ್ಲಿರುವ ಊರ್ಧ್ವಮುಖ ಮಾನಸಿಕ



ಪ್ರಜ್ಞೆಯನ್ನು ಮನಸ್ಸಿನ ಮೇಲ್ಗಡೆ ಇರುವುದೆಲ್ಲದಕ್ಕೆ ತೆರೆದಿರಿಸಬೇಕು. ಕೆಲ ಸಮಯದ ನಂತರ ಮನುಷ್ಯ ತನ್ನ ಪ್ರಜ್ಞೆ ಮೇಲ್ಗಡೆ ಏರಿ ಹೋಗುತ್ತಿರುವುದರ ಭಾವನೆ ತಂದುಕೊಳ್ಳುತ್ತಾನೆ ಮತ್ತು ಕೊನೆಗೆ ಅದು ಒಂದು ಮುಚ್ಚಳದಾಚೆಗೆ ಏರಿ ಹೋಗುತ್ತದೆ, ಅಲ್ಲಿಯವರೆಗೆ ಆ ಮುಚ್ಚಳ ಪ್ರಜ್ಞೆಯನ್ನು ದೇಹಕ್ಕೆ ಕಟ್ಟಿ ಹಾಕಿರುತ್ತದೆ, ಮೇಲೆ ಏರಿ ಹೋದ ಪ್ರಜ್ಞೆ ಶಿರದ ಮೇಲೆ ಒಂದು ಕೇಂದ್ರವನ್ನು ಕಂಡುಕೊಳ್ಳುತ್ತದೆ, ಅಲ್ಲಿ ಅದು ಮುಕ್ತ ಹಾಗೂ ಅನಂತವಾಗಿರುತ್ತದೆ. ಅಲ್ಲಿ ಅದು ವಿಶ್ವಂಭರ ದಿವ್ಯಾತ್ಮ, ದೈವೀ ಶಾಂತಿ, ಪ್ರಕಾಶ, ಸಾಮರ್ಥ್ಯ, ಜ್ಞಾನ, ದಿವ್ಯಾನಂದ ಇವುಗಳ ಸಂಪರ್ಕದಲ್ಲಿ ಬರಲು, ಅದರಲ್ಲಿ (ವಿಶ್ವದಲ್ಲಿ) ಪ್ರವೇಶಿಸಲು ಮತ್ತು ಅದಾಗಲು ಸ್ವಭಾವದಲ್ಲಿ ಈ ವಿಷಯಗಳು ಅವರೋಹಣ ಮಾಡುವುದನ್ನು ಭಾವನೆಗೆ ತಂದುಕೊಳ್ಳಲು ಪ್ರಾರಂಭಿಸುತ್ತದೆ, ಮನಸ್ಸಿನಲ್ಲಿ ಅಚಂಚಲತೆಗಾಗಿ ಮತ್ತು ಮೇಲ್ಗಡೆಗಿರುವ ದಿವ್ಯಾತ್ಮ ಹಾಗೂ ಭಗವಂತನಿಗಾಗಿ ಅಭೀಪ್ಸೆಯನ್ನಿಟ್ಟುಕೊಂಡು ಶಿರದಲ್ಲಿ ಏಕಾಗ್ರತೆ ವಹಿಸುವುದು ಎರಡನೆಯ ಬಗೆಯ ಏಕಾಗ್ರತೆಯಾಗಿರುತ್ತದೆ. ಶಿರದಲ್ಲಿ ಪ್ರಜ್ಞೆಯ ಏಕಾಗ್ರತೆ ಮೇಲ್ಗಡೆಗಿರುವ ಕೇಂದ್ರದತ್ತ ಏರಿಹೋಗುವುದಕ್ಕಾಗಿ ಮಾಡಿಕೊಳ್ಳುವ ತಯಾರಿ ಮಾತ್ರ ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದು ಮಹತ್ವದ್ದು, ಹಾಗಿಲ್ಲದೆ ಹೋದರೆ ಮನುಷ್ಯ ತನ್ನದೇ ಮನಸ್ಸಿನಲ್ಲಿ ಹಾಗೂ ಅದರ ಅನುಭವಗಳಲ್ಲಿ ಮುಚ್ಚಿಹಾಕಿಕೊಳ್ಳಬಹುದು ಇಲ್ಲವೆ ಅತಿ ಹೆಚ್ಚೆಂದರೆ ಆಧ್ಯಾತ್ಮಿಕ ಅತೀತತೆಯಲ್ಲಿ ಏರಿ ಹೋಗಿ ಅಲ್ಲಿ ಜೀವಿಸುವುದರ ಬದಲಾಗಿ ಮೇಲ್ಗಡೆಗಿರುವ ದೈವೀ ಸತ್ಯದ ಪ್ರತಿಫಲನವನ್ನು ಸಿದ್ಧಿಸಿಕೊಳ್ಳಬಹುದು. ಕೆಲವರಿಗೆ ಮಾನಸಿಕ ಏಕಾಗ್ರತೆ ಹೆಚ್ಚು ಸುಲಭವಾಗಿರುತ್ತದೆ. ಇನ್ನು ಕೆಲವರಿಗೆ ಹೃದಯ ಕೇಂದ್ರದಲ್ಲಿ ಏಕಾಗ್ರತೆ ಸುಲಭವಾಗಿರುತ್ತದೆ, ಇವೆರಡೂ ವಿಧಾನಗಳನ್ನು ಪರ್ಯಾಯವಾಗಿ ಅನುಸರಿಸಲು ಕ್ಷಮತೆಯಿರುವ ಜನರೂ ಇರುತ್ತಾರೆ, ಆದರೆ ಪ್ರಾರಂಭದ ಹಂತದಲ್ಲಿ ಹೃದಯ ಕೇಂದ್ರದಲ್ಲಿ ಮನುಷ್ಯ ಏಕಾಗ್ರತೆ ಸಾಧಿಸಬಲ್ಲನಾದರೆ ಅದು ಹೆಚ್ಚು ಅಪೇಕ್ಷಣೀಯವಾದದ್ದು.

**ಸ್ವಭಾವದ ಚಟುವಟಿಕೆಗಳ ವಿಷಯದಲ್ಲಿ ಶಿಸ್ತುಪಾಲನೆ:**

ಶಿಸ್ತುಪಾಲನೆಯ ಇನ್ನೊಂದು ಬದಿ ಸ್ವಭಾವದ, ಮನಸ್ಸಿನ, ಪ್ರಾಣಿಕದ ಹಾಗೂ ಚೈತ್ಯ ಸತ್ತೆಯ ಚಟುವಟಿಕೆಗಳ ವಿಷಯದಲ್ಲಿದೆ. ಇಲ್ಲಿರುವ ತತ್ವ ಸ್ವಭಾವಕ್ಕೆ ಆಂತರಿಕ ಸಿದ್ಧಿಯನ್ನು ನೀಡುವುದಾಗಿದೆ, ಅದರಿಂದಾಗಿ ಮನುಷ್ಯ ಅಸಾಮರಸ್ಯದಲ್ಲಿರುವ

ಭಾಗಗಳಲ್ಲಿ ವಿಭಜನೆಗೊಳ್ಳದಂತಾಗುವುದು. ಇಲ್ಲಿ ಹಲವಾರು ಶಿಸ್ತುಪಾಲನೆಗಳು ಇಲ್ಲವೆ ವಿಧಾನಗಳು ಸಾಧ್ಯವಾಗುವಂತಹವಿವೆ. ಮನುಷ್ಯ ತನ್ನ ಎಲ್ಲ ಚಟವಟಿಕೆಗಳನ್ನು ಭಗವಂತನಿಗೆ ಅರ್ಪಿಸಿ ಆಂತರಿಕ ಮಾರ್ಗದರ್ಶನಕ್ಕೆ ಹಾಗೂ ಉಚ್ಚತರ ದೈವೀ ಸಾಮರ್ಥ್ಯ ತನ್ನ ಸ್ವಭಾವವನ್ನು ಕೈಗೆತ್ತಿಕೊಳ್ಳುವುದಕ್ಕಾಗಿ ಕರೆ ಕೊಡುವುದು ಒಂದು ವಿಧಾನ. ಅಲ್ಲಿ ಆತ್ಮದ ಅಂತರ್ಮುಖವಾದ ತೆರೆದಿರಿಸಿಕೊಳ್ಳುವಿಕೆಯಿದ್ದರೆ, ಚೈತ್ಯಸತ್ತೆ ಮುಂಭಾಗಕ್ಕೆ ಬಂದರೆ, ಆಗ ದೊಡ್ಡ ತೊಂದರೆಯೇನೂ ಇರುವುದಿಲ್ಲ. – ಅದರೊಂದಿಗೆ ಚೈತ್ಯಾತ್ಮಿಕ ವ್ಯತ್ಯಾಸ ಗುರುತಿಸುವಿಕೆ, ವಿಷಯಗಳ ಬಗ್ಗೆ ಸತತ ತಿಳಿವಳಿಕೆ, ಕೊನೆಗೆ ಒಂದು ಆಳಿಕೆ ಇವೆಲ್ಲ ಬರುತ್ತವೆ, ಆ ಆಳಿಕೆ ಅಚಂಚಲವಾಗಿ, ತಾಳ್ಮೆಯಿಂದ ಎಲ್ಲ ಅಪರಿಪೂರ್ಣತೆಗಳನ್ನು ತೆಗೆದು ಹಾಕುತ್ತದೆ, ಸರಿಯಾದ ಮಾನಸಿಕ ಮತ್ತು ಪ್ರಾಣಿಕ ಚಲನೆಗಳನ್ನು ತರುತ್ತದೆ, ಮತ್ತು ಭೌತಿಕ ಪ್ರಜ್ಞೆಗೆ ಹೊಸ ಆಕಾರವನ್ನೂ ಕೂಡ ಕೊಡುತ್ತದೆ. ಇನ್ನೊಂದು ವಿಧಾನವೆಂದರೆ ಮನಸ್ಸು, ಪ್ರಾಣ ಮತ್ತು ಭೌತಿಕ ಸತ್ತೆ ಇವುಗಳ ಚಲನೆಗಳ ಬಗ್ಗೆ ನಿರಾಸಕ್ತರಾಗಿ ಹಿಂದೆ ಸರಿದು ನಿಲ್ಲುವುದಾಗಿದೆ, ಅವುಗಳ ಚಟುವಟಿಕೆಗಳು ಸರ್ವಸಾಧಾರಣ ಪ್ರಕೃತಿಯಿಂದ ವ್ಯಕ್ತಿಯಲ್ಲಿ ರೂಢಿಗತವಾಗಿ ರೂಪು ತಳೆದವುಗಳು ಮತ್ತು ಅವುಗಳನ್ನು ಗತಕಾಲದ ಕಾರ್ಯಗತಿಗಳಿಂದ ನಮ್ಮ ಮೇಲೆ ಹೇರಲಾಗಿರುವಂತಹವು ಹಾಗೂ ಅವು ನಮ್ಮ ನಿಜವಾದ ಸತ್ತೆಯ ಯಾವ ಭಾಗಕ್ಕೂ ಸೇರಿದವುಗಳಲ್ಲ ಎಂದು ಪರಿಗಣಿಸುವುದಾಗಿದೆ. ಮನುಷ್ಯ ಇದರಲ್ಲಿ ಯಶಸ್ಸು ಕಂಡುಕೊಂಡ ಪ್ರಮಾಣದಲ್ಲಿ ನಿರಾಸಕ್ತನಾಗುತ್ತಾನೆ, ಮನಸ್ಸು ಮತ್ತು ಅದರ ಚಟುವಟಿಕೆಗಳು, ಪ್ರಾಣ ಹಾಗೂ ಅದರ ಚಟುವಟಿಕೆಗಳು, ದೇಹ ಹಾಗೂ ಅದರ ಚಟುವಟಿಕೆಗಳು ಇವುಗಳಲ್ಲಿ ಯಾವೂ ತಾನಲ್ಲ ಎಂದು ನೋಡುತ್ತಾನೆ, ನಮ್ಮೊಳಗಿರುವ ಆಂತರಿಕ ದೈವೀ ಸತ್ತೆಯ ಬಗ್ಗೆ ಅರಿವುಳ್ಳವನಾಗುತ್ತಾನೆ – ಆಂತರಿಕ ಮಾನಸಿಕ, ಆಂತರಿಕ ಪ್ರಾಣಿಕ ಹಾಗೂ ಆಂತರಿಕ ಭೌತಿಕ – ಮೇಲ್ಗಡೆಗಿರುವ ದಿವ್ಯಾತ್ಮ ಪ್ರತಿಫಲಿಸುತ್ತಿರುವ ರೀತಿಯಲ್ಲಿ ನಿಶ್ಚಲನೀರವತೆಯಲ್ಲಿ, ಅಚಂಚಲನಾಗಿ, ಬಂಧನರಹಿತನಾಗಿ, ನಿರಾಸಕ್ತನಾಗಿ ಉಳಿದುಕೊಳ್ಳುತ್ತಾನೆ, ಮತ್ತು ಅದರ ನೇರ ಪ್ರತಿನಿಧಿಯಾಗಬಲ್ಲನು. ನಿಶ್ಚಲನೀರವತೆಯಲ್ಲಿರುವ ಈ ಆಂತರಿಕ ದೈವೀ ಸತ್ತೆಯಿಂದ ತಿರಸ್ಕರಿಸಬೇಕಾದುದೆಲ್ಲದರ ತಿರಸ್ಕಾರ, ಇರಿಸಿಕೊಳ್ಳಲು ಹಾಗೂ ಪರಿವರ್ತನೆ ಒಳಪಡಿಸಲು ಯೋಗ್ಯವಾದದ್ದರ ಸ್ವೀಕಾರ, ಪರಿಪೂರ್ಣತೆಗಾಗಿ ಆಳಾತಿ ಆಳದ ಸಂಕಲ್ಪ ಇಲ್ಲವೆ ಪ್ರಕೃತಿಯ ಬದಲಾವಣೆಗಾಗಿ



ಅವಶ್ಯವಾದದ್ದನ್ನು ಪ್ರತಿ ಹೆಜ್ಜೆಯಲ್ಲಿ ಕೈಕೊಳ್ಳುವುದಕ್ಕಾಗಿ ಭಗವಂತನಿಗೆ ಕರೆಕೊಡುವಿಕೆ ಇವೆಲ್ಲ ಹೊರಮೊಮ್ಮಿ ಬರುತ್ತವೆ. ಅದು ಮನಸ್ಸು, ಪ್ರಾಣ ಹಾಗೂ ದೇಹಗಳನ್ನು ಆಳಾತಿ ಆಳದ ಚೈತ್ಯ ಸತ್ತೆಗೆ ಹಾಗೂ ಅದರ ಮಾರ್ಗದರ್ಶಕ ಪ್ರಭಾವಕ್ಕೆ ಇಲ್ಲವೆ ಅದರ ನೇರ ಮಾರ್ಗದರ್ಶನಕ್ಕೆ ತೆರೆದಿಡಬಹುದು, ಬಹಳಷ್ಟು ಸಂದರ್ಭಗಳಲ್ಲಿ ಇವೆರಡೂ ವಿಧಾನಗಳು ಹೊರಹೊಮ್ಮುತ್ತವೆ ಹಾಗೂ ಜೊತೆಗೂಡುತ್ತವೆ ಮತ್ತು ಕೊನೆಗೆ ಏಕವಾಗುವಂತೆ ಬೆಸುಗೆಗೆ ಒಳಗಾಗುತ್ತವೆ. ಆದರೆ ಮನುಷ್ಯ ಯಾವುದೊಂದು ವಿಧಾನದಿಂದ ಪ್ರಾರಂಭಿಸಬಹುದು, ಆ ವಿಧಾನ ಅವನಿಗೆ ಅತ್ಯಂತ ಸ್ವಾಭಾವಿಕವಾದದ್ದು, ಮತ್ತು ಅನುಸರಿಸಲು ಸುಲಭವಾದದ್ದು ಎಂಬ ಭಾವನೆ ತಂದುಕೊಡಬೇಕು.

**(SABCL, 23/516–17)** – ಶ್ರೀ ಅರವಿಂದರು

*

## ಭಗವಂತನಿಗೆ ಸ್ವ–ಸಮರ್ಪಣ – ಏಕೈಕ ಪರಿಣಾಮಕಾರಿ ಸಾಧನ

ಮನಸ್ಸು, ಪ್ರಾಣ ಹಾಗೂ ದೇಹ ಇವು ಭಗವಂತನಿಗೆ ಪ್ರಜ್ಞಾಪೂರ್ಣ ಸಮಗ್ರ ಸಮರ್ಪಣ ಮಾಡುವುದನ್ನು ಕಲಿತುಕೊಂಡಾಗ ಮಾತ್ರ ಯೋಗದ ಮಾರ್ಗ ಸುಲಭ, ನೇರವಾದದ್ದು, ತೀವ್ರಗತಿಯದು ಮತ್ತು ಸುರಕ್ಷಿತವಾದ್ದು ಆಗಬಲ್ಲದು.

ಮತ್ತು ಅದು ಭಗವಂತನಿಗೆ ಶರಣಾಗತಿ ಮತ್ತು ತೆರೆದಿರಿಸಿಕೊಳ್ಳುವಿಕೆ ಮಾತ್ರವಾಗಿರಬೇಕು, ಬೇರಾವುದಕ್ಕೂ ಅಲ್ಲ. ಏಕೆಂದರೆ ನಮ್ಮಲ್ಲಿರುವ ಮಬ್ಬಾದ ಮನಸ್ಸಿಗೆ ಇಲ್ಲವೆ ಅಶುದ್ಧ ಪ್ರಾಣಿಕಕ್ಕೆ ಅದೈವಿಕವಾದ ಹಾಗೂ ವಿರೋಧಿ ಶಕ್ತಿಗಳಿಗೆ ಸಮರ್ಪಣ ಮಾಡಿಕೊಳ್ಳುವಿಕೆ ಸಾಧ್ಯವಿದೆ ಮತ್ತು ಅವುಗಳು ಭಗವಂತನೆಂದು ತಪ್ಪಾಗಿ ತಿಳಿದುಕೊಳ್ಳುವ ಸಾಧ್ಯತೆಯಿದೆ. ಅದಕ್ಕಿಂತಲೂ ಹೆಚ್ಚು ಅನಾಹುತ–ಕಾರಿಯಾದ ದೋಷ ಇನ್ನೊಂದಿರಲಾರದು. ಹಾಗಾಗಿ ನಮ್ಮ ಸಮರ್ಪಣ ಎಲ್ಲ ಪ್ರಭಾವಗಳಿಗೆ ಇಲ್ಲವೆ ಯಾವುದೊಂದು ಪ್ರಭಾವಕ್ಕೆ ಕುರುಡಾದ ಹಾಗೂ ಜಡತ್ವದಿಂದ ಕೂಡಿದ ನಿಷ್ಕ್ರಿಯತೆಯಾಗಿರಬಾರದು; ಆದರೆ ಅದು ನಿಷ್ಕಾಪಟ್ಯದ್ದು, ಪ್ರಜ್ಞಾಪೂರ್ಣವಾದದ್ದು, ಜಾಗರೂಕವಾದದ್ದು, ಏಕೈಕ ಹಾಗೂ ಅತ್ಯುಚ್ಚನಾದವನತ್ತ ಏಕಾಗ್ರಗೊಂಡದ್ದು ಆಗಿರಬೇಕು.

ದೈವೀ ಅನಂತ ಜಗನ್ಮಾತೆಗೆ ಸ್ವ–ಅರ್ಪಣೆ ಮಾಡಿಕೊಳ್ಳುವುದು, ಅದೆಷ್ಟೇ ಕಷ್ಟಕರವಾಗಿರಲಿ, ನಮ್ಮ ಏಕೈಕ ಪರಿಣಾಮಕಾರಿ ಸಾಧನವಾಗಿ, ನೆಲೆಸಲು ಏಕೈಕ

ಆಶ್ರಯ ಸ್ಥಾನವಾಗಿ ಇರುವಂತಾಗಬೇಕು. ಅವಳಿಗೆ ಸ್ವ–ಅರ್ಪಣ ಮಾಡಿಕೊಳ್ಳು–ವುದರ ಅರ್ಥ ನಮ್ಮ ಸ್ವಭಾವ ಅವಳ ಕೈಗಳಲ್ಲಿ ಒಂದು ಉಪಕರಣವಾಗುವುದು, ಆತ್ಮ ಅವಳ ತೋಳುಗಳಲ್ಲಿ ಒಂದು ಮಗುವಾಗುವುದಾಗಿದೆ.

**(CWSA, 12/170–71)** – **ಶ್ರೀ ಅರವಿಂದರು**

*

ಅತ್ಯಂತ ಮಹತ್ವಪೂರ್ಣ ಶರಣಾಗತಿ ಎಂದರೆ ನಿಮ್ಮ ಚಾರಿತ್ರ್ಯವನ್ನು ನೀವಿರುವ ರೀತಿಯನ್ನು ಸಮರ್ಪಣ ಮಾಡುವುದಾಗಿದೆ, ಅದರಿಂದಾಗಿ ಅವು ಬದಲಾಗುತ್ತವೆ. ನಿಮ್ಮದೇ ಆದ ಸ್ವಭಾವವನ್ನು ಸಮರ್ಪಣ ಮಾಡಿಕೊಳ್ಳದಿದ್ದರೆ, ಈ ಸ್ವಭಾವ ಎಂದಿಗೂ ಬದಲಾಗುವುದಿಲ್ಲ. ಇದೇ ಅತ್ಯಂತ ಮಹತ್ವದ್ದಾದ ವಿಷಯ. ನಿಮ್ಮಲ್ಲಿ ಅರ್ಥಮಾಡಿಕೊಳ್ಳುವ, ಪ್ರತಿಕ್ರಿಯಿಸುವ, ಭಾವನೆಗೆ ತಂದುಕೊಳ್ಳುವ ಕೆಲವು ವಿಶಿಷ್ಟ ರೀತಿಗಳಿರುತ್ತವೆ, ಬಹುಮಟ್ಟಿಗೆ ಪ್ರಗತಿಗಾಗಿ ಅನುಸರಿಸುವ ಕೆಲವು ರೀತಿಗಳಿರುತ್ತವೆ ಮತ್ತು ಎಲ್ಲದಕ್ಕಿಂತಲೂ ಹೆಚ್ಚಾಗಿ ಜೀವನದತ್ತ ನೋಡುವ ಮತ್ತು ಅದರಿಂದ ನಿರೀಕ್ಷಿಸುವ ವಿಶಿಷ್ಟ ರೀತಿಯಿರುತ್ತದೆ – ಸರಿ ಇದನ್ನೇ ನೀವು ಸಮರ್ಪಣ ಮಾಡಬೇಕು. ಎಂದರೆ ನಿಮಗೆ ನಿಜವಾಗಿ ದೈವೀ ಪ್ರಕಾಶ ಬೇಕಾಗಿದ್ದರೆ, ಪರಿವರ್ತನೆಗೆ ಒಳಪಡಿಸಿಕೊಳ್ಳುವುದನ್ನು ಬಯಸುತ್ತಿದ್ದರೆ ನೀವಿರುವ ಇಡೀ ರೀತಿಯನ್ನೇ ಅರ್ಪಣ ಮಾಡಬೇಕು – ಅದನ್ನು ತೆರೆದಿರಿಸುವುದರ ಮೂಲಕ, ಸಾಧ್ಯವಿದ್ದಷ್ಟು ಸ್ವೀಕರಿಸಲು ಯೋಗ್ಯವಾದದ್ದನ್ನಾಗಿ ಮಾಡಿ ಅರ್ಪಣ ಮಾಡಬೇಕು, ಅದರಿಂದಾಗಿ ನೀವು ಇರಬೇಕಾದದ್ದು ಹೇಗೆ ಎಂಬುದನ್ನು ನೋಡುವ ದೈವೀ ಪ್ರಜ್ಞೆ ನೇರವಾಗಿ ಕಾರ್ಯಕೈಕೊಳ್ಳುವಂತಾಗುವುದು ಮತ್ತು ಇವೆಲ್ಲ ಚಲನೆಗಳನ್ನು ಹೆಚ್ಚು ಸತ್ಯವಾದವುಗಳನ್ನಾಗಿ, ನಿಮ್ಮದೇ ಸತ್ಯಕ್ಕೆ ಅನುಗುಣವಾಗಿ ಬದಲು ಮಾಡುವಂತಾಗುವುದು, ನೀವು ಕೈಕೊಳ್ಳುತ್ತಿರುವುದನ್ನು ಅರ್ಪಣ ಮಾಡುವುದಕ್ಕಿಂತ ಇದು ಅನಂತಪಟ್ಟು ಹೆಚ್ಚು ಮಹತ್ವದ್ದಾಗಿದೆ. ಮನುಷ್ಯ ಏನನ್ನು ಕೈಕೊಳ್ಳುತ್ತಿರುತ್ತಾನೆ ಎಂಬುದು (ಅದು ಅವನಿಗೆ ಬಹಳ ಮಹತ್ವದ್ದೆಂಬುದು ಸ್ಪಷ್ಟವಿದೆ) ಹೆಚ್ಚು ಮಹತ್ವದ್ದಲ್ಲ, ಆದರೆ ಅವನು ಏನಾಗಿದ್ದಾನೆ ಎಂಬುದು ಹೆಚ್ಚು ಮಹತ್ವದ ವಿಷಯ. ಕೈಕೊಳ್ಳುತ್ತಿರುವುದು ಏನೇ ಆಗಿರಲಿ, ಅದನ್ನು ಕೈಕೊಳ್ಳುವ ರೀತಿಗಿಂತ, ಕೈಕೊಳ್ಳುತ್ತಿರುವಾಗಿನ ಪ್ರಜ್ಞೆಯ ಸ್ಥಿತಿ ಬಹಳ ಮಹತ್ವದ್ದು.

**(CWM, 4/372)** – **ಶ್ರೀಮಾತೆ**

*



ವಿಶ್ವದ ತಳಪಾಯವೇ ಆಗಿರುವ, ಸುರಕ್ಷಿತ ಮತ್ತು ಎಲ್ಲದರೊಡನೆ ರಾಜೀಮಾಡಿಕೊಳ್ಳುವ ಸತ್ಯವೆಂದರೆ ಜೀವನ ಸೃಷ್ಟಿಸಲಾಗಿರದ ದಿವ್ಯಾತ್ಮನ ಪ್ರಕಟಣೆಯಾಗಿದೆ ಮತ್ತು ಜೀವನದ ಗುಪ್ತ ರಹಸ್ಯ ಈ ದಿವ್ಯಾತ್ಮ ಸೃಷ್ಟಿಸಲಾದ ತನ್ನದೇ ಅಸ್ತಿತ್ವಗಳೊಡನೆ ಇಟ್ಟುಕೊಂಡಿರುವ ನಿಜವಾದ ಸಂಬಂಧವಾಗಿದೆ ಎಂಬುದು.

**(CWSA, 23/115)** – **ಶ್ರೀ ಅರವಿಂದರು**

*

## ಸನಾತನನಾದವನಿಗೆ ಸಮಗ್ರ ಸ್ವ–ಸಮರ್ಪಣ

ನಮ್ಮ ಸತ್ತೆಯ ಪ್ರತಿಯೊಂದು ಕ್ಷಣ ಮತ್ತು ಪ್ರತಿಯೊಂದು ಚಲನೆ ಸನಾತನನಿಗೆ ಸತತ ಹಾಗೂ ಭಕ್ತಿಪೂರ್ವಕ ಸ್ವ–ಸಮರ್ಪಣವಾಗುವಂತೆ ನಿರ್ಧಾರಿತ–ವಾಗಿರಬೇಕು. ನಮ್ಮ ಎಲ್ಲ ಕ್ರಿಯೆಗಳು, ಅವುಗಳಲ್ಲಿ ಅತ್ಯಂತ ಶ್ರೇಷ್ಠವಾದ, ಅಸಾಧಾರಣವಾದ, ಉದಾತ್ತವಾದವುಗಳಿಗಿಂತ ಕಡಿಮೆಯಲ್ಲದ ರೀತಿಯಲ್ಲಿ ಚಿಕ್ಕಪುಟ್ಟ, ಸರ್ವಸಾಮಾನ್ಯವಾದ, ಕ್ಷುದ್ರವಾದವುಗಳೆಂದು ಎನಿಸುವಂತಹಗಳನ್ನು ಕೂಡ ಮುಡಿಪಾಗಿರಿಸಿಕೊಂಡ ಕ್ರಿಯೆಗಳನ್ನು ಕೈಕೊಳ್ಳುವ ರೀತಿಯಲ್ಲಿ ನಿರ್ವಹಿಸಬೇಕು. ವ್ಯಕ್ತೀಕರಣಗೊಂಡ ನಮ್ಮ ಸ್ವಭಾವ ಏಕೈಕ ಆಂತರಿಕ ಪ್ರಜ್ಞೆಯಲ್ಲಿ ಜೀವಿಸಬೇಕು, ಮತ್ತು ಅಹಂಕಾರದ್ದಲ್ಲದ ಬಾಹ್ಯ ಚಲನೆಯನ್ನು ನಮ್ಮನ್ನು ಮೀರಿ ಆಚೆಗಿರುವುದಕ್ಕೆ ಮುಡಿಪಾಗಿರಿಸಬೇಕು. ಕೊಡಲಾದ ಕಾಣಿಕೆ ಯಾವುದೇ ಆಗಿರಲಿ, ನಮ್ಮಿಂದ ಅದನ್ನು ಯಾರಿಗಾದರೂ ಕೊಡಮಾಡಿರಲಿ ಆ ಕಾರ್ಯದಲ್ಲಿ ಇರಬೇಕಾದ ಪ್ರಜ್ಞೆ ಎಲ್ಲ ಸತ್ತೆಗಳಲ್ಲಿರುವ ದಿವ್ಯಾತ್ಮನಿಗೆ ಅದನ್ನು ಅರ್ಪಿಸುತ್ತಿದ್ದೇವೆ ಎಂದಿರಬೇಕು. ನಮ್ಮ ಅತ್ಯಂತ ಸಾಮಾನ್ಯ ಕ್ರಿಯೆಗಳು ಇಲ್ಲವೆ ನಮ್ಮ ಅತ್ಯಂತ ಒರಟಾದ ಭೌತಿಕ ಕ್ರಿಯೆಗಳು ಘನತೆವೆತ್ತ ಗುಣಲಕ್ಷಣವನ್ನು ಹೊಂದಿರಬೇಕು, ನಾವು ಊಟ ಮಾಡುತ್ತಿರುವಾಗ ಆಹಾರವನ್ನು ನಮ್ಮಲ್ಲಿರುವ ದೈವೀ ಸಾನ್ನಿಧ್ಯಕ್ಕೆ ಅರ್ಪಿಸುತ್ತಿದ್ದೇವೆ ಎಂಬ ಅರಿವು ನಮ್ಮಲ್ಲಿರಬೇಕು, ಅದು ದೇಗುಲದಲ್ಲಿ ಕೈಕೊಳ್ಳುವ ಪವಿತ್ರ ಅರ್ಪಣದಂತಿರಬೇಕು ಮತ್ತು ಕೇವಲ ಭೌತಿಕ ಆವಶ್ಯಕತೆಯ ಭಾವನೆ ಇಲ್ಲವೆ ಆತ್ಮ ಸಂತೃಪ್ತಿಗಾಗಿ ಕೈಕೊಳ್ಳುವ ಭಾವನೆ ಹೊರಟು ಹೋಗಬೇಕು. ಯಾವುದೇ ಶ್ರೇಷ್ಠ ಶ್ರಮಸಾಧನೆಯಲ್ಲಿ, ಯಾವುದೇ ಉಚ್ಚ ಶಿಸ್ತುಪಾಲನೆಯಲ್ಲಿ, ಯಾವುದೇ ಕಠಿಣ ಇಲ್ಲವೆ ಉದಾತ್ತ ಉದ್ಯಮದಲ್ಲಿ, ಅದನ್ನು ನಮ್ಮ ಸಲುವಾಗಿ

ಕೈಗೆತ್ತಿಕೊಂಡಿರಲಿ ಇಲ್ಲವೆ ಇತರರಿಗಾಗಿ, ಕುಲಕ್ಕಾಗಿ ಕೈಕೊಂಡಿರಲಿ, ಇನ್ನು ಮುಂದೆ ನಮ್ಮ ಇಲ್ಲವೆ ಇತರರ ಇಲ್ಲವೆ ಕುಲದ ಮಟ್ಟಕ್ಕೆ ಆ ವಿಚಾರ ಸೀಮಿತಗೊಳ್ಳುವುದಿಲ್ಲ. ನಾವು ಕೈಕೊಳ್ಳುತ್ತಿರುವ ಕಾರ್ಯವನ್ನು ಪ್ರಜ್ಞಾಪೂರ್ವಕವಾಗಿ ಕರ್ಮಗಳ ಯಜ್ಞದ ಸ್ವರೂಪದಲ್ಲಿ ಇವರಾರಿಗೂ ಅಲ್ಲ, ಆದರೆ ಇವರ ಮೂಲಕ ಇಲ್ಲವೆ ನೇರವಾಗಿ ಏಕೈಕನಾದ ದೇವ ಪ್ರಮುಖನಿಗೆ ಅರ್ಪಿಸಬೇಕು. ಈ ಆಕಾರಗಳಲ್ಲಿ ಅಡಗಿಕೊಂಡಿದ್ದ ದೈವೀ ಅಂತರ್ನಿವಾಸಿ, ಇನ್ನು ಮುಂದೆ, ಅಡಗಿಕೊಂಡಿರಬಾರದು. ಆದರೆ ನಮ್ಮ ಆತ್ಮಕ್ಕೆ, ಮನಸ್ಸಿಗೆ, ಭಾವನೆಗೆ ಸದಾ ಉಪಸ್ಥಿತನಾಗಿರಬೇಕು. ಆ ದೈವೀ ಸಾನ್ನಿಧ್ಯ ಅನಂತವಾದದ್ದು, ಅತ್ಯಂತ ಉಚ್ಚವಾದದ್ದು, ಅದರಿಂದ ಮಾತ್ರ ನಮ್ಮ ಶ್ರಮ, ಅಭೀಪ್ಸೆ ಸಾಧ್ಯವಾಗುತ್ತವೆ ಎಂಬ ಭಾವನೆಯಿಂದ ನಮ್ಮ ಕ್ರಿಯೆಗಳ ಕಾರ್ಯಗತಿಗಳನ್ನು, ಪರಿಣಾಮವನ್ನು ಅವನ ಹಸ್ತಗಳಲ್ಲಿರಿಸಬೇಕು. ಏಕೆಂದರೆ ಅವನ ಸತ್ತೆಯಲ್ಲಿ ಎಲ್ಲವೂ ಸಂಭವಿಸುತ್ತದೆ, ಅವನಿಗಾಗಿ ಪ್ರಕೃತಿ ನಮ್ಮ ಎಲ್ಲ ಶ್ರಮ ಹಾಗೂ ಆಭೀಪ್ಸೆಗಳನ್ನು ತೆಗೆದುಕೊಂಡು ಅವನ ವೇದಿಕೆಯ ಮೇಲೆ ಅರ್ಪಿಸುತ್ತದೆ. ಪ್ರಕೃತಿಯೇ ಸ್ವತಃ, ಬಹಳ ಸರಳವಾಗಿ, ಕಾರ್ಯಕೈಕೊಳ್ಳುತ್ತಿದ್ದಾಗಲೂ ಕೂಡ ಮತ್ತು ನಾವು ಕೇವಲ ಸಾಕ್ಷಿಗಳು ಮತ್ತು ಆ ಕಾರ್ಯವನ್ನು ಒಳಗಿರಿಸಿಕೊಳ್ಳುವವರು, ಅದಕ್ಕೆ ಆಧಾರ ನೀಡುವವರು ಆಗಿದ್ದಾಗಲೂ ಕೂಡ, ಆ ಕಾರ್ಯ ಹಾಗೂ ಅದರ ದೈವೀ ಪ್ರಭು ಇವರನ್ನು ಕುರಿತು ಅದೇ ಬಗೆಯ ಸತತ ನೆನಪು ಮತ್ತು ಒತ್ತಾಯ ತರುವ ಪ್ರಜ್ಞೆ ಅಲ್ಲಿರಬೇಕು. ನಮ್ಮ ಶ್ವಾಸೋಚ್ಛ್ವಾಸ, ನಮ್ಮ ಹೃದಯದ ಬಡಿತಗಳು ವಿಶ್ವಂಭರ ಯಜ್ಞದ ಲಯಬದ್ಧತೆಗಳು ಎನ್ನುವ ಹಾಗೆ ಪ್ರಜ್ಞೆ ತಂದುಕೊಳ್ಳುವಂತೆ ಮಾಡಬೇಕು.

ಈ ಯೋಗದ ಆಚರಣೆ ಆ ಒಂದು ವಿಮೋಚನೆಗೊಳಿಸುವ ಜ್ಞಾನದ ನೆನಪನ್ನು ಸತತ ಇರಿಸಿಕೊಳ್ಳುವುದನ್ನು ಒತ್ತಾಯದಿಂದ ಬೇಡುತ್ತದೆ ಮತ್ತು ನೆನಪನ್ನು ಗಾಢವಾಗಿರಿಸಲು ಅದನ್ನು ಕಾರ್ಯಗಳಲ್ಲಿ ಸತತ ಕ್ರಿಯಾಶೀಲವಾಗಿ ಬಾಹ್ಯೀಕರಿಸುವುದನ್ನೂ ಬೇಡುತ್ತದೆ. ಎಲ್ಲದರಲ್ಲಿ ಈ ಏಕೈಕ ದಿವ್ಯಾತ್ಮನಿದ್ದಾನೆ, ಏಕೈಕ ದಿವ್ಯಾತ್ಮ ಎಲ್ಲವೂ ಆಗಿದ್ದಾನೆ; ಎಲ್ಲರೂ ಆ ದಿವ್ಯಾತ್ಮನಲ್ಲಿದ್ದಾರೆ, ಎಲ್ಲರೂ ದೈವಿಕವಾಗಿದ್ದಾರೆ ಮತ್ತು ವಿಶ್ವದಲ್ಲಿ ಅದರ ಹೊರತಾಗಿ ಬೇರೇನೂ ಇಲ್ಲ – ಅದು ಕಾರ್ಯಕರ್ತನ ಪ್ರಜ್ಞೆಯ ಇಡೀ ದ್ರವ್ಯವಾಗುವವರೆಗೆ ಈ ಯೋಚನೆ ಇಲ್ಲವೆ ಈ ನಂಬಿಕೆ ಇಡಿಯಾದ ಹಿನ್ನೆಲೆಯಾಗಿರುತ್ತದೆ. ಈ ಬಗೆಯ ಒಂದು ನೆನಪು, ಸ್ವ-ಶಕ್ತಿದಾಯಕ ಒಂದು ಧ್ಯಾನ ಅದರ ಕೊನೆಯಲ್ಲಿ ಗಾಢವಾದ, ಅಡೆತಡೆಯಿಲ್ಲದ ದರ್ಶನವಾಗುವ ತಿರುವು ಪಡೆಯುತ್ತದೆ ಮತ್ತು ಪಡೆಯಲೇಬೇಕು, ಮತ್ತು ನಾವು ಅಷ್ಟೊಂದು ಸಾಮರ್ಥ್ಯಪೂರ್ಣವಾಗಿ ನೆನಪಿಸಿಕೊಳ್ಳುತ್ತಿರುವುದರ ಇಲ್ಲವೆ ಸತತ ಧ್ಯಾನ ಕೈಕೊಳ್ಳುತ್ತಿರುವುದರ ಎದ್ದುಕಾಣುವ ಹಾಗೂ ಎಲ್ಲವನ್ನೂ ಅಪ್ಪಿಕೊಳ್ಳುವ ಪ್ರಜ್ಞೆಯನ್ನು ಪಡೆಯಬೇಕು. ಏಕೆಂದರೆ ಅದು ಪ್ರತಿಕ್ಷಣ ಎಲ್ಲ ಸತ್ತೆಯ ದೈವೀ ಮೂಲದ, ಸಂಕಲ್ಪದ ಮತ್ತು ಕ್ರಿಯೆಯ ಸೂಚನೆಯನ್ನು ಗಮನಿಸಲು ಒತ್ತಾಯ ತರುತ್ತದೆ ಮತ್ತು ಅಲ್ಲಿ ಒಮ್ಮೆಗೆ ಅವುಗಳ ಕಾರಣ ಹಾಗೂ ಎತ್ತಿಹಿಡಿಯುವಿಕೆ 'ತತ್'ದಲ್ಲಿ ಎಲ್ಲ ವಿಶಿಷ್ಟ ರೂಪಗಳನ್ನು ಹಾಗೂ ತೋರಿಕೆಗಳನ್ನು ಅಪ್ಪಿಕೊಳ್ಳುವುದಕ್ಕಾಗಿ ಮತ್ತು ಮೀರಿಹೋಗುವುದಕ್ಕಾಗಿ ಇವೆ.

**(CWSA, 23/111–13)** – ಶ್ರೀ ಅರವಿಂದರು

*

ಒಂದು ಸುರಕ್ಷಿತ ಹಾಗೂ ಎಲ್ಲವನ್ನೂ ರಾಜಿಗೊಳಪಡಿಸುವ ದೈವೀ ಸತ್ಯವೆಂದರೆ ವಿಶ್ವದ ತಳಹದಿಯೇ ಸ್ವತಃ ಸೃಷ್ಟಿಗೊಳಗಾಗಿರದ ದಿವ್ಯಾತ್ಮನ ಪ್ರಕಟಣೆಯಾಗಿದೆ ಎಂಬುದು, ಮತ್ತು ಜೀವನದ ಗುಪ್ತ ರಹಸ್ಯಕ್ಕೆ ಬೀಗದ ಕೈ ಎಂದರೆ ಈ ದಿವ್ಯಾತ್ಮ ತಾನೇ ಸೃಷ್ಟಿಸಿದ ಅಸ್ತಿತ್ವಗಳೊಂದಿಗೆ ನಿಜವಾದ ಸಂಬಂಧ ಹೊಂದಿರುವುದಾಗಿದೆ

**(CWSA, 23/115)** – ಶ್ರೀ ಅರವಿಂದರು

*

## ಭಾಗ – III : ಪ್ರಾರಂಭ ಮಾಡುವುದು ಹೇಗೆ?

## ಅವಶ್ಯವಾದ ಮೊದಲ ಎರಡು ವಿಷಯಗಳು

ಅವಶ್ಯವಾದ ಮೊದಲ ವಿಷಯ – ಭಗವಂತನಿಗಾಗಿ ಅಭೀಪ್ಸೆ ಹೊಂದಿರುವುದಾಗಿದೆ.

ನೀವು ಕೈಕೊಳ್ಳಬೇಕಾದ ಮುಂದಿನ ವಿಷಯವೆಂದರೆ ಆ ಅಭೀಪ್ಸೆಯನ್ನು ಪೋಷಿಸಿಕೊಂಡು ಹೋಗುವುದು, ಅದನ್ನು ಯಾವಾಗಲೂ ಜಾಗರೂಕತೆಯಿಂದ, ಎಚ್ಚರದಿಂದಿರುವಂತೆ ಮತ್ತು ಜೀವಂತವಿರುವಂತೆ ಇರಿಸುವುದು – ಅದಕ್ಕಾಗಿ ಏಕಾಗ್ರತೆ ಅವಶ್ಯವಾಗಿರುತ್ತದೆ – ದೈವೀ ಸಂಕಲ್ಪ ಮತ್ತು ದೈವೀ ಉದ್ದೇಶಕ್ಕಾಗಿ

ಪರಿಪೂರ್ಣ ಹಾಗೂ ಸಮಗ್ರ ರೀತಿಯಲ್ಲಿ ಮುಡಿಪಾಗಿರಿಸುವುದನ್ನು ಕುರಿತು ಭಗವಂತನ ಮೇಲೆ ಏಕಾಗ್ರತೆ ವಹಿಸಬೇಕು.

*

ನೀವು ಪ್ರಜ್ಞಾಪೂರ್ಣ ಅಭೀಪ್ಸೆಯ ಸ್ಥಿತಿಯಲ್ಲಿದ್ದರೆ ಮತ್ತು ಬಹಳ ನಿಷ್ಕಪಟರಾಗಿದ್ದರೆ, ಸರಿ ನಿಮ್ಮ ಸುತ್ತಲಿರುವ ಪ್ರತಿಯೊಂದನ್ನು ನಿಮ್ಮ ಅಭೀಪ್ಸೆಯಲ್ಲಿ ಸಹಾಯಕವಾಗುವಂತೆ ವ್ಯವಸ್ಥಿತಗೊಳಿಸಲಾಗಿರುತ್ತದೆ, ಅದನ್ನು ನೇರವಾದ ಇಲ್ಲವೆ ಅಪರೋಕ್ಷವಾದ ರೀತಿಯಲ್ಲಿ ಕೈಕೊಂಡಿರಬಹುದು, ಎಂದರೆ ನಿಮ್ಮನ್ನು ಹೊಸದಾದುದರೊಂದಿಗೆ ಸಂಪರ್ಕದಲ್ಲಿರಿಸುವುದಕ್ಕಾಗಿ ಇಲ್ಲವೆ ನಿಮ್ಮ ಸ್ವಭಾವದಲ್ಲಿಂದ ಮಾಯವಾಗಬೇಕಾದ ಏನೋ ಒಂದನ್ನು ತೆಗೆದುಹಾಕುವುದಕ್ಕಾಗಿ ಅದನ್ನು ಕೈಕೊಂಡಿರಬಹುದು. ಇದು ಬಹಳ ಅಸಾಧಾರಣವಾದ ಏನೋ ಒಂದು. ನೀವು, ನಿಜವಾಗಿ, ಅಭೀಪ್ಸೆಯ ಗಾಢ ಸ್ಥಿತಿಯಲ್ಲಿದ್ದಿರಾದರೆ ಈ ಅಭೀಪ್ಸೆಯನ್ನು ಸಿದ್ಧಿಸಿಕೊಳ್ಳಲು ನಿಮ್ಮ ಸಹಾಯಕ್ಕೆ ಬರದೆ ಇರುವ ಯಾವ ಪರಿಸ್ಥಿತಿಯೂ ಇರುವುದಿಲ್ಲ.

**(CWM, 3/1,3, 83–84, 6/176)** **– ಶ್ರೀಮಾತೆ**

*

## ನಿಜವಾದ ಕೈಕೋಲು ನಂಬಿಕೆಯ ಅಗ್ನಿಯಿಂದ ತಯಾರಾಗಿರಬೇಕು

ಮನುಷ್ಯ ಯೋಗವನ್ನು ಕೈಕೊಳ್ಳಲು ಪ್ರಾರಂಭಿಸಿದಾಗ ಅದು ಅನುಭವದ ಆಧಾರದಿಂದ ಆಗಿರುವುದಿಲ್ಲ, ಆದರೆ ಅದು ನಂಬಿಕೆಯ ಬಲದಿಂದ ಆಗಿರುತ್ತದೆ. ಅದು ಯೋಗದಲ್ಲಿ ಹಾಗಿರುವುದಷ್ಟೇ ಅಲ್ಲ, ಆದರೆ ಸಾಮಾನ್ಯ ಜೀವನದಲ್ಲಿಯೂ ಕೂಡ ಹಾಗಿರುತ್ತದೆ. ಕ್ರಿಯಾಶೀಲರಾದ ಜನರು, ಶೋಧಕರು, ಅನ್ವೇಷಕರು, ಜ್ಞಾನವನ್ನು ಅನ್ವೇಷಿಸುವವರು ನಂಬಿಕೆಯಿಂದ ಮುಂದುವರಿದುಕೊಂಡು ಹೋಗುತ್ತಾರೆ; ನಿರಾಶೆ, ವಿಫಲತೆ, ಖಂಡನೆ, ನಿರಾಕರಣೆಗಳಿದ್ದಾಗ್ಯೂ ಅವರು ಮುಂದೆ ಸಾಗಿ ಹೋಗುತ್ತಾರೆ, ಏಕೆಂದರೆ ಇದು ಸತ್ಯವೆಂದು ಹೇಳುವ ಹಾಗೂ ಅದನ್ನು ಅನುಸರಿಸಿಕೊಂಡು ಹೋಗಬೇಕು ಮತ್ತು ಪೂರ್ತಿಗೊಳಿಸಬೇಕು ಎಂದು ಹೇಳುವ ಏನೋ ಒಂದು ಅವರಲ್ಲಿರುತ್ತದೆ. ಕುರುಡು ನಂಬಿಕೆ ತಪ್ಪಾದದ್ದಲ್ಲವೆ ಎಂದು ಶ್ರೀ ರಾಮಕೃಷ್ಣರಿಗೆ ಕೇಳಿದಾಗ ಅವರು ಹೊಂದಿರಬೇಕಾದ ನಂಬಿಕೆ



ಕುರುಡಾದದ್ದೇ ಇರಬೇಕು ಹಾಗಿಲ್ಲದಿದ್ದರೆ ಅದು ನಂಬಿಕೆಯಾಗಿರುವುದಿಲ್ಲ, ಮತ್ತೇನೋ ಆಗಿರುತ್ತದೆ ಎಂದು ಹೇಳಿದರು – ತರ್ಕದಿಂದಾದ ತೀರ್ಮಾನ, ಪ್ರಮಾಣೀಕರಿಸಿದ ಮನವರಿಕೆ, ಇಲ್ಲವೆ ನಿಶ್ಚಿತಪಡಿಸಿಕೊಂಡ ಜ್ಞಾನ ಅದಾಗಿರಬಹುದು.

ಪ್ರಕಟವಾಗಿರದ ಸಿದ್ಧಿಸಿಕೊಂಡಿರದ ಇಲ್ಲವೆ ಸಾಕ್ಷಾತ್ಕರಿಸಿಕೊಂಡಿರದ ಏನೋ ಒಂದಕ್ಕೆ ನಂಬಿಕೆ ಆತ್ಮದ ಸಾಕ್ಷಿಯಾಗಿರುತ್ತದೆ. ಆದರೆ ಅದಿನ್ನೂ ನಮ್ಮಲ್ಲಿ ದೈವೀ ತಿಳಿವಳಿಕೆಯಿದ್ದದ್ದಾಗಿದ್ದು, ಎಲ್ಲ ಸೂಚನೆಗಳ ಅಭಾವವಿದ್ದಾಗ್ಯೂ ಅದು ಸತ್ಯವೆಂದು ಇಲ್ಲವೆ ಸಿದ್ಧಿಸಿಕೊಳ್ಳುವುದಕ್ಕೆ ಅನುಸರಿಸಬೇಕಾದುದಕ್ಕೆ ಪರಮೋಚ್ಚವಾದದ್ದು ಎಂಬ ಭಾವನೆಯಿರುತ್ತದೆ. ಮನಸ್ಸಿನಲ್ಲಿ ಸ್ಥಿರಗೊಂಡ ನಂಬಿಕೆ ಇಲ್ಲದೆ ಇದ್ದಾಗಲೂ, ಪ್ರಾಣಿಕ ಹೋರಾಟ ನಡೆಸುತ್ತಿದ್ದಾಗ, ಬಂಡಾಯವೇಳುತ್ತಿದ್ದಾಗ ಮತ್ತು ತಿರಸ್ಕರಿಸುತ್ತಿದ್ದಾಗಲೂ ಕೂಡ ಈ ವಿಷಯ ನಮ್ಮ ಅಂತರಂಗದಲ್ಲಿ ಉಳಿದುಕೊಳ್ಳುತ್ತದೆ. ಯೋಗವನ್ನು ಆಚರಿಸುವವರಲ್ಲಿ ನಿರಾಶೆಯ, ವಿಫಲತೆಯ, ಅಪನಂಬಿಕೆಯ, ಅಂಧಕಾರದ ದೀರ್ಘ ಅವಧಿಗಳನ್ನು ಹೊಂದಿರದೆ ಇದ್ದವರು ಯಾರಿದ್ದಾರೆ? ಆದರೆ ಅಂತಹ ಮನುಷ್ಯನನ್ನು ಪೋಷಿಸುವ ಏನೋ ಒಂದಿರುತ್ತದೆ, ಅವನನ್ನು ಮೀರಿಯೂ ಅದು ಮುಂದುವರಿದುಕೊಂಡು ಹೋಗುತ್ತದೆ, ಏಕೆಂದರೆ ಅದು ಬೆಂಬತ್ತಿರುವುದು ಇನ್ನೂ ಸತ್ಯವಾದದ್ದು ಎಂಬ ಭಾವನೆ ಅದಕ್ಕಿರುತ್ತದೆ, ಅದು ಭಾವನೆಗೆ ತಂದುಕೊಳ್ಳುವುದಕ್ಕಿಂತ ಹೆಚ್ಚಾಗಿ ತಿಳಿದುಕೊಂಡಿರುತ್ತದೆ. ಭಗವಂತ ಅಸ್ತಿತ್ವದಲ್ಲಿದ್ದಾನೆ, ಅವನನ್ನು ಬೆಂಬತ್ತುವುದು ಮಾತ್ರ ಒಂದು ಅವಶ್ಯವಾದ ವಿಷಯ, ಜೀವನದಲ್ಲಿ ಅದಕ್ಕೆ ಹೋಲಿಸಿದರೆ ಇನ್ನಾವುದೂ ಹೊಂದಲು ಯೋಗ್ಯವಾಗಿರುವುದಿಲ್ಲ ಎಂಬುದು ಆತ್ಮದಲ್ಲಿ ಅಂತರ್ನಿಹಿತವಾದ ಮೂಲಭೂತ ನಂಬಿಕೆಯಾಗಿರುತ್ತದೆ. ಮನುಷ್ಯನಲ್ಲಿ ಇಂತಹ ನಂಬಿಕೆಯಿದ್ದಷ್ಟು ಕಾಲ ಅವನನ್ನು ಆಧ್ಯಾತ್ಮಿಕ ಜೀವನಕ್ಕಾಗಿ ಗುರುತಿಸಲಾಗಿರುತ್ತದೆ, ಅವನ ಸ್ವಭಾವ ಅಡೆತಡೆಗಳಿಂದ ತುಂಬಿಕೊಂಡಿದ್ದಾಗಲೂ, ನಿರಾಕರಣೆಗಳು ಮತ್ತು ತೊಂದರೆಗಳು ಅದರಲ್ಲಿ ಒತ್ತಿ ತುಂಬಿಕೊಂಡಿದ್ದಾಗಲೂ, ಹಲವಾರು ವರ್ಷಗಳ ಕಾಲ ಅವನು ಹೋರಾಡಬೇಕಾದರೂ ಆಧ್ಯಾತ್ಮಿಕ ಜೀವನದಲ್ಲಿ ಯಶಸ್ಸು ಪಡೆಯುವುದಕ್ಕೆ ಅವನನ್ನು ಗುರುತಿಸಲಾಗಿರುತ್ತದೆ ಎಂದು ನಾನು ಹೇಳಬಲ್ಲೆ.

ಈ ನಂಬಿಕೆಯನ್ನು ನೀವು ಅಭಿವೃದ್ಧಿಪಡಿಸಬೇಕು – ಆ ನಂಬಿಕೆ ತರ್ಕ ಮತ್ತು ಸಾಮಾನ್ಯ ಜ್ಞಾನ ಇವುಗಳಿಗೆ ಅನುಗುಣವಾಗಿರಬೇಕು. ಭಗವಂತ ಅಸ್ತಿತ್ವದಲ್ಲಿದ್ದಾನೆ

ಹಾಗೂ ನಿಮಗೆ ಆಧ್ಯಾತ್ಮಿಕ ಮಾರ್ಗದಲ್ಲಿ ಸಾಗಲು ಕರೆಕೊಟ್ಟಿದ್ದಾನೆ ಎಂದಿರುವುದಾದರೆ ಆಗ ಅದರ ಹಿಂದೆ ದೈವೀ ಮಾರ್ಗದರ್ಶನ ಇರಲೇಬೇಕು ಮತ್ತು ಎಲ್ಲ ತೊಂದರೆಗಳ ಮೂಲಕ, ತೊಂದರೆಗಳಿದ್ದಾಗ್ಯೂ ನೀವು ಗುರಿಯನ್ನು ತಲುಪುವಿರಿ. ವಿಫಲತೆಯನ್ನು ಸೂಚಿಸುವ ವಿರೋಧೀ ಧ್ವನಿಗಳಿಗೆ, ತಾಳ್ಮೆಯಿಲ್ಲದ ಧ್ವನಿಗಳಿಗೆ, ಅವುಗಳನ್ನು ಪ್ರತಿಧ್ವನಿಸುವ ಪ್ರಾಣಿಕ ಅವಸರಕ್ಕೆ ಕಿವಿಗೊಡದೆ ಇರುವುದು, ಮಾರ್ಗದಲ್ಲಿ ದೊಡ್ಡ ತೊಂದರೆಗಳಿರುವುದರಿಂದ ಯಶಸ್ಸು ಸಾಧ್ಯವಿಲ್ಲ, ದೇವರು ತನ್ನನ್ನು ಇನ್ನೂ ತೋರಿಸಿಕೊಟ್ಟಿಲ್ಲವಾದ್ದರಿಂದ ಅವನೆಂದಿಗೂ ತನ್ನನ್ನು ತೋರಿಸಿಕೊಡುವುದಿಲ್ಲ ಎಂದು ನಂಬದೆ ಇರುವುದು, ಆದರೆ ಮನುಷ್ಯ ಶ್ರೇಷ್ಠ ಹಾಗೂ ಕಠಿಣವಾದ ಗುರಿಯೊಂದರ ಮೇಲೆ ಲಕ್ಷ್ಯವಿರಿಸಿದಾಗಿನ ಮನೋಭಾವವನ್ನು ಹೊಂದಿರಬೇಕು, ಆ ಮನೋಭಾವ "ನಾನು ಯಶಸ್ಸು ಕಂಡುಕೊಳ್ಳುವವರೆಗೆ ಮುಂದೆ ಸಾಗಿ ಹೋಗುತ್ತೇನೆ. – ತೊಂದರೆಗಳು ಏನು ಬೇಕಾದರೂ ಇರಲಿ" ಎಂದಿರುತ್ತದೆ. ಇದಕ್ಕೆ ಅಧಿಕವಾಗಿ ದೇವನಲ್ಲಿ ನಂಬಿಕೆಯನ್ನಿರಿಸಿಕೊಂಡವನು "ಭಗವಂತ ಅಸ್ತಿತ್ವದಲ್ಲಿದ್ದಾನೆ, ಅವನನ್ನು ಬೆಂಬತ್ತುವಿಕೆ ವಿಫಲಗೊಳ್ಳುವುದಿಲ್ಲ. ಅವನನ್ನು ಕಂಡುಕೊಳ್ಳುವವರೆಗೆ ನಾನು ಎಲ್ಲದರಲ್ಲೂ ಹಾದು ಹೋಗುತ್ತೇನೆ" ಎಂಬುದನ್ನು ಸೇರಿಸುತ್ತಾನೆ.

**(SABCL, 23/572–73)**

*

ಈ 'ಶ್ರದ್ಧಾ' ಶಬ್ದವನ್ನು ಇಂಗ್ಲಿಷ ಶಬ್ದ 'faith' (ನಂಬಿಕೆ) ಸರಿಯಾಗಿ ಅಭಿವ್ಯಕ್ತಪಡಿಸುವುದಿಲ್ಲ. – ಶ್ರದ್ಧಾ ಅದರ, ನೈಜತೆಯಲ್ಲಿ, ಪರಮೋಚ್ಚ ದಿವ್ಯಾತ್ಮನ ಪ್ರಭಾವ ಮತ್ತು ಅದರ ಪ್ರಕಾಶ, ನಮ್ಮ ಅತಿಮಾನಸ ಸತ್ತೆಯಿಂದ ಬರುವ ಸಂದೇಶ, ಅದು ನಿಮ್ನ ಸ್ವಭಾವಕ್ಕೆ ಅದರ ಕ್ಷುಲ್ಲಕ ಸದ್ಯದ ಸ್ಥಿತಿಯಿಂದ ಶ್ರೇಷ್ಠ–ಸಂಭೂತಿಯತ್ತ ಮತ್ತು ಸ್ವ–ಮೀರಿಹೋಗುವಿಕೆಯತ್ತ ಸಾಗಲು ಕರೆಕೊಡುವ ಸಂದೇಶವಾಗಿರುತ್ತದೆ. ಆ ಪ್ರಭಾವವನ್ನು ಸ್ವೀಕರಿಸುವುದು ಮತ್ತು ಉತ್ತರ ನೀಡುವುದು ಹೆಚ್ಚಾಗಿ ಬುದ್ಧಿಮತ್ತೆಯಾಗಲಿ, ಹೃದಯವಾಗಲಿ, ಮನಸ್ಸಾಗಲಿ ಅಲ್ಲ, ಆದರೆ ಅದು ತನ್ನದೇ ಅದೃಷ್ಟದ ಸತ್ಯವನ್ನು ಹಾಗೂ ಮಣಿಹವನ್ನು ಒಳ್ಳೆಯ ರೀತಿಯಲ್ಲಿ ಅರಿತುಕೊಂಡಿರುವ ಆಂತರಿಕ ಆತ್ಮವಾಗಿರುತ್ತದೆ.

**(SABCL, 23/774)** **– ಶ್ರೀ ಅರವಿಂದರು**

*



## ಶ್ರೀಮಾತೆಯವರಿಗೆ ತೆರೆದಿರಿಸಿಕೊಳ್ಳಿರಿ: ಶ್ರೀಮಾತೆಯವರಲ್ಲಿ ಆಶ್ರಯ ಪಡೆಯಿರಿ*

### (ಸಾಧನೆಯಲ್ಲಿ ಅತ್ಯಂತ ಪರಿಪೂರ್ಣವಾದ ರೀತಿ)

ಚೈತ್ಯಾತ್ಮಿಕವಾಗಿ ಶ್ರೀಮಾತೆಯವರಿಗೆ ತೆರೆದಿರಿಸಿಕೊಂಡು ಉಳಿದು–ಕೊಳ್ಳುವುದರಿಂದ ಕಾರ್ಯಕ್ಕಾಗಿ ಇಲ್ಲವೆ ಸಾಧನೆಗಾಗಿ ಅವಶ್ಯವಾದುದೆಲ್ಲ ಪ್ರಗತಿಪರವಾಗಿ ಅಭಿವೃದ್ಧಿ ಹೊಂದುತ್ತದೆ, ಅದು ಬಹಳ ಮುಖ್ಯವಾದ ರಹಸ್ಯಗಳಲ್ಲಿ ಒಂದು, ಹಾಗೂ ಸಾಧನೆಯ ಕೇಂದ್ರ ರಹಸ್ಯವಾಗಿದೆ.

**(CWSA, 32/154)**

*

ಸರ್ವೌಷಧಿ (panacea) ಇದೆ, ಆದರೆ ಅದು ಒಂದೇ ಒಂದಾಗಿದೆ: ಪರಿಪೂರ್ಣ ನಿರ್ಭರವಾಗಿರುವ ಮನೋಭಾವ, ಅದು ಅತ್ಯಂತ ಪರಿಶುದ್ಧವಾದ ರೀತಿಯ ಸಾಧನೆಯ ಶ್ರೇಷ್ಠ ರಹಸ್ಯವಾಗಿದೆ.

'ನಿರ್ಭರ'ದ ಅರ್ಥ ಪರಿಸ್ಥಿತಿ, ತೊಂದರೆ ಏನೇ ಇರಲಿ, ಭಗವಂತನನ್ನು ನೆಚ್ಚಿಕೊಂಡಿರುವುದಾಗಿದೆ. ಎಲ್ಲವೂ ಸುಸೂತ್ರವಾಗಿ ನಡೆದುಕೊಂಡು ಹೋಗುತ್ತಿರುವಾಗ 'ನಿರ್ಭರ'ಕ್ಕೆ ಹೆಚ್ಚಿನ ಅರ್ಥವಿರುವುದಿಲ್ಲ. ಅದು ಮನುಷ್ಯ ಹೊಂದಿರಬೇಕಾದ ಸಮಚಿತ್ತತೆ, ನೀವು ಅದರಲ್ಲಿ ಬೆಳೆಯಬಲ್ಲಿರಿ.

**(Nirodbharan's Correspondence with Sri Aurobindo, Vol. II (1984) p. 650–657)** **– ಶ್ರೀ ಅರವಿಂದರು**

*

* ಈ ಯೋಗದಲ್ಲಿ ಇರುವ ಎರಡು ಶ್ರೇಷ್ಠ ಹೆಜ್ಜೆಗಳಲ್ಲಿ "ಒಂದು ಶ್ರೀಮಾತೆಯವರಲ್ಲಿ ಆಶ್ರಯ ಪಡೆಯುವುದಾಗಿದೆ" ಎಂದು ಶ್ರೀ ಅರವಿಂದರು 17–8–1941ರಲ್ಲಿ ಸಾಧಕನೊಬ್ಬನಿಗೆ ಬರೆದ ಪತ್ರದಲ್ಲಿ ವಿಶದಪಡಿಸಿದ್ದರು. ಬೇರೊಂದು ಸಂದರ್ಭದಲ್ಲಿ ಎರಡನೆಯ ಹೆಜ್ಜೆ ಯಾವುದು ಎಂದು ಕೇಳಿದಾಗ ಅವರು "ದೈವೀ ಜೀವನಕ್ಕಾಗಿ ಸಾಧಕನ ಅಭೀಪ್ಸೆ" ಎಂದು ಹೇಳಿದ್ದರು.

**(CWSA, 32/36)**

ತೆರೆದಿರಿಸಿಕೊಳ್ಳುವಿಕೆಗೆ ಸಮರ್ಪಣ ಅತ್ಯಂತ ಒಳ್ಳೆಯ ರೀತಿ, ಆದರೆ ಸಮರ್ಪಣ ಇಲ್ಲದೆ ಇದ್ದಾಗ ಅಭೀಪ್ಸೆ ಹಾಗೂ ಅಚಂಚಲತೆ ಅದನ್ನು ಒಂದು ಮಟ್ಟದವರೆಗೆ ಕೈಕೊಳ್ಳಬಲ್ಲವು. ಸಮರ್ಪಣದ ಅರ್ಥ ಮನುಷ್ಯ ತಾನಾಗಿರುವುದೆಲ್ಲವನ್ನೂ, ತನ್ನಲ್ಲಿರುವುದೆಲ್ಲವನ್ನೂ ಅರ್ಪಣ ಮಾಡುವುದಾಗಿದೆ, ತನ್ನದೇ ವಿಚಾರಗಳು, ಆಸೆಗಳು, ರೂಢಿಗಳು ಇತ್ಯಾದಿಗಳ ಮೇಲೆ ಒತ್ತುಕೊಡದೆ ಇರುವುದಾಗಿದೆ, ಆದರೆ ಅವುಗಳ ಸ್ಥಾನದಲ್ಲಿ ದೈವೀ ಸತ್ಯವು ತನ್ನ ಜ್ಞಾನ, ಸಂಕಲ್ಪ ಮತ್ತು ಕ್ರಿಯೆ ಇವುಗಳ ಮೂಲಕ, ಎಲ್ಲೆಡೆಯಲ್ಲಿ ಬರಲು ಅನುವು ಮಾಡಿಕೊಡುವುದಾಗಿದೆ.

**(SABCL, 23/603)** – **ಶ್ರೀಮಾತೆ**

*

ಆಂತರಿಕ ಶರಣಾಗತಿಯ ತಿರುಳು ಭಗವಂತನಲ್ಲಿ ವಿಶ್ವಾಸ ಹಾಗೂ ಗಾಢ ನಂಬಿಕೆ ಹೊಂದಿರುವುದಾಗಿದೆ. ಮನುಷ್ಯನ ಮನೋಭಾವ ಹೀಗಿರುತ್ತದೆ: "ನನಗೆ ಭಗವಂತನಲ್ಲದೆ ಬೇರಾವುದೂ ಬೇಕಾಗಿಲ್ಲ. ನನ್ನನ್ನು ಅವನಿಗೆ ಇಡಿಯಾಗಿ ಅರ್ಪಿಸಿಕೊಳ್ಳಲು ಬಯಸುತ್ತೇನೆ. ಮತ್ತು ಅದನ್ನು ನನ್ನ ಆತ್ಮ ಬಯಸುತ್ತಿರುವುದರಿಂದ ನಾನು ಅವನನ್ನು ಭೇಟಿಮಾಡುತ್ತೇನೆ, ಸಿದ್ಧಿಸಿಕೊಳ್ಳುತ್ತೇನೆ, ಇದಲ್ಲದೆ ಬೇರೇನೂ ಆಗಲಾರದು. ನಾನದನ್ನಲ್ಲದೆ ಬೇರೇನನ್ನೂ ಬೇಡುವುದಿಲ್ಲ, ನನ್ನನ್ನು ಅವನೆಡೆಗೆ ಕರೆದೊಯ್ಯುವುದಕ್ಕಾಗಿ ಅವನ ರಹಸ್ಯವಾಗಿರುವ ಇಲ್ಲವೆ ತೆರೆದುಕೊಂಡಿರುವ, ಇಲ್ಲವೆ ಪರದೆಯ ಹಿಂದಿರುವ ಅಥವಾ ಪ್ರಕಟವಾಗಿರುವ ಕ್ರಿಯೆಯನ್ನು ನಾನು ಬಯಸುತ್ತೇನೆ: ನನಗಿಷ್ಟವಾದ ಕಾಲ ಹಾಗೂ ರೀತಿಗಳನ್ನು ಕುರಿತು ಒತ್ತಾಯಪಡಿಸುವುದಿಲ್ಲ, ಅವನು ತನಗಿಷ್ಟವಾದ ಕಾಲ ಹಾಗೂ ರೀತಿಯಲ್ಲಿ ಅದನ್ನು ಕೈಕೊಳ್ಳಲಿ; ನಾನವನನ್ನು ನಂಬುತ್ತೇನೆ, ಅವನ ಸಂಕಲ್ಪವನ್ನು ಸ್ವೀಕರಿಸುತ್ತೇನೆ, ಅವನ ಪ್ರಕಾಶ, ಸಾನ್ನಿಧ್ಯ ಮತ್ತು ಸಂತೋಷ ಇವುಗಳಿಗಾಗಿ ನಾನು ಏಕಪ್ರಕಾರವಾಗಿ ಅಭೀಪ್ಸೆಪಡುತ್ತೇನೆ, ಅವನನ್ನು ನೆಚ್ಚಿಕೊಂಡು, ಎಂದಿಗೂ ಕೈಬಿಟ್ಟುಬಿಡದೆ ಎಲ್ಲ ತೊಂದರೆಗಳು ಮತ್ತು ವಿಳಂಬಗಳ ಮೂಲಕ ಸಾಗಿ ಹೋಗುತ್ತೇನೆ. ನನ್ನ ಮನಸ್ಸು ಅಚಂಚಲವಾಗಿರಲಿ ಹಾಗೂ ಅವನಲ್ಲಿ ವಿಶ್ವಾಸವಿರಿಸಲಿ, ಅವನು ಅದನ್ನು ತನ್ನ ಪ್ರಕಾಶಕ್ಕೆ ತೆರೆದಿರಿಸಲಿ, ನನ್ನ ಪ್ರಾಣಿಕ ಅಚಂಚಲವಾಗಿರಲಿ ಮತ್ತು ಅವನತ್ತ ಮಾತ್ರ ಹೊರಳಲಿ ಮತ್ತು ಅವನು ಅದನ್ನು



ತನ್ನ ಸ್ಥಿರತೆ ಹಾಗೂ ಸಂತೋಷಗಳತ್ತ ಹೊರಳಿಸಲಿ. ಎಲ್ಲವೂ ಅವನಿಗಾಗಿ, ನಾನೂ ಅವನಿಗಾಗಿ. ಏನೇ ಸಂಭವಿಸಲಿ ನಾನು ಈ ಅಭೀಪ್ಸೆಯನ್ನು, ಸ್ವ–ಅರ್ಪಣವನ್ನು ಕಾದಿಟ್ಟುಕೊಂಡಿರುತ್ತೇನೆ ಮತ್ತು ಅದೆಲ್ಲವನ್ನೂ ಕೈಕೊಳ್ಳಲಾಗುವುದು ಎಂಬ ಪರಿಪೂರ್ಣ ನೆಚ್ಚಿಕೆಯಿಂದ ಸಾಗಿ ಹೋಗುತ್ತೇನೆ."

ಈ ಮನೋಭಾವದಲ್ಲಿ ಮನುಷ್ಯ ಬೆಳೆಯಬೇಕು.

**(SABCL, 23/587)**

*

ಮನುಷ್ಯ ಭಗವಂತನ ಪ್ರಭಾವಕ್ಕೆ ತನ್ನನ್ನು ತೆರೆದಿರಿಸಿಕೊಳ್ಳುವುದು ಈ ಯೋಗದಲ್ಲಿರುವ ಇಡೀ ತತ್ವವಾಗಿದೆ. ಅದು ಅಲ್ಲಿ ನಿಮ್ಮ ಮೇಲ್ಗಡೆಗಿದೆ ಮತ್ತು ಒಮ್ಮೆ ನೀವು ಅದರ ಬಗ್ಗೆ ಅರಿವುಳ್ಳವರಾದಾಗ ನಿಮ್ಮೊಳಗೆ ಬರಲು ಅದಕ್ಕೆ ಕರೆಕೊಡಬೇಕು. ಅದು ದೈವೀ ಶಾಂತಿ ಹಾಗೂ ಪ್ರಕಾಶ, ಕಾರ್ಯಕೈಕೊಳ್ಳುವ ದೈವೀಶಕ್ತಿ, ರೂಪವುಳ್ಳ ಇಲ್ಲವೆ ರೂಪರಹಿತ ಭಗವಂತ, ಆನಂದ ಇವುಗಳ ರೂಪದಲ್ಲಿ ಮನಸ್ಸು ಹಾಗೂ ದೇಹಗಳಲ್ಲಿ ಅವರೋಹಣ ಮಾಡುತ್ತದೆ. ಮನುಷ್ಯನಿಗೆ ಇದರ ಬಗ್ಗೆ ಅರಿವುಂಟಾಗುವುದಕ್ಕಿಂತ ಮೊದಲು ಅವನು ನಂಬಿಕೆಯನ್ನಿಟ್ಟುಕೊಳ್ಳಬೇಕು ಮತ್ತು ತೆರೆದಿರಿಸಿಕೊಳ್ಳುವುದಕ್ಕಾಗಿ ಅಭೀಪ್ಸೆಪಡಬೇಕು. ಅಭೀಪ್ಸೆ, ಕರೆ ಹಾಗೂ ಪ್ರಾರ್ಥನೆ ಇವೆಲ್ಲ ಒಂದೇ ವಿಷಯದ ರೂಪಗಳಾಗಿವೆ ಮತ್ತು ಅವೆಲ್ಲ ಪರಿಣಾಮಕಾರಿಯಾಗಿವೆ, ನಿಮಗೆ ಅತ್ಯಂತ ಸುಲಭವೆನಿಸಿದ್ದನ್ನು ನೀವು ಕೈಗೆತ್ತಿಕೊಳ್ಳಬೇಕು. ಏಕಾಗ್ರತೆಯಲ್ಲಿರುವುದು ಇನ್ನೊಂದು ರೀತಿಯಾಗಿದೆ. ನಿಮ್ಮ ಪ್ರಜ್ಞೆಯನ್ನು ಹೃದಯದಲ್ಲಿ ಏಕಾಗ್ರಗೊಳಿಸಬೇಕು (ಕೆಲವರು ಶಿರದಲ್ಲಿ ಇಲ್ಲವೆ ಶಿರದ ಮೇಲೆ ಇದನ್ನು ಕೈಕೊಳ್ಳುತ್ತಾರೆ) ಮತ್ತು ಶ್ರೀಮಾತೆಯವರನ್ನು ಕುರಿತು ಹೃದಯದಲ್ಲಿ ಧ್ಯಾನ ಮಾಡಬೇಕು, ಅವರು ಅಲ್ಲಿಗೆ ಬರುವಂತೆ ಅವರಿಗೆ ಕರೆಕೊಡಬೇಕು. ಮನುಷ್ಯ ಇವೆರಡು ರೀತಿಗಳಲ್ಲಿ ಯಾವುದಾದರೊಂದನ್ನು ಇಲ್ಲವೆ ಎರಡನ್ನೂ ಭಿನ್ನ ಕಾಲಗಳಲ್ಲಿ ಕೈಕೊಳ್ಳಬಹುದು – ಯಾವುದು ನಿಮಗೆ ಸ್ವಾಭಾವಿಕವಾಗಿ ಬರುವುದೋ ಅದನ್ನು ಇಲ್ಲವೆ ಅವುಗಳಲ್ಲಿ ಒಂದನ್ನು ಅನುಸರಿಸಬೇಕೆಂಬ ಚಲನೆ ಆ ಕ್ಷಣದಲ್ಲಿ ನಿಮ್ಮಲ್ಲಿ ಆದಾಗ ಅದನ್ನು ಕೈಕೊಳ್ಳಬೇಕು. ಪ್ರಾರಂಭದ ಹಂತದಲ್ಲಿ, ವಿಶೇಷವಾಗಿ, ಮನಸ್ಸನ್ನು ಅಚಂಚಲವಾಗಿರುವಂತೆ ಇರಿಸಿಕೊಳ್ಳುವುದು ಅತ್ಯಂತ ಅವಶ್ಯವಾಗಿರುತ್ತದೆ. ಧ್ಯಾನದ ಸಮಯದಲ್ಲಿ ಸಾಧನೆಗೆ

ಪರಕೀಯವಾದ ಎಲ್ಲ ಯೋಚನೆಗಳನ್ನು ತಿರಸ್ಕರಿಸಬೇಕು. ಅಚಂಚಲ ಮನಸ್ಸಿನಲ್ಲಿ ಅನುಭವಕ್ಕಾಗಿ ಪ್ರಗತಿಪರ ತಯಾರಿಯಿರುತ್ತದೆ. ಆದರೆ ಎಲ್ಲವನ್ನೂ ಒಮ್ಮೆಗೆ ಕೈಕೊಳ್ಳಲು ಸಾಧ್ಯವಾಗದೆ ಹೋದಾಗ ನೀವು ತಾಳ್ಮೆಯನ್ನು ಕಳೆದುಕೊಳ್ಳಬಾರದು. ಮನಸ್ಸಿನಲ್ಲಿ ಅಚಂಚಲತೆ ಇಡಿಯಾಗಿ ಬರುವುದಕ್ಕೆ ಕಾಲ ಬೇಕಾಗುತ್ತದೆ, ಪ್ರಜ್ಞೆ ತಯಾರಾಗುವವರೆಗೆ ನೀವು ಮುಂದುವರಿದುಕೊಂಡು ಹೋಗಬೇಕು.

**(SABCL, 23/604–05)** **– ಶ್ರೀ ಅರವಿಂದರು**

*

ಸಮರ್ಪಣ ಹಾಗೂ ಮುಡಿಪಾಗಿರಿಸಿಕೊಳ್ಳುವಿಕೆ ಇವು ಪ್ರಗತಿ ಸಾಧಿಸಿದ ಪ್ರಮಾಣದಲ್ಲಿ ಸಾಧಕನು ತನ್ನ ಸಾಧನೆಯನ್ನು ದೈವೀಶಕ್ತಿ ಕೈಕೊಳ್ಳುತ್ತಿರುವುದರ ಬಗ್ಗೆ, ತನ್ನಲ್ಲಿ ಆ ಶಕ್ತಿ ಹೆಚ್ಚು ಹೆಚ್ಚಾಗಿ ಸುರಿದುಕೊಳ್ಳುತ್ತಿರುವುದರ ಬಗ್ಗೆ, ಆ ಶಕ್ತಿಯ ಸ್ವಾತಂತ್ರ್ಯ ಹಾಗೂ ಪರಿಪೂರ್ಣತೆ ತನ್ನಲ್ಲಿ ಸ್ಥಾಪಿತವಾಗುತ್ತಿರುವುದರ ಬಗ್ಗೆ ಅರಿವುಳ್ಳವನಾಗುತ್ತಾನೆ, ಅವನ ಈ ಪ್ರಯತ್ನದ ಸ್ಥಾನದಲ್ಲಿ ಈ ಪ್ರಜ್ಞಾಪೂರ್ವ ವಿಧಾನ ಬರುತ್ತಿದ್ದಂತೆ ಅವನ ಪ್ರಗತಿ ತೀವ್ರಗತಿಯದು ಹಾಗೂ ನಿಜವಾದದ್ದು ಆಗುತ್ತದೆ. ಆದರೆ ಅವನ ಸಮರ್ಪಣ ಹಾಗೂ ಮುಡಿಪಾಗಿರಿಸಿಕೊಳ್ಳುವಿಕೆ ಮೇಲಿನಿಂದ ಕೆಳಗಿನ ವರೆಗೆ ಪರಿಶುದ್ಧ ಹಾಗೂ ಸಂಪೂರ್ಣವಾಗುವವರೆಗೆ, ವೈಯಕ್ತಿಕ ಪ್ರಯತ್ನದ ಸ್ಥಾನದಲ್ಲಿ, ಆ ದೈವೀಶಕ್ತಿಯ ಪ್ರಜ್ಞಾಪೂರ್ವಕ ವಿಧಾನ ಬರಲಾರದು.

ಆ ನಿಬಂಧನೆಗಳನ್ನು ಈಡೇರಿಸಲು ನಿರಾಕರಿಸುವ ಮತ್ತು ಎಲ್ಲವನ್ನೂ ಭಗವಂತನೇ ಕೈಕೊಳ್ಳಲೆಂದು ಅವನಿಗೆ ಕರೆಕೊಡುವ, ಎಲ್ಲ ತೊಂದರೆ ಹಾಗೂ ಹೋರಾಟಗಳನ್ನು ಎದುರಿಸದೆ ಉಳಿದುಕೊಳ್ಳಲು ಬಯಸುವ ತಾಮಸಿಕ ಸಮರ್ಪಣ ಒಂದು ಮೋಸವಾಗಿರುತ್ತದೆ, ಅದು ಮನುಷ್ಯನನ್ನು ಸ್ವಾತಂತ್ರ್ಯ ಹಾಗೂ ಪರಿಪೂರ್ಣತೆಗಳತ್ತ ಕರೆದೊಯ್ಯುವುದಿಲ್ಲ ಎಂಬುದನ್ನು ಗಮನಿಸಬೇಕು.

**(SABCL, 25/8)** **– ಶ್ರೀ ಅರವಿಂದರು**

*

ನೀವು ಈ ಯೋಗದತ್ತ ಬಂದಾಗ ನಿಮ್ಮ ಎಲ್ಲ ಮಾನಸಿಕ ನಿರ್ಮಾಣಗಳು ಮತ್ತು ನಿಮ್ಮ ಎಲ್ಲ ಪ್ರಾಣಿಕ ಚೌಕಟ್ಟುಗಳು ಚೂರು ಚೂರಾಗುವಂತೆ



ಬಿಟ್ಟುಕೊಡುವುದಕ್ಕೆ ನೀವು ತಯಾರಾಗಿರಬೇಕು. ನಿಮಗೆ ಆಧಾರ ನೀಡಲು ನಿಮ್ಮ ನಂಬಿಕೆಯ ಹೊರತಾಗಿ ಬೇರಾವುದೂ ಇಲ್ಲದೆ ಗಾಳಿಯಲ್ಲಿ ತೂಗಾಡಲು ನೀವು ಸಿದ್ಧತೆ ಮಾಡಿಕೊಂಡಿರಬೇಕು. ನಿಮ್ಮ ಗತಕಾಲವನ್ನು ಹಾಗೂ ಅದರ ಅಂಟಿಕೊಳ್ಳುವಿಕೆಯನ್ನು ನೀವು ಒಟ್ಟಿನಲ್ಲಿ ಮರೆತು ಬಿಡಬೇಕಾಗುತ್ತದೆ, ಅದನ್ನು ನಿಮ್ಮ ಪ್ರಜ್ಞೆಯಿಂದ ಕಿತ್ತೆಸೆದು, ಎಲ್ಲ ಬಗೆಯ ಬಂಧನದಿಂದ ಮುಕ್ತರಾಗಿ ಹೊಸಜನ್ಮ ತಾಳುವಂತಾಗಬೇಕು. ನೀವೇನಾಗಿದ್ದಿರಿ ಎಂಬುದನ್ನು ಕುರಿತು ಯೋಚಿಸುವುದು ಬೇಡ, ನೀವಾಗಲು ಅಭೀಪ್ಸೆಪಡುತ್ತಿರುವುದನ್ನು ಕುರಿತು ಯೋಚಿಸಿರಿ, ನೀವು ಸಿದ್ಧಿಸಿಕೊಳ್ಳಬೇಕಾದುದರಲ್ಲಿ ಇದ್ದುಕೊಂಡುಬಿಡಿರಿ. ಮೃತ ಗತಕಾಲದಿಂದ ಹೊರಳಿಕೊಂಡು ನೇರವಾಗಿ ಭವಿಷ್ಯತ್ತಿನತ್ತ ನೋಡಿರಿ. ನಿಮ್ಮ ಧರ್ಮ, ದೇಶ, ಕುಟುಂಬ ಎಲ್ಲವೂ ಅಲ್ಲಿವೆ, ಅದು ಭಗವಂತ.

**(CWM, 3/83–84)** **– ಶ್ರೀಮಾತೆ**

*

ಮನುಷ್ಯನ ಅಂತರಂಗದಲ್ಲಿ ದೈವೀ ಕೃಪೆಯಲ್ಲಿ ನಂಬಿಕೆಯಿದ್ದರೆ, ದೈವೀ ಕೃಪೆ ಯಾವಾಗಲೂ ತನ್ನ ಮೇಲೆ ಕಾವಲಿರಿಸುತ್ತದೆ ಎಂಬ ನಂಬಿಕೆ ಅವನಲ್ಲಿದ್ದರೆ ಸಂಭವಿಸುವುದು ಏನೇ ಆಗಿರಲಿ ದೈವೀ ಕೃಪೆ ಅಲ್ಲಿರುತ್ತದೆ, ಅವನ ಮೇಲೆ ಕಾವಲಿರಿಸುತ್ತದೆ. ಮನುಷ್ಯ ಈ ನಂಬಿಕೆಯನ್ನು ತನ್ನ ಜೀವನದುದ್ದಕ್ಕೂ ಇಟ್ಟುಕೊಂಡಿರಬಹುದು ಮತ್ತು ಯಾವಾಗಲೂ ಇಟ್ಟುಕೊಂಡಿರಬೇಕು, ಇದರೊಂದಿಗೆ ಮನುಷ್ಯ ಎಲ್ಲ ಅಪಾಯಗಳಿಂದ ದಾಟಿ ಹೋಗಬಲ್ಲ, ಎಲ್ಲ ತೊಂದರೆಗಳನ್ನು ಎದುರಿಸಬಲ್ಲ, ಮತ್ತು ಯಾವುದೂ ಅಲ್ಲಾಡುವುದಿಲ್ಲ, ಏಕೆಂದರೆ ನಿಮ್ಮಲ್ಲಿ ನಂಬಿಕೆಯಿರುತ್ತದೆ ಮತ್ತು ದೈವೀ ಕೃಪೆ ನಿಮ್ಮೊಂದಿಗಿರುತ್ತದೆ. ನಿಮ್ಮ ನಂಬಿಕೆ ಅನಂತಪಟ್ಟು ಬಲಿಷ್ಠವಾಗಿರುತ್ತದೆ, ಹೆಚ್ಚು ಪ್ರಜ್ಞಾವಂತವಾಗಿರುತ್ತದೆ, ಹೆಚ್ಚುಕಾಲ ಉಳಿದುಕೊಳ್ಳುವ ಶಕ್ತಿಯಾಗಿರುತ್ತದೆ, ಅದು ನಿಮ್ಮ ಭೌತಿಕ ಶರೀರ ರಚನೆಯ ಸ್ಥಿತಿಗಳ ಮೇಲಾಗಲಿ, ದೈವೀ ಕೃಪೆಯ ಹೊರತಾಗಿ ಬೇರೆ ಇನ್ನಾವುದರ ಮೇಲಾಗಲಿ ಅವಲಂಬಿಸಿರುವುದಿಲ್ಲ. ಮತ್ತು ಹಾಗಾಗಿ ಅದು ದೈವೀ ಸತ್ಯದ ಆಸರೆ ಪಡೆಯುತ್ತದೆ ಮತ್ತು ಅದನ್ನು ಯಾವುದೂ ಅಲುಗಾಡಿಸಲಾರದು.

**(CWM, 5/297)** **– ಶ್ರೀಮಾತೆ**

*

**ಪ್ರಶ್ನೆ :** *ಮಾನಸಿಕ ಹಾಗೂ ದೈಹಿಕ ಶಿಕ್ಷಣಕ್ಕಾಗಿ ಪರಿಶ್ರಮಪಡುವುದಕ್ಕಾಗಿ ವಿಧಿಪೂರ್ವಕವಾದ ಪ್ರಗತಿಯ ಕ್ರಮ ಇರುವ ಹಾಗೆ ಶ್ರೀ ಅರವಿಂದರ ಯೋಗದತ್ತ ಪ್ರಗತಿ ಸಾಧಿಸುವುದಕ್ಕಾಗಿ ಅದೇ ಬಗೆಯ ವಿಧಾನವಿದೆಯೆ?*

**ಶ್ರೀಮಾತೆ :** ಭೌತಿಕ, ಮಾನಸಿಕ ಹಾಗೂ ಪ್ರಾಣಿಕ ಅಭಿವೃದ್ಧಿಗಾಗಿ ನಿಶ್ಚಿತಪಡಿಸಿದ ಕಾರ್ಯಕ್ರಮಗಳಿಗೆ ಯಾಂತ್ರಿಕ ಕ್ರಮಬದ್ಧತೆ ಅತ್ಯಗತ್ಯದ್ದಾಗಿರುತ್ತದೆ. ಆದರೆ ಈ ಯಾಂತ್ರಿಕ ಕಟ್ಟುನಿಟ್ಟು ಆಧ್ಯಾತ್ಮಿಕ ಪ್ರಗತಿಗೆ ಅತಿ ಕಡಿಮೆ ಪರಿಣಾಮಕಾರಿಯಾಗಿ–ರುತ್ತದೆ, ಅಲ್ಲಿ ಸ್ವಯಂಪ್ರೇರಿತ ಪರಿಪೂರ್ಣ ನಿಷ್ಕಾಪಟ್ಯ ಅತ್ಯಗತ್ಯದ್ದಾಗಿರುತ್ತದೆ.

ಹಾಗಿದ್ದಾಗ್ಯೂ ನಿಮ್ಮನ್ನು ಆಧ್ಯಾತ್ಮಿಕ ಮಾರ್ಗದಲ್ಲಿರಿಸಲು ಸಹಾಯಕವಾಗ–ಬಹುದಾದುದನ್ನು ನಾನು ಹೇಳಬಹುದು:

1. ಬೆಳಿಗ್ಗೆ ಎದ್ದಕೂಡಲೆ, ದಿನದ ಕಾರ್ಯಕ್ರಮವನ್ನು ಪ್ರಾರಂಭಿಸುವ ಮೊದಲು, ಈ ದಿನವನ್ನು ಭಗವಂತನಿಗೆ ಅರ್ಪಣ ಮಾಡುವುದು ಒಳ್ಳೆಯದು, ಅದು ಮನುಷ್ಯ ಯೋಚಿಸುವುದೆಲ್ಲದರ, ಅವನಾಗಿರುವುದೆಲ್ಲದರ ಮತ್ತು ಅವನು ಕೈಕೊಳ್ಳಲಿರುವುದೆಲ್ಲದರ ಅರ್ಪಣ ಮಾಡುವುದಾಗಿದೆ.

2. ರಾತ್ರಿಕಾಲ, ನಿದ್ರೆ ಮಾಡುವುದಕ್ಕಿಂತ ಮೊದಲು ಆ ದಿನ ಕೈಕೊಂಡದ್ದರ ಪರಿಶೀಲನೆ ಮಾಡುವುದು ಒಳ್ಳೆಯದು, ಮನುಷ್ಯ ತನ್ನನ್ನು, ತನ್ನ ಕಾರ್ಯವನ್ನು, ಅರ್ಪಣ ಮಾಡಿಕೊಳ್ಳಲು ಮರೆತಿದ್ದ ಹಾಗೂ ಅಲಕ್ಷಿಸಿದ್ದ ಎಲ್ಲ ಸಮಯಗಳನ್ನು ಗಮನಕ್ಕೆ ತಂದುಕೊಳ್ಳುವುದು ಮತ್ತು ಇಂತಹ ಅಚಾತುರ್ಯ ಮತ್ತೊಮ್ಮೆ ಆಗದಿರಲಿ ಎಂದು ಅಭೀಪ್ಸೆಪಡಬೇಕು ಮತ್ತು ಪ್ರಾರ್ಥನೆ ಮಾಡಬೇಕು.

ಇದು ಕನಿಷ್ಠ ಮಟ್ಟ, ಅತಿ ಚಿಕ್ಕ ಪ್ರಾರಂಭ – ಅದು ನಿಮ್ಮ ಮುಡುಪಾಗಿರಿಸಿ–ಕೊಳ್ಳುವಿಕೆಯೊಂದಿಗೆ ಹೆಚ್ಚುತ್ತ ಹೋಗಬೇಕು.

**(CWM, 16/315–16)** **– ಶ್ರೀಮಾತೆ**

*



## ಮೊದಲ ಚಲನೆ – ಆಂತರೀಕರಿಸಿಕೊಳ್ಳುವಿಕೆ

ಜನರು ಬಾಹ್ಯ ವಿಷಯಗಳಲ್ಲಿ ಮಗ್ನರಾಗಿರುತ್ತಾರೆ. ಅದರರ್ಥ ಮನುಷ್ಯ ನೋಡುವ, ತಿಳಿದುಕೊಳ್ಳುವ ಹಾಗೂ ಕೈಕೊಳ್ಳುವ ಜೀವನದ ಎಲ್ಲ ಬಾಹ್ಯ ವಿಷಯಗಳತ್ತ ಅವನ ಪ್ರಜ್ಞೆ ಹೊರಳಿಕೊಂಡಿರುತ್ತದೆ, ಅದರ ಬದಲಾಗಿ ಆ ಪ್ರಜ್ಞೆ ಆಳವಾದ ಸತ್ಯವನ್ನು, ದೈವೀ ಸಾನ್ನಿಧ್ಯವನ್ನು ಕಂಡುಕೊಳ್ಳುವುದರತ್ತ ಹೊರಳಬೇಕು. ಇದು ಮೊದಲು ಕೈಕೊಳ್ಳಬೇಕಾದ ಚಲನೆ. ನೀವು ಕೈಕೊಳ್ಳುವುದೆಲ್ಲದರಲ್ಲಿ, ನಿಮ್ಮ ಸುತ್ತಲಿರುವ ಜನರೊಂದಿಗೆ, ಉಪಯೋಗಿಸುವ ವಸ್ತುಗಳೊಂದಿಗೆ ನಿರತರಾಗಿರುತ್ತೀರಿ ಮತ್ತು ಜೀವನದೊಂದಿಗೆ: ನಿದ್ರೆಮಾಡುವುದು, ಆಹಾರ ಸೇವಿಸುವುದು, ಮಾತನಾಡುವುದು, ಸ್ವಲ್ಪ ಕಾರ್ಯ ಮಾಡುವುದು, ಸ್ವಲ್ಪ ಮೋಜಿನಲ್ಲಿರುವುದು, ಮತ್ತೆ ಅದನ್ನೇ ಪುನರಾರಂಭಿಸುವುದು: ನಿದ್ರೆ ಮಾಡುವುದು, ಆಹಾರ ಸೇವಿಸುವುದು .. ಇತ್ಯಾದಿ ಮತ್ತೆ ಅದು ಪ್ರಾರಂಭವಾಗುತ್ತದೆ. ಮತ್ತು ನಂತರ ಈ ಒಬ್ಬ ಏನನ್ನು ಹೇಳಿದ, ಏನನ್ನು ಕೈಕೊಂಡ, ಅವನು ಕೈಕೊಳ್ಳ–ಬೇಕಾದುದೇನು, ಕಲಿತುಕೊಳ್ಳಬೇಕಾದ ಪಾಠ ಯಾವುದು, ಅಭ್ಯಾಸದ ತಯಾರಿ, ಅವನು ಆರೋಗ್ಯದಿಂದಿರುವನೆ, ಕಾರ್ಯಕೈಕೊಳ್ಳುವುದಕ್ಕೆ ಯೋಗ್ಯನಾಗಿರುವನೆ ಇತ್ಯಾದಿ. ಮನುಷ್ಯ ಸಾಮಾನ್ಯವಾಗಿ ಯೋಚಿಸುವುದು ಈ ರೀತಿಯದಾಗಿರುತ್ತದೆ.

ಹಾಗಾಗಿ ಮೊದಲ ಚಲನೆ – ಅದು ಅಷ್ಟು ಸುಲಭವಾಗಿರುವುದಿಲ್ಲ – ಅದೆಲ್ಲ ಹಿನ್ನೆಲೆಯಲ್ಲಿರುವಂತೆ ಮಾಡುವುದಾಗಿದೆ, ಅತ್ಯಂತ ಮಹತ್ವದ್ದಾದ ಒಂದು ವಿಷಯ ಒಳಬರಲು, ಪ್ರಜ್ಞೆಯ ಎದುರಿರಲು ಅದಕ್ಕೆ ಅನುವು ಮಾಡಿಕೊಡಬೇಕು, ಆ ವಿಷಯವೆಂದರೆ: ಅಸ್ತಿತ್ವದ ಮತ್ತು ಜೀವನದ ಉದ್ದೇಶವೇನು? ಮನುಷ್ಯ ಏನಾಗಿದ್ದಾನೆ, ಏಕೆ ಜೀವಿಸುತ್ತಾನೆ ಮತ್ತು ಇದೆಲ್ಲದರ ಹಿಂದೆ ಏನಿದೆ ಎಂಬುದನ್ನು ಶೋಧಿಸುವುದಾಗಿದೆ. ಇದು ಮೊದಲ ಹೆಜ್ಜೆ: ಪ್ರಕಟಣೆಯಲ್ಲಿ ಏನಿದೆ ಎಂಬುದರಲ್ಲಿ ಇರಿಸಿಕೊಳ್ಳುವುದಕ್ಕಿಂತ ಹೆಚ್ಚಿನ ಅಭಿರುಚಿಯನ್ನು ಆ ಪ್ರಕಟಣೆಯ ಗುರಿ ಹಾಗೂ ಕಾರಣವೇನು ಎಂಬುದರಲ್ಲಿ ಹೊಂದಬೇಕು. ಎಂದರೆ ಮೊದಲ ಚಲನೆ: ಈ ಬಾಹ್ಯ ಹಾಗೂ ತೋರಿಕೆಗಳ ವಿಷಯಗಳೊಡನೆ ಗುರುತಿಸಿಕೊಂಡಿರುವ ಪ್ರಜ್ಞೆಯನ್ನು ಹಿಂದೆಗೆದುಕೊಳ್ಳುವುದಾಗಿದೆ, ಮನುಷ್ಯ ಶೋಧಿಸಬೇಕಾದುದರ ಮೇಲೆ, ಶೋಧಿಸಬೇಕಾದ ದೈವೀ ಸತ್ಯದ ಮೇಲೆ ಏಕಾಗ್ರತೆಯಿಂದ ಇರುವುದಾಗಿದೆ. ಇದು ಮೊದಲ ಚಲನೆ.

... ಮೊದಲು ಹಿಮ್ಮೊಗವಾಗಿರುವ ಮಾರ್ಗದಲ್ಲಿ ಸಾಗಬೇಕು. ಅಭಿವ್ಯಕ್ತ–ಪಡಿಸಬೇಕಾದ ಈ ದೈವೀ ಸತ್ಯವನ್ನು ಮನುಷ್ಯ ತನ್ನೊಳಗೆ ಕಂಡುಕೊಳ್ಳುವುದಕ್ಕಾಗಿ ಅಂತರೀಕರಿಸಿಕೊಳ್ಳಬೇಕು ಮತ್ತು ಜೀವನದಿಂದ ಹಿಂದೆಗೆಯಬೇಕು.

ಮನುಷ್ಯ ಈ ಹಂತದ ಮೇಲೆ ಜಿಗಿದು ಅದನ್ನು ತಪ್ಪಿಸಿಕೊಂಡು ಹೋಗಲಾಗುವುದಿಲ್ಲ. ಮನುಷ್ಯ ತನ್ನ ಆತ್ಮವನ್ನು ಕಂಡುಕೊಳ್ಳಬೇಕು ಹಾಗೂ ಅದರೊಡನೆ ತಾದಾತ್ಮ್ಯ ಪಡೆಯಬೇಕು, ಇದು ಅತ್ಯಗತ್ಯವಾದದ್ದು ನಂತರ ಅವನು ಪರಿವರ್ತನೆಯತ್ತ ಬರಬಲ್ಲ.

**(CWM, 7/349–50)** **– ಶ್ರೀಮಾತೆ**

*

## ನಿಮ್ಮೊಳಗಿರುವ ದೈವತ್ವವನ್ನು ಶೋಧಿಸಿರಿ

ಮನುಷ್ಯ ತನ್ನೊಳಗಿರುವ ದೈವತ್ವದ ಬಗ್ಗೆ ಅರಿವುಳ್ಳವನಾಗುವವರೆಗೆ, ಮತ್ತು ಅಹಂಕಾರದಿಂದ ಭಿನ್ನವಾದ ತನ್ನ ನಿಜವಾದ ಆತ್ಮವನ್ನು ತನ್ನ ವಶದಲ್ಲಿಟ್ಟುಕೊಳ್ಳುವವರೆಗೆ ಅವನ ಸ್ವಾತಂತ್ರ್ಯ ಹಾಗೂ ಪ್ರಭುತ್ವ ಎಳ್ಳಷ್ಟೂ ನಿಜವಾಗಿರುವುದಿಲ್ಲ ಮತ್ತು ಸಂಪೂರ್ಣವಾಗುವುದು ಎಂದರೆ 'ಆತ್ಮವಾನ್' ಆಗುವುದು ಸಾಧ್ಯವಾಗುವುದಿಲ್ಲ. ಅದನ್ನೇ ಪ್ರಕೃತಿ ಮನಸ್ಸಿನಲ್ಲಿ, ಪ್ರಾಣದಲ್ಲಿ ಹಾಗೂ ದೇಹದಲ್ಲಿ ಅಭಿವ್ಯಕ್ತಪಡಿಸಲು ಶ್ರಮಿಸುತ್ತಿದೆ, ಅದೇ ಪ್ರಕೃತಿಯ ಮೇಲೆ ಸತ್ತೆಯ ಹಾಗೂ ಕ್ರಿಯೆಯ ಆ ನಿಯಮ ಈ ನಿಯಮ ಇತ್ಯಾದಿಗಳನ್ನು ಎಂದರೆ ಸ್ವಭಾವವನ್ನು ಹೇರುತ್ತದೆ. ಅದೇ ನಮ್ಮೊಳಗಿರುವ ಆತ್ಮದ ಬಾಹ್ಯ ಅದೃಷ್ಟ ಹಾಗೂ ಉತ್ಕ್ರಾಂತಿ ಇವು ಆಕಾರ ಪಡೆಯುವಂತೆ ಮಾಡುತ್ತದೆ. ಹಾಗಾಗಿ ಮನುಷ್ಯ ತನ್ನ ನಿಜವಾದ ಆತ್ಮವನ್ನು ವಶಪಡಿಸಿಕೊಂಡಾಗ ಅವನ ಸ್ವಭಾವ ದೇವ ಪ್ರಮುಖನ ಪ್ರಜ್ಞಾವಂತ ಉಪಕರಣ ಮತ್ತು ಜ್ಞಾನೋದಯ ಪಡೆದ ಸಾಮರ್ಥ್ಯವಾಗಲು ಸಾಧ್ಯವಾಗುವುದು.

**(CWSA, 19/554)** **– ಶ್ರೀ ಅರವಿಂದರು**

*



ದೈವತ್ವವನ್ನು ತನ್ನೊಳಗೆ ಶೋಧಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಿದವರಿಗೆ ಬೋಧನಾ ರೂಪದ ಕೆಲವು ಸರಳ ಶಬ್ದಗಳು ಉಪಯುಕ್ತ–ವಾಗಬಲ್ಲವು.

ಮೊಟ್ಟಮೊದಲಿನ ಹಾಗೂ ಅತ್ಯಂತ ಮಹತ್ವದ್ದಾಗಿರುವ ವಿಷಯವೆಂದರೆ ಮನಸ್ಸು ಆಧ್ಯಾತ್ಮಿಕ ವಿಷಯಗಳನ್ನು ಕುರಿತು ತೀರ್ಮಾನ ನೀಡಲು ಅಸಮರ್ಥವಾಗಿದೆ ಎಂಬುದು. ಈ ವಿಷಯವನ್ನು ಕುರಿತು ಬರೆದವರೆಲ್ಲರೂ ಅದನ್ನೇ ಹೇಳಿದ್ದಾರೆ, ಆದರೆ ಕೆಲವೇ ಜನರು ಅದನ್ನು ಪ್ರಯೋಗದಲ್ಲಿ ತಂದುಕೊಂಡಿದ್ದಾರೆ. ಹಾಗಿದ್ದಾಗ್ಯೂ ಆಧ್ಯಾತ್ಮಿಕ ಮಾರ್ಗದಲ್ಲಿ ಸಾಗಿ ಹೋಗಲು ಮಾನಸಿಕ ಅಭಿಪ್ರಾಯ ಹಾಗೂ ಪ್ರತಿಕ್ರಿಯೆ ಇವುಗಳಿಂದ ದೂರವಿರುವುದು ಅತ್ಯಗತ್ಯವಾದದ್ದು.

ಸುಖ ಸೌಲಭ್ಯಕ್ಕಾಗಿ, ತೃಪ್ತಿಗಾಗಿ, ಸಂತೋಷಕ್ಕಾಗಿ ಎಲ್ಲ ವೈಯಕ್ತಿಕ ಅರಸುವಿಕೆಯನ್ನು ಬಿಟ್ಟುಕೊಡಿರಿ. ಪ್ರಗತಿಗಾಗಿ ಪ್ರಜ್ವಲಿಸುವ ಅಗ್ನಿಯಾಗಿರಿ, ನಿಮ್ಮೆಡೆಗೆ ಬಂದದ್ದನ್ನು ನಿಮ್ಮ ಪ್ರಗತಿಗೆ ಸಹಾಯಕವೆಂದು ತೆಗೆದುಕೊಳ್ಳಿರಿ ಮತ್ತು ಕೂಡಲೆ ಅವಶ್ಯವಾಗಿರುವ ಪ್ರಗತಿಯನ್ನು ಸಾಧಿಸಿರಿ.

ನೀವು ಕೈಕೊಳ್ಳುವುದೆಲ್ಲದರಲ್ಲಿ ಸಂತೋಷ ಕಂಡುಕೊಳ್ಳಲು ಪ್ರಯತ್ನಿಸಿರಿ, ಆದರೆ ಸಂತೋಷಕ್ಕಾಗಿಯೇ ಎಂದು ಏನನ್ನೂ ಕೈಕೊಳ್ಳಬೇಡಿರಿ. ಉದ್ರೇಕಕ್ಕೊಳ–ಗಾಗಬೇಡಿರಿ, ದುರ್ಬಲರಾಗಬೇಡಿರಿ, ಇಲ್ಲವೆ ಕಳವಳಕ್ಕೊಳಗಾಗಬೇಡಿರಿ. ಎಲ್ಲ ಪರಿಸ್ಥಿತಿಗಳ ಎದುರು ಪರಿಪೂರ್ಣ ಸ್ಥಿರತೆಯಿಂದ ಉಳಿದುಕೊಳ್ಳಿರಿ. ಆದಾಗ್ಯೂ ನೀವು ಇನ್ನೂ ಸಾಧಿಸಬೇಕಾದ ಪ್ರಗತಿಯನ್ನು ಕುರಿತು ಶೋಧ ಮಾಡುವುದಕ್ಕೆ ಚುರುಕಾಗಿರಿ ಮತ್ತು ಅದನ್ನು ಸಮಯ ಹಾಳುಮಾಡದೆ ಕೂಡಲೆ ಕೈಕೊಳ್ಳಿರಿ.

ಭೌತಿಕ ಘಟನೆಗಳನ್ನು ಅವುಗಳ ಮುಖಬೆಲೆಯ ಮೇಲೆ ತೆಗೆದುಕೊಳ್ಳುವುದು ಬೇಡ. ಅವು ಯಾವಾಗಲೂ ಇನ್ನೇನನ್ನೋ ಅಭಿವ್ಯಕ್ತಪಡಿಸುವ ಅಂದಗೆಟ್ಟ ಪ್ರಯತ್ನಗಳ ಹಾಗಿರುತ್ತವೆ. ನಮ್ಮ ಮೇಲ್ಮೈ ತಿಳಿವಳಿಕೆ ನಿಜವಾದ ವಿಷಯವನ್ನು ತಪ್ಪಿಸಿಕೊಂಡಿರುತ್ತದೆ.

ಇನ್ನೊಬ್ಬನ ನಡವಳಿಕೆ ಕುರಿತು, ಅವನು ಆ ರೀತಿ ವರ್ತಿಸಲು ಅವನಲ್ಲಿರುವ ಸ್ವಭಾವವನ್ನು ಬದಲು ಮಾಡುವ ಸಾಮರ್ಥ್ಯ ನಿಮ್ಮಲ್ಲಿರದಿದ್ದರೆ, ಕೇವಲ

ದೂರುವುದು ಬೇಡ; ನಿಮ್ಮಲ್ಲಿ ಸಾಮರ್ಥ್ಯವಿದ್ದರೆ ದೂರುವುದರ ಬದಲಾಗಿ ಅದನ್ನು ಬದಲು ಮಾಡಬೇಕು.

ನೀವು ಕೈಕೊಳ್ಳುತ್ತಿರುವುದು ಏನೇ ಆಗಿರಲಿ, ನಿಮ್ಮೆದುರಿಗೆ ಇರಿಸಿಕೊಂಡ ಗುರಿಯನ್ನು ಮರೆಯುವುದು ಬೇಡ. ನೀವು ಈ ಶೋಧದತ್ತ ಹೊರಟಿರುವುದರಿಂದ ದೊಡ್ಡದು, ಚಿಕ್ಕದು ಎಂಬುದು ಯಾವುದೂ ಇರುವುದಿಲ್ಲ, ಎಲ್ಲ ವಿಷಯಗಳು ಸಮಾನ ಮಹತ್ವವನ್ನು ಹೊಂದಿರುತ್ತವೆ, ಅವು ಯಶಸ್ಸನ್ನು ತೀವ್ರಗೊಳಿಸಬಹುದು ಇಲ್ಲವೆ ನಿಧಾನಗೊಳಿಸಬಹುದು. ನೀವು ಆಹಾರ ಸೇವಿಸುವುದಕ್ಕಿಂತ ಮೊದಲು ಕ್ಷಣಕಾಲ, ನೀವು ಸೇವಿಸಲಿರುವ ಆಹಾರ ನಿಮ್ಮ ದೇಹಕ್ಕೆ, ನೀವು ಶೋಧಿಸಲು ಹೊರಟಿರುವ ಶ್ರೇಷ್ಠ ಗುರಿಗಾಗಿ, ಅವಶ್ಯವಾದ, ದ್ರವ್ಯವನ್ನು ಒದಗಿಸಲಿ, ಅದು ಗಟ್ಟಿಮುಟ್ಟಾದ ಆಧಾರವಾಗಲಿ ಮತ್ತು ಆ ಪ್ರಯತ್ನವನ್ನು ಪಟ್ಟು ಹಿಡಿದು ಕೈಕೊಳ್ಳುವುದಕ್ಕಾಗಿ ಅವಶ್ಯವಿರುವ ಚೈತನ್ಯವನ್ನು ನೀಡಲಿ ಎಂಬ ಅಭೀಪ್ಸೆಯಿಂದ ಏಕಾಗ್ರತೆಯಲ್ಲಿರಬೇಕು.

ನೀವು ನಿದ್ದೆ ಮಾಡಲು ತಯಾರಿ ಮಾಡಿಕೊಳ್ಳುತ್ತಿರುವುದಕ್ಕಿಂತ ಮೊದಲು ಆ ನಿದ್ದೆ ನಿಮ್ಮ ದಣಿದ ನರಗಳಿಗೆ ವಿಶ್ರಾಂತಿಯನ್ನೀಯಲಿ, ನಿಮ್ಮ ಮಿದುಳಿಗೆ ಸ್ಥಿರತೆಯನ್ನು, ಅಚಂಚಲತೆಯನ್ನು ತಂದುಕೊಡಲಿ ಎಂಬ ಅಭೀಪ್ಸೆಯಿಂದ ಕೆಲ ನಿಮಿಷಗಳ ಕಾಲ ಏಕಾಗ್ರತೆಯಲ್ಲಿರಬೇಕು, ಅದರಿಂದಾಗಿ, ಎಚ್ಚತ್ತುಕೊಂಡ ನಂತರ, ನಿಮ್ಮ ಶ್ರೇಷ್ಠ ಶೋಧದ ಮಾರ್ಗದಲ್ಲಿ ನಿಮ್ಮ ಪ್ರಯಾಣವನ್ನು ಹೊಸ ಹುರುಪಿನಿಂದ ಪ್ರಾರಂಭಿಸುವಂತಾಗುವುದು.

ಕಾರ್ಯವನ್ನು ಕೈಕೊಳ್ಳುವುದಕ್ಕಿಂತ ಮೊದಲು, ನಿಮ್ಮ ಕ್ರಿಯೆ ಶ್ರೇಷ್ಠ ಶೋಧದತ್ತ ಹೆಜ್ಜೆ ಇರಿಸಿರುವ ನಿಮಗೆ ಸಹಾಯಕವಾಗಲಿ ಇಲ್ಲವೆ ಕನಿಷ್ಠ ಪಕ್ಷ ಅಡತಡೆ ಉಂಟುಮಾಡದಿರಲಿ ಎಂದು ನಿಮ್ಮ ಸಂಕಲ್ಪದಲ್ಲಿ ಏಕಾಗ್ರಚಿತ್ತ–ರಾಗಿರಬೇಕು.

ನೀವು ಮಾತನಾಡಿದಾಗ, ಶಬ್ದಗಳು ನಿಮ್ಮ ಮುಖದಿಂದ ಹೊರಬರುವುದಕ್ಕಿಂತ ಮೊದಲು ಅವುಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಮತ್ತು ಅತ್ಯವಶ್ಯವಾದ ಶಬ್ದಗಳನ್ನಷ್ಟೇ ಉಚ್ಚರಿಸಲು ಕೆಲ ನಿಮಿಷಗಳ ಕಾಲ ಏಕಾಗ್ರತೆಯಲ್ಲಿರಬೇಕು, ಆ ಶಬ್ದಗಳು ನಿಮ್ಮ ಶ್ರೇಷ್ಠ ಶೋಧದ ಮಾರ್ಗದಲ್ಲಿ ಯಾವ ರೀತಿಯಲ್ಲೂ ಹಾನಿಕಾರಕವಾಗಬಾರದು.



ಒಟ್ಟಿನಲ್ಲಿ ಹೇಳುವುದಾದರೆ, ನಿಮ್ಮ ಜೀವನದ ಗುರಿಯನ್ನು ಹಾಗೂ ಉದ್ದೇಶವನ್ನು ಎಂದಿಗೂ ಮರೆಯಬೇಡಿರಿ. ಶ್ರೇಷ್ಠ ಶೋಧಕ್ಕಾಗಿ ಸಂಕಲ್ಪ ನಿಮ್ಮಲ್ಲಿ ಮೇಲ್ಗಡೆಗೆ, ನೀವು ಕೈಕೊಳ್ಳುತ್ತಿರುವ, ನೀವಾಗಿರುವುದರ ಮೇಲೆ ಪ್ರಕಾಶದ ದೊಡ್ಡ ಪಕ್ಷಿಯ ಹಾಗೆ ಪ್ರಾಬಲ್ಯ ಮೆರೆಸುತ್ತ ನಿಮ್ಮ ಸತ್ತೆಯ ಎಲ್ಲ ಚಲನವಲನಗಳ ಮೇಲೆ ಯಾವಾಗಲೂ ಇರಬೇಕು.

**(CWM, 12/32–35)** **– ಶ್ರೀಮಾತೆ**

*

## ನೀವು ಕೈಕೊಳ್ಳುವ ಕಾರ್ಯ ಯೋಗದ ಭಾಗವಾಗಿರುತ್ತದೆ

ಕರ್ಮ ಯೋಗದ ಒಂದು ಭಾಗವಾಗಿರುತ್ತದೆ ಮತ್ತು ಅದು ದೈವೀ ಸಾನ್ನಿಧ್ಯ, ದೈವೀ ಪ್ರಕಾಶ ಹಾಗೂ ಸಾಮರ್ಥ್ಯಗಳು ಕೆಳಗಿಳಿದು ಬರಲು ಕರೆಕೊಡುವುದಕ್ಕೆ ಅತ್ಯಂತ ಒಳ್ಳೆಯ ಅವಕಾಶವನ್ನು ಒದಗಿಸುತ್ತದೆ, ಅದು ಶರಣಾಗತಿಯ ಕ್ಷೇತ್ರ ಹಾಗೂ ಅವಕಾಶ ಹೆಚ್ಚಾಗುವಂತೆ ಮಾಡುತ್ತದೆ.

**(SABCL, 25/200–01)** **– ಶ್ರೀ ಅರವಿಂದರು**

*

ನೀವೇನನ್ನೂ ಕೈಕೊಳ್ಳದಿದ್ದರೆ ಯಾವ ಬಗೆಯ ಪ್ರಗತಿಯನ್ನು ಸಾಧಿಸಲಾರಿರಿ. ಇಡೀ ಜೀವನ ಅನುಭವದ ಕ್ಷೇತ್ರವಾಗಿದೆ. ನಿಮ್ಮ ಪ್ರತಿಯೊಂದು ಚಲನೆ, ಪ್ರತಿಯೊಂದು ಯೋಚನೆ, ಕೈಕೊಳ್ಳುವ ಪ್ರತಿಯೊಂದು ಕಾರ್ಯ ಒಂದು ಅನುಭವ ತಂದುಕೊಡಬಹುದು ಮತ್ತು ಅದು ಅನುಭವದ ರೂಪದಲ್ಲಿರಲೇಬೇಕು. ಮತ್ತು ಸ್ವಾಭಾವಿಕವಾಗಿ ಕಾರ್ಯ, ವಿಶೇಷವಾಗಿ, ಅನುಭವದ ಕ್ಷೇತ್ರವಾಗಿರುತ್ತದೆ, ಅಲ್ಲಿ ಮನುಷ್ಯ ಆಂತರಿಕವಾಗಿ ಕೈಕೊಳ್ಳುವ ಪ್ರಯತ್ನದ ಪ್ರಗತಿಯನ್ನು ಅನ್ವಯಿಸಬೇಕು.

**(CWM, 7/287)**

ಬಾಹ್ಯ ಜೀವನ, ಪ್ರತಿದಿನದ ಚಟುವಟಿಕೆ, ಪ್ರತಿಕ್ಷಣ ಇವು ನಮ್ಮ ಧ್ಯಾನದ ಹಾಗೂ ಚಿಂತನದ ಗಳಿಗೆಗಳಿಗೆ, ಅನಿವಾರ್ಯವಾಗಿ, ಪೂರಕವಾಗಿರುವುದಿಲ್ಲವೆ? ಧ್ಯಾನ ಹಾಗೂ ಚಿಂತನದ ಪರಿಣಾಮ ಭಗವಂತನೊಡನೆ ಏಕತೆ ದೊರಕಿಸುವು–ದಾಗಿರುತ್ತದೆ – ಅದು ಅರಳುವ ಹೂವಿನ ಹಾಗಿರುತ್ತದೆ, ದೈನಂದಿನ ಚಟುವಟಿಕೆ

ಬಡಿಗಲ್ಲು ಇದ್ದ ಹಾಗೆ, ಎಲ್ಲ ಅಂಶಗಳು ಅದರ ಮೇಲೆ ಹಾದು ಹೋಗಬೇಕು, ಮರಳಿ ಬಂದು ಮತ್ತೆ ಹಾದು ಹೋಗಬೇಕು, ಅದರಿಂದಾಗಿ ಅವು ಪರಿಶುದ್ಧಗೊಳ್ಳುವವು, ಸೂಕ್ಷ್ಮವಾಗುವವು, ನಮ್ಯವಾಗುವವು, ಅವುಗಳಿಗೆ ಧ್ಯಾನ ಕೊಡುವ ಜ್ಞಾನೋದಯಕ್ಕೆ ಅವು ಪಕ್ವವಾಗಿರುವವು. ಬಹಳ ವಿನಮ್ರತೆಯಿಂದ ಅನೇಕ ಅಂಶಗಳಲ್ಲಿ ಕೆಲವನ್ನು ನಾದಲು, ಪರಿಶುದ್ಧಗೊಳಿಸಲು ನಮಗೆ ಕೊಡಲಾದ ಎಲ್ಲ ಚಿಕ್ಕಪುಟ್ಟ ಅವಕಾಶಗಳಿಂದ ಪ್ರಯೋಜನ ಪಡೆಯಬೇಕು, ಆ ಅಂಶಗಳನ್ನು ನಮ್ಯ, ಅವೈಯಕ್ತಿಕವಾದವುಗಳನ್ನಾಗಿ ಮಾಡಬೇಕು. ಅವುಗಳಿಗೆ ತಮ್ಮನ್ನು ಮರೆತು ಬಿಡುವುದನ್ನು, ತ್ಯಾಗ, ಭಕ್ತಿ, ಕರುಣೆ, ಸೌಮ್ಯವಾಗಿರುವಿಕೆ ಇವುಗಳನ್ನು ಹೊಂದಿರುವುದನ್ನು ಕಲಿಸಿಕೊಡಬೇಕು. ಅವು ಸತ್ತೆಯ ನೆಲೆ ನಿರ್ದೇಶನವನ್ನು ಬದಲು ಮಾಡುವವು, ನಿಶ್ಚಿತವಾಗಿ ಅದನ್ನು ನೇರವಾದ ಮಾರ್ಗದ ಮೇಲಿರಿಸುವವು, ಆದರೆ, ನಿಜವಾಗಿ, ಗುರಿಯನ್ನು ಸಿದ್ಧಿಸಿಕೊಳ್ಳಬೇಕಾದರೆ ಪ್ರತಿಯೊಂದು ಬಗೆಯ, ಪ್ರತಿಯೊಂದು ಕ್ಷಣದ ಅಸಂಖ್ಯಾತ ಅನುಭವಗಳ ಆವಶ್ಯಕತೆಯಿಂದ ಮನುಷ್ಯ ತಪ್ಪಿಸಿಕೊಳ್ಳಲಾರನು.

**(CWM, 1/6–7)** – ಶ್ರೀಮಾತೆ

*

## ಸಾಧನೆಗೆ ಸಹಾಯಕವೆಂದು ಪುಸ್ತಕಗಳನ್ನು ಓದುವುದು

ಮಾನಸಿಕ ಹಂತದ ಮೊದಲ ದಿನಗಳಲ್ಲಿ ಒಳ್ಳೆಯ ಪುಸ್ತಕಗಳನ್ನು ಓದುವುದು ಸಹಾಯಕವಾಗಬಹುದು – ಆ ಪುಸ್ತಕಗಳು ಮನಸ್ಸನ್ನು ತಯಾರು ಮಾಡುತ್ತವೆ, ಅದನ್ನು ಸರಿಯಾದ ವಾತಾವರಣದಲ್ಲಿ ಇರಿಸುತ್ತವೆ, ಮಾನಸಿಕ ಸ್ತರದಲ್ಲಿ ಸಿದ್ಧಿಯ ಕೆಲವು ಮಿನುಗು ನೋಟಗಳನ್ನು ತರುತ್ತವೆ. ನಂತರ ಅವುಗಳ ಉಪಯೋಗ ಕುಗ್ಗುತ್ತದೆ, – ನೀವು ಪ್ರತಿಯೊಂದು ಜ್ಞಾನವನ್ನು ಮತ್ತು ಅನುಭವವನ್ನು ನಿಮ್ಮಲ್ಲಿಯೇ ಕಂಡುಕೊಳ್ಳಬೇಕು.

*

ಯೋಗಕ್ಕೆ ಸಹಾಯಕವಾಗುವಂತಹದನ್ನು, ಕಾರ್ಯಕ್ಕೆ ಉಪಯುಕ್ತವಾಗು–ವಂತಹದನ್ನು ಇಲ್ಲವೆ ದೈವೀ ಉದ್ದೇಶಕ್ಕಾಗಿ ಕ್ಷಮತೆಗಳನ್ನು ಅಭಿವೃದ್ಧಿಪಡಿಸಲು ಸಹಾಯಕವಾಗುವಂತಹದನ್ನು ಓದಬೇಕು.



ನಿರುಪಯುಕ್ತ ವಿಷಯವಿರುವುದನ್ನು, ಕೇವಲ ಮನೋರಂಜನೆ ಒದಗಿಸು–ವುದನ್ನು, ತಪ್ಪದೆ ಮದ್ಯಪಾನ ಮಾಡುವ ಸ್ವರೂಪದ, ಹಗುರಾಸಕ್ತಿಯ ಬೌದ್ಧಿಕ ಕುತೂಹಲಕ್ಕಾಗಿ ಇರುವುದನ್ನು ಓದಬಾರದು.

**(SABCL, 24/127)**

ಓದುವ, ಅಭ್ಯಾಸಮಾಡುವ ಭಾವೋದ್ರೇಕ ಮನಸ್ಸನ್ನು ಹಿಡಿದುಕೊಳ್ಳುತ್ತದೆ, ಅದು ಹಾಗಿರುತ್ತದೆ; ಮನುಷ್ಯ ಅದನ್ನೇ ಕೈಕೊಳ್ಳುತ್ತ ತನ್ನ ಸಮಯವನ್ನು ಕಳೆಯಲು ಬಯಸುತ್ತಾನೆ. ಅದು ತನಗೆ ತೃಪ್ತಿ ತಂದುಕೊಳ್ಳುವ ಶಕ್ತಿಯಾಗಿರುತ್ತದೆ – ಇತರ ಶಕ್ತಿಗಳೂ ಹಾಗಿರುತ್ತವೆ – ಮತ್ತು ಆ ಉದ್ದೇಶಕ್ಕಾಗಿ ಪ್ರಜ್ಞೆಯ ಮೇಲೆ ಆ ಶಕ್ತಿ ಹಿಡಿತ ಸಾಧಿಸುತ್ತದೆ. ಮನುಷ್ಯ ಇಂತಹ ಶಕ್ತಿಗಳನ್ನು ಅವುಗಳ ಹಿಡಿತಕ್ಕೊಳಗಾಗದೆ ಉಪಯೋಗಿಸಬೇಕು. ಅದಕ್ಕಾಗಿ ಪ್ರಕೃತಿಯಿಂದ ಬರುವ ಶಕ್ತಿಗಳನ್ನು ನಿಯಂತ್ರಿಸುವುದಕ್ಕಾಗಿ ಕೇಂದ್ರಸತ್ತೆ ಅಲ್ಲಿರಬೇಕಾಗುತ್ತದೆ, ಅದು ತನಗಾಗಿ ಯಾವ ಆಯ್ಕೆಯನ್ನು ಒಪ್ಪಿಕೊಳ್ಳಬೇಕು, ಹೇಗೆ ಉಪಯೋಗಿಸಬೇಕು, ಅವುಗಳ ಕ್ರಿಯೆಗಳನ್ನು ಹೇಗೆ ವ್ಯವಸ್ಥಿತಗೊಳಿಸಬೇಕು ಎಂಬುದನ್ನು ನಿರ್ಧರಿಸುತ್ತದೆ. ಹಾಗಿರದಿದ್ದರೆ ಪ್ರತಿಯೊಂದು ಶ್ರೇಷ್ಠ ಶಕ್ತಿಯು ವ್ಯಕ್ತಿವಿಶಿಷ್ಟತೆ (ವಿದ್ಯಾರ್ಥಿ, ಸಾಮಾಜಿಕ ಮನುಷ್ಯ ಕಾಮಾಸಕ್ತ ಮನುಷ್ಯ, ಯೋಧ)ಯ ಒಂದು ಭಾಗವನ್ನು ಹಿಡಿತದಲ್ಲಿಟ್ಟುಕೊಳ್ಳುತ್ತದೆ, ಉಪಯೋಗಿಸುತ್ತದೆ, ಮುಂದೂಡುತ್ತದೆ, ಅದರ ಬದಲಾಗಿ ಆ ವ್ಯಕ್ತಿವಿಶಿಷ್ಟತೆ ಆ ಶಕ್ತಿಯನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು ಮತ್ತು ಉಪಯೋಗಿಸಬೇಕು.

**(SABCL, 24:1274–75)** – ಶ್ರೀ ಅರವಿಂದರು

*

ಮನುಷ್ಯ ಶ್ರೀ ಅರವಿಂದರ ಪುಸ್ತಕಗಳನ್ನು ಕಾಳಜಿಪೂರ್ವಕ ಓದಿದರೆ ಅವನು ತಿಳಿದುಕೊಳ್ಳಲು ಬಯಸುವ ಎಲ್ಲದಕ್ಕೆ ಉತ್ತರ ದೊರಕಿಸುತ್ತಾನೆ.

**(CWM, 13/224)** – ಶ್ರೀಮಾತೆ

*

## ನೀವು ತಿಳಿದುಕೊಂಡದ್ದನ್ನು ಆಚರಣೆಯಲ್ಲಿ ತರಬೇಕು

ಮುದ್ರಣಾಲಯಗಳು, ಪುಸ್ತಕಗಳು ಇರುವುದಕ್ಕಿಂತ ಮೊದಲು ಏನಾಗುತ್ತಿತ್ತೆಂದರೆ ಕೇವಲ ಗುರು ಇಲ್ಲವೆ ದೀಕ್ಷೆಪಡೆದವನು ಜ್ಞಾನವನ್ನು ಪಡೆದಿರುತ್ತಿದ್ದನು ಮತ್ತು ಅದನ್ನು ಹೊಂದಲು ಯೋಗ್ಯರಾದವರು ಎಂದು ಅವನು ಭಾವಿಸಿದವರಿಗೆ ಆ ಜ್ಞಾನವನ್ನು ಕೊಡುತ್ತಿದ್ದನು. ಮತ್ತು ಅವನಿಗೆ ಸಾಮಾನ್ಯವಾಗಿ, 'ಅದನ್ನು ಹೊಂದಲು ಯೋಗ್ಯರಾದವರು' ಎಂಬುದರ ಅರ್ಥ ಅದನ್ನು ಕಲಿತುಕೊಂಡವರು ಆಚರಣೆಯಲ್ಲಿ ತರುವಂತಹರಾಗಿರಬೇಕು ಎಂದಿತ್ತು. ನೀವು ಅದನ್ನು ಆಚರಣೆಯಲ್ಲಿ ತಂದಾಗ ಅವನು ಇನ್ನೊಂದು ಜ್ಞಾನವನ್ನು ಕೊಡಲು ಒಪ್ಪಿಕೊಳ್ಳುತ್ತಿದ್ದನು.

ಈಗ ವಿಷಯಗಳು ಬಹಳ ಭಿನ್ನ ರೀತಿಯಲ್ಲಿ ಸಂಭವಿಸುತ್ತವೆ. ಪ್ರತಿಯೊಬ್ಬ, ಯಾರು ಬೇಕಾದರೂ ಪುಸ್ತಕವನ್ನು ಹೊಂದಬಲ್ಲ, ಅದನ್ನು ಆದ್ಯಂತವಾಗಿ ಓದಬಲ್ಲ ಮತ್ತು ಅವನು ಅದರಲ್ಲಿದ್ದ ಜ್ಞಾನವನ್ನು ತನ್ನಿಚ್ಛೆಯ ಪ್ರಕಾರ ಆಚರಣೆಯಲ್ಲಿ ತರಬಲ್ಲ ಇಲ್ಲವೆ ಹಾಗೆಯೇ ಬಿಟ್ಟುಕೊಡಬಲ್ಲ. ಇದೆಲ್ಲವೂ ಸರಿಯಾದದ್ದೇ, ಆದರೆ ಅದು ಕೆಲವೊಂದು ಮನಸ್ಸುಗಳಲ್ಲಿ ಒಂದು ಬಗೆಯ ಗೊಂದಲವನ್ನುಂಟು ಮಾಡುತ್ತದೆ, ಮತ್ತು ಹಲವಾರು ಪುಸ್ತಕಗಳನ್ನು ಓದಿದ ಜನರು ಅದು ಸಾಕಾಗುತ್ತದೆ ಮತ್ತು ಪವಾಡಸದೃಶ ವಿಷಯಗಳು ತಮ್ಮ ಜೀವನದಲ್ಲಿ ಸಂಭವಿಸುತ್ತವೆ ಮತ್ತು ತಾವು ಆಚರಣೆಯಲ್ಲಿ ತರುವ ಆವಶ್ಯಕತೆಯಿಲ್ಲ ಎಂದು ಯೋಚಿಸುತ್ತಾರೆ. ಹಾಗಾಗಿ ಅವರು ತಾಳ್ಮೆ ಕಳೆದುಕೊಂಡು ಹೇಳುತ್ತಾರೆ: "ಇದು ಹೇಗಾಯಿತು, ನಾನಿದೆಲ್ಲವನ್ನೂ ಓದಿದ್ದೇನೆ, ಆದಾಗ್ಯೂ ನಾನು ಅದೇ ಹಳೆಯ ಮನುಷ್ಯನಾಗಿದ್ದೇನೆ, ಅದೇ ಬಗೆಯ ತೊಂದರೆಗಳಿವೆ, ನನಗಾವ ಸಿದ್ಧಿಯೂ ದೊರಕಿಲ್ಲ." ಈ ಬಗೆಯ ಟೀಕೆಯ ಮಾತುಗಳನ್ನು ನಾನು ಬಹಳ ಸಲ ಕೇಳಿದ್ದೇನೆ.

ಅವರು ಕೇವಲ ಒಂದು ವಿಷಯವನ್ನು ಮರೆತಿರುತ್ತಾರೆ. ಅದೆಂದರೆ ಬೌದ್ಧಿಕ, ಮಾನಸಿಕ ಜ್ಞಾನವನ್ನು ಅವರು ಅದಕ್ಕೆ ಯೋಗ್ಯರಾಗುವುದಕ್ಕಿಂತ ಮೊದಲೇ ಎಂದರೆ ಅದನ್ನು ಆಚರಣೆಯನ್ನು ತರುವುದನ್ನು ಮರೆತು ದೊರಕಿಸಿರುತ್ತಾರೆ, ಸ್ವಾಭಾವಿಕವಾಗಿ ಅವರ ಪ್ರಜ್ಞೆಯ ಸ್ಥಿತಿ ಮತ್ತು ವಿಚಾರಗಳು ಇವುಗಳ ನಡುವೆ



ಹೊಂದಾಣಿಕೆ ಇರುವುದಿಲ್ಲ. ಅವರು ದೀರ್ಘವಾಗಿ ಮಾತನಾಡುವಂತೆ ಮಾಡುವ ಜ್ಞಾನ ಆಚರಣೆಗೆ ಒಳಗಾಗದೆ ಇರುತ್ತದೆ.

ಹಾಗಾಗಿ ನೀವು ತಾಳ್ಮೆ ಕಳೆದುಕೊಳ್ಳುವುದು ಬೇಡ, ಜ್ಞಾನವನ್ನು ನಿಜವಾಗಿ ಪಡೆಯಬೇಕಾದರೆ, ಅದು ಯಾವುದೇ ಬಗೆಯ ಜ್ಞಾನವಾಗಿರಲಿ, ಅದನ್ನು ಆಚರಣೆಯಲ್ಲಿ ತರಬೇಕು, ಎಂದರೆ ಜ್ಞಾನವನ್ನು ಕ್ರಿಯೆಯಲ್ಲಿ ಅಭಿವ್ಯಕ್ತಪಡಿಸಲು ಸಾಧ್ಯವಾಗುವಂತೆ ನಿಮ್ಮ ಸ್ವಭಾವದ ಮೇಲೆ ಪ್ರಭುತ್ವಪಡೆಯಬೇಕು, ಎಂದು ನಾನಿಲ್ಲಿ ಹೇಳುತ್ತಿದ್ದೇನೆ.

*

ಏನನ್ನು ಕೈಕೊಳ್ಳಬೇಕು, ಏನನ್ನು ಕೈಕೊಳ್ಳಬಾರದು ಎಂಬುದರ ಬಗ್ಗೆ ನೀನು ಈಗಾಗಲೆ ಬಹಳಷ್ಟು ಪ್ರಜ್ಞೆಯುಳ್ಳವನಾಗಿರುವಿ ಎಂದು ತೋರಿಬರುತ್ತದೆ, ಆದರೆ ನಿನ್ನೊಂದಿಗೆ ತೊಂದರೆ ಅದನ್ನು ಆಚರಣೆಯಲ್ಲಿ ತರುವುದರಲ್ಲಿ ಪ್ರಾರಂಭವಾಗುತ್ತದೆ. ನೀನು ಹೆಚ್ಚಿನ ಜ್ಞಾನವನ್ನು ಬೇಡಬೇಡ, ಆದರೆ ನೀನು ಈಗಾಗಲೆ ತಿಳಿದಿರುವುದರಲ್ಲಿ ಅಲ್ಪ ಭಾಗವನ್ನು ನಿಷ್ಕಾಪಟ್ಯದಿಂದ, ಆತ್ಮಸಾಕ್ಷಿಯಿಂದ ಅನ್ವಯಿಸಲು ಬಲ ಹಾಗೂ ಧೈರ್ಯಗಳನ್ನು ಬೇಡಬೇಕು.

*

ಧಮ್ಮಪದದಲ್ಲಿಯ "ಸಹಸ್ರಾರು" (The thousands in Dhammapada) ಗ್ರಂಥದಲ್ಲಿ ಪ್ರಾರಂಭದ ಪಠ್ಯ ಹೇಳುವುದು ಹೀಗಿದೆ: "ನಿಮಗೆ ಶಾಂತಿಯನ್ನು ತಂದುಕೊಡುವ ಒಂದು ಶಬ್ದ, ಅರ್ಥರಹಿತ ಸಾವಿರಾರು ಶಬ್ದಗಳಿಗಿಂತ ಹೆಚ್ಚು ಯೋಗ್ಯವಾಗಿದೆ." – ಇದನ್ನು ಯಾರು ಬೇಕಾದರೂ ಅರ್ಥಮಾಡಿಕೊಳ್ಳಬಲ್ಲರು – ಆದರೆ ಹಾಗೆಯೇ "ನಿಮಗೆ ಶಾಂತಿ ತಂದುಕೊಡುವ ಒಂದು ಶಬ್ದ ನಿಮ್ಮ ಮಾನಸಿಕ ಚಟುವಟಿಕೆಗೆ ತೃಪ್ತಿ ತಂದುಕೊಡುವ, ಆದರೆ ನಿಮ್ಮ ಸತ್ತೆಯ ಮೇಲೆ ಯಾವ ಮನಶ್ಶಾಸ್ತ್ರೀಯ ಪರಿಣಾಮವನ್ನೂ ಬೀರದ ಸಹಸ್ರಾರು ಶಬ್ದಗಳಿಗಿಂತಲೂ ಹೆಚ್ಚು ಯೋಗ್ಯವಾದದ್ದು" ಎಂದು ಕೂಡ ಹೇಳಲಾಗಿದೆ.

ನಿಮ್ಮ ಅಪ್ರಜ್ಞೆ ಹಾಗೂ ಜಡತ್ವಗಳ ಮೇಲೆ ಜಯ ಗಳಿಸುವ ಸಾಮರ್ಥ್ಯವನ್ನು ಕೊಡುವ ಏನೋ ಒಂದನ್ನು ನೀವು ಕಂಡುಕೊಂಡಾಗ, ನೀವು ಕೊನೆಯ

ಪರಿಣಾಮದತ್ತ ತಲುಪುವವರೆಗೆ, ಆ ಶಬ್ದ ಇಲ್ಲವೆ ಪರಿಚ್ಛೇದ ಉತ್ಪಾದಿಸಿದ ಎಲ್ಲ ಪರಿಣಾಮಗಳನ್ನು ಉಪಯೋಗಿಸಬೇಕು, ನಂತರ ಬೇರೆ ಶಬ್ದವನ್ನು ಅರಸಬೇಕು.

ತಲೆಯಲ್ಲಿ ಅಸಂಖ್ಯಾತ ವಿಚಾರಗಳನ್ನು ಸಂಗ್ರಹಿಸಲು ಪ್ರಯತ್ನ ಮಾಡುವುದರ ಬದಲಾಗಿ ಮನುಷ್ಯ ಹೇಗೋ ಸಂಧಿಸಿದ ವಿಚಾರವೊಂದರಿಂದ ಉದ್ಭವಿಸಿದ ಪರಿಣಾಮದ ಆಚರಣೆಯನ್ನು ಕೊನೆಯವರೆಗೆ ಬೆಂಬತ್ತುವುದು ಬಹಳ ಮಹತ್ವದ್ದು. ಎಲ್ಲ ವಿಚಾರಗಳು ತಮ್ಮದೇ ಕಾಲದಲ್ಲಿ, ಅವುಗಳಿಗೆ ಸರಿಯಾದ ಸಮಯದಲ್ಲಿ, ಒಳಬರಲು ಅನುವು ಮಾಡಿಕೊಟ್ಟರೆ ಬಹಳ ಉಪಯುಕ್ತ–ವಾಗಬಹುದು. ವಿಶೇಷವಾಗಿ, ನೀವು ಆಂತರಿಕ ಜಯವನ್ನು ದೊರಕಿಸುವಂತೆ ಮಾಡುವ ಕ್ಷಮತೆಯುಳ್ಳ ಕ್ರಿಯಾಶಕ್ತಿಯುಳ್ಳ ವಿಚಾರಗಳಲ್ಲಿ ಒಂದರ ಪರಿಣಾಮವನ್ನು ನೀವು ಕೊನೆಯ ವರೆಗೆ ಕೊಂಡೊಯ್ದರೆ, ಅದು ಬಹಳ ಉಪಯುಕ್ತವಾಗುವುದು. ಎಂದರೆ ಕೇವಲ ಸಿದ್ಧಾಂತ ರೂಪದಲ್ಲಿ ಉಳಿದುಕೊಳ್ಳುವ ಜ್ಞಾನವನ್ನು ಸಂಗ್ರಹಿಸುವುದನ್ನು ಬಯಸದೆ, ಮನುಷ್ಯ ತಾನು ತಿಳಿದುಕೊಂಡದ್ದನ್ನು ಆಚರಣೆಯಲ್ಲಿ ತರುವುದು ಮುಖ್ಯವಾದ ಗುರಿಯೆಂದು ಭಾವಿಸಬೇಕು.

*

ಸಿದ್ಧಾಂತಗಳು, ಬೋಧನೆಗಳು ಮತ್ತು ಒಳ್ಳೆಯ ನಿರ್ಧಾರಗಳು ಇವೆಲ್ಲ ಇರುವ ಸಮುದ್ರಕ್ಕಿಂತ ಆಚರಣೆಯ ಒಂದು ಹನಿ ಹೆಚ್ಚು ಒಳ್ಳೆಯದು.

**(CWM, 9/67, 71; 3/229, 14/208)** **– ಶ್ರೀಮಾತೆ**

*



# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಾಲೆಯಲ್ಲಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು. ವಿದ್ಯಾರ್ಥಿಗಳು ತಮ್ಮ ಶಿಕ್ಷಕರ ಗೌರವಾರ್ಥ ಹಲವು ಮನೋರಂಜನ ಕಾರ್ಯಕ್ರಮಗಳನ್ನು ಚೊಕ್ಕವಾಗಿ ನಡೆಸಿಕೊಟ್ಟರು. ನಂತರ ಶಾಲಾ ಆಡಳಿತ ಮಂಡಳಿಯ ವತಿಯಿಂದ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಯನ್ನು ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀಯುತ ಅಜಿತ್ ಸಬ್ನೀಸ್ ಅಧ್ಯಕ್ಷತೆಯನ್ನು ವಹಿಸಿದ್ದರು. ಶಿಕ್ಷಕ ವೃಂದದವರು ತಮ್ಮ ಶಾಲಾ ಅನುಭವಗಳನ್ನು ಹಂಚಿಕೊಂಡರು. ಅಧ್ಯಕ್ಷರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಇಂದಿನ ಶಿಕ್ಷಕರ ಒತ್ತಡ, ಕರ್ತವ್ಯಗಳ ಕುರಿತು ಮಾತನಾಡಿದರು. ಶ್ರೀಮತಿ ಪ್ರತಿಭಾ ಸಬ್ನೀಸ್ ಕಾರ್ಯಕ್ರಮವನ್ನು ನಿರ್ವಹಿಸಿದರು.

ಸೆಪ್ಟಂಬರ್ ತಿಂಗಳು ಪ್ರತಿ ಭಾನುವಾರದಂದು ಬೆಳಿಗ್ಗೆ 10.00 ರಿಂದ 12.30 ರವರೆಗೆ ಶ್ರೀಯುತರಾದ ಅಕ್ಷರಬ್ರಹ್ಮ ಶೇಷಾದ್ರಿ ಎಸ್. ಕೈಪರವರಿಂದ "Divine View on Sanatana Dharma in Absolute (Science)" ಎಂಬ ವಿಷಯದ ಬಗ್ಗೆ ಸರಣಿ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿರುತ್ತದೆ.

ದಿನಾಂಕ 12–9–2014 ಶುಕ್ರವಾರ, ಸಾಯಂಕಾಲ 5.30 ರಿಂದ 6.30 ಗಂಟೆಯ ವರೆಗೆ "Nature Cure for Common Ailments" ಎಂಬ ವಿಷಯದ ಬಗ್ಗೆ ಡಾ॥ ಗುರುಪಾದಪ್ಪ ಕಜಗಾರ್‌ರವರ (Nature Cure Hospital) ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಇತರರು ಹಾಜರಿದ್ದರು.



*A charm and greatness locked in every hour*
*Awakes the joy which sleeps*
*in all things made.*

- Sri Aurobindo

**RNI No. 22511/1971**
No. of Pages **56 + 4 (Cov. Page)**
KAR Reg No : CPMG/KA/BGS/368/2012-2014
Permitted to Post 10th of Every Month. Reg. Valid till : 31-12-2014
Licensed to Post at MBC, Bangalore GPO, Bangalore - 560 001

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bangalore - 560 078. Phone : 080 - 2244 9882.